ರೂ. 20/-

# ಕನ್ನಡ ಲಿಬರೇಶನ್

ಆಗಸ್ಟ್ 2022ರ ಸಂಚಿಕೆ

ಸಿಪಿಐ (ಎಂಎಲ್) ಲಿಬರೇಶನ್ ಮುಖವಾಣಿ



## ಪೌರಕಾರ್ಮಿಕರ ನಡೆ,
## ಖಾಯಮಾತಿ ಕಡೆ!

ಪೌರಕಾರ್ಮಿಕರ ಐಕ್ಯತೆ ಚಿರಾಯುವಾಗಲಿ! ಜೈ ಭೀಮ್! ಇಂಕಿಲಾಬ್ ಜಿಂದಾಬಾದ್!

# ನಮ್ಮ ಕಾರ್ಯಕ್ರಮಗಳು




ಸಿಪಿಐಎಂಎಲ್ ಲಿಬರೇಷನ್ ಪಕ್ಷದಿಂದ ಕಾಮ್ರೇಡ್ ಚಾರು ಮಜುಂದಾರ್ ಹುತಾತ್ಮರಾದ 50ನೇ ವರ್ಷದ ಸ್ಮರಣೆ ದಿನ ಬೆಂಗಳೂರು, ಮೈಸೂರು, ರಾಯಚೂರು, ಕೋಲಾರ ಮತ್ತು ವಿಜಯನಗರದ ಪಕ್ಷದ ಕಛೇರಿಯಲ್ಲಿ ಆಚರಿಸಲಾಯಿತು







ದಿನಾಂಕ 01.08.2022ರಂದು ಮೈಸೂರು ಮತ್ತು ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಎದುರು ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕ ಸಂಘದ (AIARLA) ವತಿಯಿಂದ ಮೂಲಭೂತ ಸೌಕರ್ಯಗಳಾದ ಉಚಿತ ಶಿಕ್ಷಣ, ಆರೋಗ್ಯ, ಮತ್ತು ಉದ್ಯೋಗ ಖಾತ್ರಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವಂತೆ ಆಗ್ರಹಿಸಲಾಯಿತು

# ಕನ್ನಡ ಲಿಬರೇಶನ್

ಆಗಸ್ಟ್ 2022ರ ಸಂಚಿಕೆ


## ಪರಿವಿಡಿ


| | |
|---|---|
| ಕಾರ್ಪೋರೇಟ್ ಹಿಂದುತ್ವ ರಾಜಕಾರಣದ ಪ್ರಯೋಗ ಶಾಲೆಯಾಗಿ ಕರ್ನಾಟಕ | 3 |
| ದ್ವೇಷವು ತನ್ನನ್ನು ಸೃಷ್ಟಿ ಮಾಡಿದವನನ್ನೇ ನಾಶ ಮಾಡುತ್ತದೆ | 4 |
| ಕ್ರಾಂತಿಕಾರಿ ಕಾರ್ಲ್ ಮಾರ್ಕ್ಸ್ ಅವರ 204ನೇ ಜಯಂತಿ | 5 |
| ಬುಲ್ಡೋಜ್ ಮಾಡಲಾದ ನ್ಯಾಯ | 8 |
| ಹಾಲಿ ಪೌರಕಾರ್ಮಿಕರಿಗೆ ನೇಮಕಾತಿಬೇಡ, ಖಾಯಂಗೊಳಿಸಿ! | 9 |
| ಮಹಾನ್ ನಕ್ಸಲ್ಬರಿ ದಂಗೆಯ 55 ನೇ ವಾರ್ಷಿಕೋತ್ಸವದಂದು | 13 |
| ಮಾರ್ಕ್ಸ್‌ವಾದ ಎಂದರೇನು? | 14 |
| ಚಾರು ಮಜುಂದಾರ್ ಅವರ ಜೀವನದ ಮುಖ್ಯ ಘಟ್ಟಗಳು ಮತ್ತು ನಾಡ ನಡುವಿನಿಂದ ಪದ್ಯ | 15 |
| ನಮ್ಮ ಸ್ವಾತಂತ್ರ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರ | 16 |
| ಚಾರು ಮಜೂಂದಾರ್ 50ನೆಯ ವರ್ಷದ ಸ್ಮರಣೆಯ ದಿನ | 23 |
| ನಮ್ಮ ಕಾರ್ಯಕ್ರಮಗಳು | 2 ಮತ್ತು 24 |


**ಮುಖಪುಟ ಚಿತ್ರ: ಟ್ವಿಟ್ಟರ್ - @NabiyaKhan11**


**ಸಂಪಾದಕೀಯ ಮಂಡಳಿ**

**ಕ್ಲಿಫ್ಟನ್ ಡಿ' ರೋಜಾರಿಯೋ**
**ಡಾ । ವಿ. ಲಕ್ಷ್ಮಿ ನಾರಾಯಣ**
**ನಾ. ದಿವಾಕರ್**
**ರತಿ ರಾವ್**
**ಪಿ.ಆರ್.ಎಸ್ ಮಣಿ**
**ಲೇಖಾ ಅಡವಿ**



**ಸಂಪಾದಕೀಯ ಇ-ಮೇಲ್:**
**kannadaliberation@gmail.com**


# ಕಾರ್ಪೋರೇಟ್ ಹಿಂದುತ್ವ ರಾಜಕಾರಣದ ಪ್ರಯೋಗ ಶಾಲೆಯಾಗಿ ಕರ್ನಾಟಕ

ಕೆಲವೂ ದಶಕಗಳ ಹಿಂದೆ ಕರ್ನಾಟಕ ಭಾರತದ ರಾಜಕೀಯ ಭೂಪಟದಲ್ಲಿ ಒಂದು ವಿಶಿಷ್ಟ ಸ್ಥಾನ ಹೊಂದಿತ್ತು. ಉತ್ತರ ಭಾರತದ ಕೆಲವು ರಾಜ್ಯಗಳಿಗೆ ಹೋಲಿಸುವಾಗ ಕರ್ನಾಟಕ ಒಂದು ಮಾದರಿ ರಾಜ್ಯವಾಗಿ ಕಂಡುಬರುತ್ತಿತ್ತು. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೊಳಿಸಿದ್ದು ಒಂದು ಕಾರಣವಾದರೆ, ಮೌಲ್ಯಾಧಾರಿತ ರಾಜಕಾರಣಕ್ಕೆ ರಾಜ್ಯ ಹೆಸರುವಾಸಿಯಾಗಿತ್ತು. ಮತ್ತೊಂದೆಡೆ ಜಾತಿ ದೌರ್ಜನ್ಯ, ಅಸ್ಪೃಶ್ಯತೆ, ಕೋಮು ಸಾಮರಸ್ಯ ಮತ್ತು ಧಾರ್ಮಿಕ ಸಹಿಷ್ಣುತೆಯ ಪ್ರಶ್ನೆ ಎದುರಾದಾಗ ಬಿಹಾರ, ಉತ್ತರಪ್ರದೇಶ, ಗುಜರಾತ್ ಮತ್ತು ಆಂಧ್ರಪ್ರದೇಶಕ್ಕೆ ಹೋಲಿಸುವಾಗ ಕರ್ನಾಟಕ ಭಿನ್ನವಾಗಿ ಕಾಣುತ್ತಿತ್ತು. ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸಂದೇಶ ಮತ್ತು ಸರ್ವಜನಾಂಗದ ಶಾಂತಿಯ ತೋಟ ಎಂಬ ಕವಿವಾಣಿ ರಾಜ್ಯದ ಜನತೆಗೆ ಆಪ್ತ ಎನಿಸುವಂತಿತ್ತು.

ಆದರೆ ಕಳೆದ ಒಂದು ದಶಕದ ರಾಜಕಾರಣದಲ್ಲಿ ಎಲ್ಲವೂ ಪಲ್ಲಟಗೊಂಡಿದೆ. ದ್ವೇಷ ರಾಜಕಾರಣದ ರಾಷ್ಟ್ರೀಕರಣ ಪ್ರಕ್ರಿಯೆಗೆ ಕರ್ನಾಟಕವೇ ಮುಂಚೂಣಿ ನಾಯಕತ್ವ ವಹಿಸುತ್ತಿದ್ದು, ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಿಗೆ ಸೀಮಿತವಾಗಿದ್ದ ಕೋಮುವಾದ ಮತ್ತು ಮತಾಂಧತೆಯ ದ್ವೇಷ ಬೀಜಗಳು ಈಗ ರಾಜ್ಯವ್ಯಾಪಿಯಾಗಿ ಹರಡಿದೆ. ಬೀದರ್‌ನಿಂದ ಕೋಲಾರದವರೆಗೆ ಬಿತ್ತಲಾಗುತ್ತಿರುವ ಇಸ್ಲಾಂ ದ್ವೇಷದ ಬೀಜಗಳು ಮತ್ತು ನೆಡಲಾಗುತ್ತಿರುವ ಮತಾಂಧತೆಯ ಸಸಿಗಳು ಕ್ರಮೇಣ ಚಿಗುರಲಾರಂಭಿಸಿದ್ದು, ಪಶ್ಚಿಮ ಘಟ್ಟಗಳ ಹರಿದ್ವರ್ಣಕ್ಕೆ ಪ್ರಸಿದ್ದಿ ಪಡೆದಿದ್ದ ಕರ್ನಾಟಕ ಇಂದು ಮತಾಂಧತೆ, ಕೋಮು ಸಂಘರ್ಷ, ಜಾತಿ ದೌರ್ಜನ್ಯಗಳ ಬೃಹತ್ ವೃಕ್ಷ ಸಂಪತ್ತಿಗೆ ಪ್ರಸಿದ್ಧಿ ಪಡೆಯುತ್ತಿದೆ.

ಕಳೆದ ಒಂದು ವರ್ಷದಲ್ಲಿ ಕರ್ನಾಟಕದಲ್ಲಿ ಕಂಡಿರುವ ಬೆಳವಣಿಗೆಗಳು 1980ರ ಬಿಹಾರವನ್ನೂ ನಾಚಿಸುವಂತಿದೆ. ಕರಾವಳಿಯಲ್ಲಿ ಕೋಮು ಸಾಮರಸ್ಯ ಕದಡುತ್ತಿದ್ದ ಸಂದರ್ಭದಲ್ಲೇ ಅಧಿಕಾರ ವಹಿಸಿಕೊಂಡ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು, ಕರಾವಳಿ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಹೆಚ್ಚಾಗುತ್ತಿದ್ದಾಗ, ಕೆಲವು ಹಿಂದೂ ಮತಾಂಧ ಸಂಘಟನೆಗಳು ತಮ್ಮ ಕಾರ್ಯಕರ್ತರಿಗೆ ಮಾರಕಾಸ್ತ್ರಗಳನ್ನು ಹಂಚುತ್ತಿರುವುದು ವರದಿಯಾಗುತ್ತಿದ್ದಾಗ ಕೂಡಲೇ ಕಾನೂನು ಸುವ್ಯವಸ್ಥೆ ಕಾಪಾಡುವ ಕ್ರಮ ಕೈಗೊಳ್ಳಬೇಕಿತ್ತು. ಹೆಚ್ಚುತ್ತಿದ್ದ ಕೋಮು ದ್ವೇಷ ಮತ್ತು ಸಂಘರ್ಷವನ್ನು ತಡೆಗಟ್ಟುವ ನಿಟ್ಟಿನಲ್ಲಿ, ಮತಾಂಧ ಸಂಘಟನೆಗಳನ್ನು ನಿಯಂತ್ರಿಸಲು ಮುಂದಾಗಬೇಕಿತ್ತು. ಆದರೆ ತಮ್ಮ ಕ್ರಿಯೆ ಪ್ರತಿಕ್ರಿಯೆ ಪ್ರತಿಕ್ರಿಯೆಯ ಮೂಲಕ, ಮತಾಂಧ ಶಕ್ತಿಗಳಿಗೆ ಮುಕ್ತ ಸ್ವಾತಂತ್ರ್ಯ ನೀಡಿದ ರಾಜ್ಯ ಸರ್ಕಾರ ಕಳೆದ ಆರು ತಿಂಗಳಿನಿಂದಲೂ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಪ್ರಕ್ಷುಬ್ಧತೆಗೊಳಗಾಗಿದೆ.

ಉಡುಪಿ ಮತ್ತು ಕರಾವಳಿ ಜಿಲ್ಲೆಗಳ ಶಾಲಾ ಆವರಣದಲ್ಲಿ ಆರಂಭವಾದ ಹಿಜಾಬ್ ವಿವಾದದಿಂದ ಪಠ್ಯಕ್ರಮ ಪರಿಷ್ಕರಣೆಯವರೆಗೆ ರಾಜ್ಯದ ಸಾಂಸ್ಕೃತಿಕ ವಲಯ ಪರ-ವಿರೋಧದ ಹಗ್ಗ ಜಗ್ಗಾಟಕ್ಕೆ ಸಿಲುಕಿ, ರಾಜ್ಯದ ಸೌಹಾರ್ದಯುತ ವಾತಾವರಣವನ್ನು ಕಲುಷಿತಗೊಳಿಸಿದೆ. ಮುಸ್ಲಿಂ ಸಮುದಾಯದ ಶಾಲಾ ಹೆಣ್ಣುಮಕ್ಕಳು ಸಾಂಪ್ರದಾಯಿಕವಾಗಿ ಧರಿಸುವ ಹಿಜಾಬ್ ವಿರುದ್ಧ ಹಿಂದುತ್ವ ಸಂಘಟನೆಗಳು ಆರಂಭಿಸಿದ ಅಭಿಯಾನವನ್ನು ಸ್ಥಳೀಯ ಮಟ್ಟದಲ್ಲೇ ಪರಿಹರಿಸುವ ಸಾಧ್ಯತೆಗಳಿದ್ದಾಗಲೂ ರಾಜ್ಯ ಸರ್ಕಾರ ನಿರ್ಲಕ್ಷ್ಯ ವಹಿಸಿತ್ತು. ಮುಸ್ಲಿಂ ಹೆಣ್ಣುಮಕ್ಕಳ ಹಿಜಾಬ್ ಧರಿಸುವ ಸಾಂವಿಧಾನಿಕ ಧಾರ್ಮಿಕ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಹಿಂದುತ್ವ ಸಂಘಟನೆಗಳ ದ್ವೇಷ ರಾಜಕಾರಣಕ್ಕೆ ಬಲಿಯಾಗಿದ್ದು ನೂರಾರು ಹೆಣ್ಣುಮಕ್ಕಳ ಶಿಕ್ಷಣ ಮತ್ತು ಶಿಕ್ಷಣ ವಲಯದಲ್ಲಿದ್ದ ಶಾಂತಿಯುತ ವಾತಾವರಣ. ಹಿಜಾಬ್ ವಿವಾದದ

**ಮುಂದುವರೆಸಿದೆ...**

ಪರಿಣಾಮ ನೂರಾರು ಮುಸ್ಲಿಂ ಹೆಣ್ಣುಮಕ್ಕಳು ಶಿಕ್ಷಣವಂಚಿತರಾಗಿದ್ದೇ ಅಲ್ಲದೆ ಅಲ್ಪಸಂಖ್ಯಾತರ ಧಾರ್ಮಿಕ ಹಕ್ಕುಗಳಿಗೂ ಚ್ಯುತಿ ಉಂಟಾಯಿತು.

ಹಿಜಾಬ್ ವಿವಾದದ ಬೆನ್ನಲ್ಲೇ ಕರಾವಳಿ ಮತ್ತು ರಾಜ್ಯಾದ್ಯಂತ ಸೃಷ್ಟಿಯಾದ ಮತ್ತೊಂದು ಅಲ್ಪಸಂಖ್ಯಾತ ವಿರೋಧಿ ಅಭಿಯಾನ ಹಲಾಲ್ ಮಾಂಸ ಸೇವನೆ ಮತ್ತು ಮಾರಾಟದ ವಿರುದ್ಧ. ಹಿಂದುತ್ವ ಸಂಘಟನೆಗಳು ಮುಸ್ಲಿಮರು ಮಾರಾಟ ಮಾಡುವ ಹಲಾಲ್ ಮಾಂಸವನ್ನು ಸೇವಿಸದಿರುವಂತೆ ಅಭಿಯಾನ ಆರಂಭಿಸುವುದಷ್ಟೇ ಅಲ್ಲದೆ, ಮಾಂಸದಂಗಡಿಗಳ ಮೇಲೂ ದಾಳಿ ನಡೆಸಲಾರಂಭಿಸಿದ್ದು, ಅಲ್ಪಸಂಖ್ಯಾತ ಸಮುದಾಯದ ಆರ್ಥಿಕ ಬೆನ್ನೆಲುಬು ಮುರಿಯುವ ಒಂದು ತಂತ್ರಗಾರಿಕೆಯೇ ಆಗಿತ್ತು. ಇದೇ ಸಂದರ್ಭದಲ್ಲಿ ಹಿಂದೂ ಜಾತ್ರೆಗಳು ಮತ್ತು ಉತ್ಸವಗಳ ಸಂದರ್ಭದಲ್ಲಿ, ಮುಸ್ಲಿಂ ಅಂಗಡಿಗಳಿಗೆ ಅವಕಾಶ ನೀಡಕೂಡದು ಎಂಬ ಅಭಿಯಾನವನ್ನೂ ಹಿಂದೂ ಸಂಘಟನೆಗಳು ಆರಂಭಿಸಿದ್ದವು. ಅನೇಕ ಜಾತ್ರೆಗಳಲ್ಲಿ ಮತ್ತು ದೇವಸ್ಥಾನಗಳ ಬಳಿ ಇದ್ದ ಮುಸ್ಲಿಂ ಅಂಗಡಿಗಳ ಮೇಲೆ ದಾಳಿ ನಡೆಸಲಾಯಿತು. ಹುಬ್ಬಳ್ಳಿಯಲ್ಲಿ ದೇವಾಲಯದ ಹೊರವಲಯದಲ್ಲಿ ಕಲ್ಲಂಗಡಿ ವ್ಯಾಪಾರ ಮಾಡುತ್ತಿದ್ದ ನಬೀಸಾಬ್ ಎಂಬ ವ್ಯಕ್ತಿಯ ಅಂಗಡಿಯನ್ನು ಧ್ವಂಸ ಮಾಡಿದ ಮತಾಂಧರು ರಾಜ್ಯದ ವಿವಿಧ ಜಾತ್ರೆಗಳಲ್ಲೂ ಮುಸ್ಲಿಂ ವ್ಯಾಪಾರಿಗಳ ಮೇಲೆ ನಿಷೇಧ ಹೇರಲು ಮುಂದಾಗಿದ್ದರು.

ಆದರೆ ರೇಷ್ಮೆ ಬೆಳೆಗಾರರು ರೇಷಿಮೆ ಮೊಟ್ಟೆಯನ್ನು ಮುಸಲ್ಮಾನರಿಗೆ ಮಾರಕೂಡದು ಎಂಬ ಅಭಿಯಾನ ಹಾಸನದ ರೈತ ಸಂಘಟನೆಯ ಪ್ರತಿರೋಧದಿಂದ ಸಫಲವಾಗಲಿಲ್ಲ. ಮುಸ್ಲಿಮರ ಚಿನ್ನದ ಮಳಿಗೆಗಳಲ್ಲಿ ಆಭರಣಗಳನ್ನು ಕೊಂಡುಕೊಳ್ಳಬೇಡಿ, ಅವರ ವಸ್ತ್ರದ ಅಂಗಡಿಗಳಲ್ಲಿ ಉಡುಪು ಖರೀದಿಸಬೇಡಿ ಎಂಬ ಅಭಿಯಾನಕ್ಕೆ ಕರ್ನಾಟಕದ ಬಹುಪಾಲು ಜನತೆ ಸೊಪ್ಪು ಹಾಕದ ಕಾರಣ ವಿಫಲವಾದವು.ತಮ್ಮ ಜೀವನೋಪಾಯಕ್ಕಾಗಿ ವ್ಯಾಪಾರವನ್ನೇ ನಂಬಿಕೊಂಡು ಬದುಕುವ ಸಾವಿರಾರು ಮುಸ್ಲಿಂ ಕುಟುಂಬಗಳಿಗೆ ಈ ಬೆಳವಣಿಗೆಗಳು ಆಘಾತಕಾರಿಯಾಗಿ ಪರಿಣಮಿಸಿತ್ತು. ಆದರೆ ಕರ್ನಾಟಕದಲ್ಲಿ ಇಂದಿಗೂ ಜೀವಂತಿಕೆಯನ್ನು ಕಾಪಾಡಿಕೊಂಡಿರುವ ಪ್ರಜಾಸತ್ತೆಯ ದನಿಗಳು ಒಕ್ಕೊರಲಿನಿಂದ ಪ್ರತಿರೋಧ ವ್ಯಕ್ತಪಡಿಸಿದ ಕಾರಣ ಹಲಾಲ್, ಜಟ್ಕಾ ವಿವಾದಗಳಾಗಲೀ, ಮುಸ್ಲಿಂ ಅಂಗಡಿಗಳ ನಿಷೇಧವಾಗಲೀ ಪರಿಣಾಮಕಾರಿಯಾಗಲಿಲ್ಲ. ಕರ್ನಾಟಕದ ದಲಿತ, ಎಡಪಂಥೀಯ, ಪ್ರಗತಿಪರ ಸಂಘಟನೆಗಳು ಅಲ್ಪಸಂಖ್ಯಾತ ಸಮುದಾಯದ ಪರ ಗಟ್ಟಿದನಿಯೊಂದಿಗೆ ನಿಂತದ್ದರಿಂದ ಹಿಂದುತ್ವ ಸಂಘಟನೆಗಳ ಕೋಮುವಾದಿ ತಂತ್ರಗಾರಿಕೆ ಹಿಮ್ಮೆಟ್ಟಬೇಕಾಗಿದೆ. ಆದರೆ ತನ್ನದೇ ರಾಜಕೀಯ ಕಾರಣಗಳಿಗಾಗಿ ಈ ವಿವಾದಾಸ್ಪದ ಭಾವನಾತ್ಮಕ ಕಾರ್ಯಸೂಚಿಗಳನ್ನು ಬದಿಗೆ ಸರಿಸಿರುವ ಹಿಂದುತ್ವ ರಾಜಕಾರಣ, ಪ್ರಶಸ್ತ

**... ಪುಟ 7ರಲ್ಲಿ ಮುಂದುವರಿಸಲಾಗಿದೆ**

# ದ್ವೇಷವು ತನ್ನನ್ನು ಸೃಷ್ಟಿ ಮಾಡಿದವನನ್ನೇ ನಾಶ ಮಾಡುತ್ತದೆ

ಇಂದು ದೇವನೂರು ಮಹಾದೇವ ಅವರ ಕಿರುಪುಸ್ತಕ “ಆರ್ ಎಸ್ ಎಸ್ - ಆಳ ಮತ್ತು ಅಗಲ”, ಕರ್ನಾಟಕಾದ್ಯಂತ ವೈಚಾರಿಕ ಅಲೆಯನ್ನೇ ಎಬ್ಬಿಸಿದೆ. ಇದು ತನ್ನ ವಿಶಿಷ್ಟ ವಿಶ್ಲೇಷಣೆಯಿಂದ ಬಿಜೆಪಿ - ಆರ್ ಎಸ್ ಎಸ್ ನ ವಿರುದ್ಧ ಪ್ರತಿರೋಧವನ್ನು ಕಟ್ಟಲು ಕಾರ್ಯಕರ್ತರು ಮತ್ತು ಜನತೆಗೆ ಕರೆ ನೀಡುತ್ತಿದೆ. ಹಾಲಿ ಕರ್ನಾಟಕದಲ್ಲಿ ಹಿಂದುತ್ವ ಶಕ್ತಿಗಳ ಆಕ್ರಮಣಕಾರಿ ಅಲೆ ತನ್ನ ಪರಾಕಾಷ್ಠೆಯಲ್ಲಿ ಇದೆ. ಅದು ಹಿಜಾಬ್, ಅಜಾನ್, ಪಠ್ಯ ಪುಸ್ತಕಗಳು ಮುಂತಾಗಿ ಅನೇಕ ವಿಷಯಗಳನ್ನು ಎತ್ತಿಕೊಂಡು ಸತತ ಮುಸ್ಲಿಂ ವಿರೋಧಿ ದ್ವೇಷದ ಕೆಲಸಗಳನ್ನು ಮಾಡುತ್ತಿದೆ. ಇತ್ತೀಚಿಗೆ ಕರ್ನಾಟಕ ಸರ್ಕಾರ ಒಂದು ಸುಗ್ರೀವಾಜ್ಞೆ , "ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆ ಮಸೂದೆ 2022", ಎಂಬ ಹೆಸರಿನಲ್ಲಿ ತಂದಿದೆ. ಇದರಲ್ಲಿ ಧರ್ಮ ಪರಿವರ್ತನೆಯನ್ನು ಒಂದು ಶಿಕ್ಷಾರ್ಹ ಅಪರಾಧವನ್ನಾಗಿ ಪರಿಗಣಿಸಲಾಗಿದೆ. ಒಟ್ಟಾರೆ ಕರ್ನಾಟಕವು ಹಿಂದುತ್ವ ರಾಜಕೀಯದ ಪ್ರಯೋಗ ಶಾಲೆಯಾಗಿದೆ.

ದೇವನೂರು ಮಹದೇವ (ದೇಮ) ಅತ್ಯಂತ ಗಮನಾರ್ಹ ದಲಿತ ಲೇಖಕ ಆಗಿದ್ದು, 70ರ ದಶಕದಲ್ಲಿ ಹೊರಹೊಮ್ಮಿದ ತಲೆಮಾರಿನವರಾಗಿದ್ದಾರೆ. ದಲಿತರ ಅರಿವಿನ ಆಸ್ಫೋಟದಿಂದ ಹೊರಹೊಮ್ಮಿದ ದಲಿತ ಸಂಘರ್ಷ ಸಂಮಿತಿಯ ಸಂಸ್ಥಾಪಕರಲ್ಲಿ ಒಬ್ಬರು. ಹಾಲಿ ಅವರು ಸ್ವರಾಜ್ ಪಕ್ಷದ ಕರ್ನಾಟಕ ಶಾಖೆಯ ಗೌರವಾಧ್ಯಕ್ಷರಾಗಿದ್ದಾರೆ. ಅವರಿಗೆ ಪದ್ಮಶ್ರೀ ಸನ್ಮಾನವನ್ನು ಕೇಂದ್ರ ಸರ್ಕಾರವು ನೀಡಿದೆ. ಅವರು ಕರ್ನಾಟಕದ ಸಾಕ್ಷಿ ಪ್ರಜ್ಞೆ. ಅವರ ಹಾಲಿ ಕಿರು ಪುಸ್ತಿಕೆಯನ್ನು ಈ ಸಂದರ್ಭದಲ್ಲಿಯೇ ನೋಡಬೇಕು. ಈ ಕಿರು ಪುಸ್ತಿಕೆ ಪುಟ್ಟದಾಗಿದ್ದು, 64 ಪುಟಗಳನ್ನು ಹೊಂದಿದ್ದು, ಅಂಗೈಯಲ್ಲಿ ಹಿಡಿಯಬಹುದಾಗಿದೆ. ದೇಮ ಅವರ ಈ ಹೊತ್ತಿಗೆಯ ವಿಚಾರಗಳನ್ನು ಸರಳವಾಗಿ ಹೇಳಲು ಇಲ್ಲಿ ಪ್ರಯತ್ನಿಸಲಾಗಿದೆ.

**ದೇಮ ಅವರು ತಮ್ಮ ಕೃತಿಯ ಉದ್ದೇಶ:** ಆರ್ ಎಸ್ ಎಸ್ ಅನ್ನು ವಿಶ್ಲೇಷಿಸುವುದು ಮತ್ತು ಒಟ್ಟಾರೆ ಜನರನ್ನು ಎಚ್ಚರಿಸುವುದಾಗಿದೆ. ಇದನ್ನು ಅವರು ಆರ್ ಎಸ್ ಎಸ್ ನ ನೆಲೆ ಹಾಗೂ ಆತ್ಮವನ್ನು ನೋಡಲು ಪ್ರಾರಂಭಿಸುತ್ತಾರೆ. ಅವರು ಮುಖ್ಯವಾಗಿ ವಿ.ಡಿ.ಸಾವರ್ಕರ್, ಗುರೂಜಿ ಗೋಲ್ವಾಲ್ಕರ್ ಅವರ ಕೃತಿಗಳನ್ನು ಗಮನಿಸುತ್ತಾರೆ ಮತ್ತು ಅವರ ಪ್ರಕಾರ ಹೆಗ್ಡೆವಾರ್ ಆರ್ ಎಸ್ ಎಸ್ ನ ಸಿದ್ಧಾಂತದ ಚಿಲುಮೆ. ಗುರು ಗೋಲ್ವಾಲ್ಕರ್ ಅವರ ಪ್ರಕಾರ ಹಿಂದೂ ಸಮಾಜ ದೇವರ "ವಿರಾಟ" ಸ್ವರೂಪ. ಅದನ್ನು ಋಗ್ವೇದದ ಪುರುಷ ಸೂಕ್ತದಲ್ಲಿ ಉಲ್ಲೇಖಿಸಲಾಗಿದೆ. ಗುರೂಜಿ ಗೊಲ್ವಾಲ್ವಕರ್ ಪ್ರಕಾರ ಭಾರತದ ಸಂವಿಧಾನ “ಮನುಸ್ಮೃತಿ” ಆಗಬೇಕು. ಇದನ್ನು ಪ್ರಪ್ರಥಮವಾಗಿ ವಿ.ಡಿ. ಸಾವರ್ಕರ್ ಪ್ರತಿಪಾದಿಸಿದ್ದರು. ಅಂಬೇಡ್ಕರ್ ಅವರ ಸಂವಿಧಾನವನ್ನು ಎಲ್ಲೆಡೆಯಿಂದ ಚಿಂದಿ ಚಿಂದಿ ಗಳಿಂದ ಆರಿಸಿ ತಂದು ತೇಪೆ ಹಾಕಲಾಗಿದೆ. ಇನ್ನೂ ಒಕ್ಕೂಟ ವ್ಯವಸ್ಥೆಯು ಬಹಳ ಶಿಥಿಲವಾಗಿದ್ದು, ಅದನ್ನು ಏಕೀಕೃತ (unitary) ಪ್ರಭುತ್ವವನ್ನಾಗಿ ಮಾಡಬೇಕು.

**ಆರ್ ಎಸ್ ಎಸ್ ನ ಸ್ಫೂರ್ತಿಯ ನೆಲೆ:** ಒಂದೇ ಬಾವುಟ, ಒಬ್ಬನೇ ನಾಯಕ, ಒಂದೇ ಸಿದ್ಧಾಂತ. ಗುರೂಜಿ ಪ್ರಕಾರ ಜರ್ಮನಿಯ ಜನಾಂಗೀಯವಾದವು “ಜನಾಂಗೀಯ ಹೆಮ್ಮೆ”ಯ ಆದರ್ಶ. ಗೋಲ್ವಾಳ್ಕರ್ ಕೃತಿ, ಚಿಂತನ ಗಂಗಾ, ಮೂರು ಪ್ರಮುಖ ವಿಚಾರಗಳನ್ನು ಹೊಂದಿದೆ. ಮೊದಲನೆಯದಾಗಿ, ಋಗ್ವೇದದ ಪುರುಷ ಸೂಕ್ತ, ದೇವರ ಅವತಾರ ಮತ್ತು ಭಗದ್ಗೀತೆಯ ಪ್ರಚಾರ. ಎರಡನೆಯದಾಗಿ, ಚಾತುರ್ವರ್ಣವನ್ನು ಉಳಿಸಿಕೊಳ್ಳುವುದು ಮತ್ತು ಅಂಬೇಡ್ಕರ್ ಅವರ ಸಂವಿಧಾನವನ್ನು ತಿರಸ್ಕರಿಸುವುದು. ಈ ಮೂಲಕ ದೇಶದ ಒಕ್ಕೂಟ ವ್ಯವಸ್ಥೆಯನ್ನು ನಾಶ ಮಾಡುವು ವುದು. ಸಂಸ್ಕೃತವನ್ನು ರಾಷ್ಟ್ರ ಭಾಷೆಯನ್ನುಯನ್ನಾಗಿ ಮಾಡಲು ಹಿಂದಿಯನ್ನು ಉತ್ತೇಜಿಸುವುದು. ಮೂರನೆಯದಾಗಿ, ಆರ್ಯನ್ ಸರ್ವೋಚ್ಚತೆಯನ್ನು ವೈಭವೀಕರಿಸುವುದು. ಜಾತಿ ಮತ್ತು ಪಂಥಗಳನ್ನು ಹಿಂದೂವಾದದಲ್ಲಿ ಅರಗಿಸಿಕೊಳ್ಳುವುದು. ಮುಸಲ್ಮಾನರು ಮತ್ತು ಕ್ರೈಸ್ತರು ಬ್ರಾ ಹ್ಮಣೇತರರು ಮತ್ತು ಹಿಂದೂ ಧರ್ಮದ ಚೌಕಟ್ಟಿನಲ್ಲಿ ಬರುವುದಿಲ್ಲ.






ದೇಮ ಅವರು, ಆರ್ ಎಸ್ ಎಸ್, ಟಿಪ್ಪು ಸುಲ್ತಾನನ ಬಗ್ಗೆ ಸುಳ್ಳುಗಳನ್ನು ಹಬ್ಬಿಸುತ್ತಾ, ಆತನು ಹಿಂದೂಗಳ ವಿರೋಧಿ ಎಂದು ಬಣ್ಣಿಸುತ್ತಿದೆ. ಲೇಖಕರು ಆರ್ ಎಸ್ ಎಸ್ ಈ ದೇಶದಲ್ಲಿ ಗೃಹ ಯುದ್ಧವನ್ನು ಆಶಿಸುತ್ತಾರೆ ಎನ್ನುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಬಹುಸಂಖ್ಯಾತ ಹಿಂದೂಗಳು ಮಾತನಾಡಬೇಕೆಂದು ಕರೆ ನೀಡುತ್ತಾರೆ.

ಬಿಜೆಪಿ - ಆರ್ ಎಸ್ ಎಸ್ ಕೇಂದ್ರ ಸರಕಾರ ಮತ್ತು ಅನೇಕ ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಅನೇಕ ವರ್ಷಗಳಲ್ಲಿ ಹಿಂದೆ 1977ರಲ್ಲಿ ಜನತಾ ಪಕ್ಷದೊಳಗೆ ಇವರು ನುಸಿಳಿಕೊಂಡರು. ಆಗ ಅವರು ತಮ್ಮ ದ್ವಿಸದಸ್ಯತ್ವವನ್ನು ಬಿಡುವುದಾಗಿ ಆಶ್ವಾಸನೆ ನೀಡಿದ್ದರು. ನಂತರದಲ್ಲಿ ಅವರ ವ್ಯಾಪಕತೆ ಹೆಚ್ಚಿತು. ಅವರು ಪಾಕಿಸ್ತಾನವನ್ನು ಶಾಶ್ವತ ಶತ್ರು ಎಂದು ಬಿಂಬಿಸುತ್ತಾ ಸ್ಥಳೀಯ ಮುಸಲ್ಮಾನರ ಮೇಲೆ ದ್ವೇಷ ಸಾಧಿಸುತ್ತಿದ್ದಾರೆ. ಇದರಿಂದ ಅವರು ಬಹುತ್ವದ ಭಾರತವನ್ನು ಛಿದ್ರಗೊಳಿಸುತ್ತಿದ್ದಾರೆ ನರೇಂದ್ರ ಮೋದಿ ಸರ್ಕಾರ ಅನೇಕ ಆಶ್ವಾಸನೆಗಳನ್ನು ನೀಡಿತ್ತು. ಆದರೆ ಅದು ಅದರ ಬಹುಪಾಲನ್ನು ಈಡೇರಿಸಿಲ್ಲ.

ನೋಟಿನ ಅಮಾನ್ಯೀಕರಣದಿಂದಾಗಿ ಜನತೆಗೆ ಕಡು ಕಷ್ಟ ಉಂಟಾಯಿತು. ಮುಖ್ಯವಾದ ಕೈಗಾರಿಕಾ ರಂಗಗಳನ್ನು ಖಾಸಗೀಕರಣ ಮಾಡುವುದು ಮತ್ತು ಏರುತ್ತಿರುವ ಬೆಲೆ ಏರಿಕೆ ಗಳು ಮಾತ್ರವೇ ಮೋದಿ ಸರ್ಕಾರದ ಸಾಧನೆಗಳು. ಇಂತಹವರನ್ನು ಆಯ್ಕೆ ಮಾಡಿದ್ದಕ್ಕೆ ಜನತೆ ವಿಷಾದಿಸುತ್ತಿದ್ದಾರೆ.

★ ಡಾ । ವಿ. ಲಕ್ಷ್ಮಿ ನಾರಾಯಣ

# ಕ್ರಾಂತಿಕಾರಿ ಕಾರ್ಲ್ ಮಾರ್ಕ್ಸ್ ಅವರ 204ನೇ ಜಯಂತಿ

“ಭವಿಷ್ಯವನ್ನು ನಿರ್ಮಿಸುವುದು ಮತ್ತು ಎಲ್ಲವನ್ನೂ ಎಲ್ಲಾ ಕಾಲಕ್ಕೂ ಸರಿ ಹೊಂದಿಸುವುದು ನಮ್ಮ ಕರ್ತವ್ಯವಲ್ಲ... ನಾವು ಏನನ್ನು ಪ್ರಸ್ತುತ ಸಾಧಿಸಬೇಕಾಗಿದೆ ಎಂದರೆ, 'ಇರುವ ಎಲ್ಲದರ ಬಗ್ಗೆ ನಿರ್ದಯವಾದ ಟೀಕೆ, ಅದರಿಂದ ಉಂಟಾಗುವ ಫಲಿತಾಂಶಗಳಿಗೆ ಹೆದರುವುದಿಲ್ಲ', ಎಂಬ ಅರ್ಥದಲ್ಲಿ ಅಡಕವಾಗಿದೆ. ಹಾಗೂ ಶಕ್ತಿ ಕೇಂದ್ರಗಳೊಂದಿಗಿನ ಸಂಘರ್ಷದ ಬಗ್ಗೆ ಸ್ವಲ್ಪವೋ ಭಯಪಡುವ ಅಗತ್ಯ ಇಲ್ಲ.”

1843ರಲ್ಲಿ 25 ವರ್ಷದ ಯುವಕನೊಬ್ಬ ತನ್ನ ಸ್ನೇಹಿತನಿಗೆ ಬರೆದ ಪತ್ರದಿಂದ ಸ್ವಲ್ಪ ಭಾವಾರ್ಥ ಮಾಡಲಾದ ವಾಕ್ಯವನ್ನು ಮೇಲೆ ಉಲ್ಲೇಖಿಸಲಾಗಿದೆ. ಆ ಯುವಕ ಇನ್ನೂ ನಲವತ್ತು ವರ್ಷಗಳ ಕಾಲ ಬದುಕಿದ್ದನು ಮತ್ತು ಅವನು ನಿಖರವಾಗಿ ಈ ಸೂತ್ರದ ಪ್ರಕಾರ ಬದುಕಿದ್ದನು. ಅವನ ಸುತ್ತಲಿನ ಬಾಹ್ಯ ಪ್ರಪಂಚ, ಹಾಗೂ ಅವನ ಸ್ವಂತ ಆಲೋಚನೆಗಳಿಂದ ಅವನು ಜಗತ್ತನ್ನು ವಿಶ್ಲೇಷಿಸಲು ಮತ್ತು ಅದನ್ನು ಬದಲಾಯಿಸಲು ಪ್ರಾರಂಭಿಸಿದನು.


ಇತಿಹಾಸವು ಆ ಯುವಕನನ್ನು ಕಾರ್ಲ್ ಮಾರ್ಕ್ಸ್ ಎಂದು ನೆನಪಿಸಿಕೊಳ್ಳುವುದನ್ನು ಮುಂದುವರೆಸಿದೆ. ಬಂಡವಾಳಶಾಹಿಯ ನಿರ್ದಯ ವಿಮರ್ಶಕ, ಸಮತಾವಾದಿ ಮತ್ತು ಸ್ವಾತಂತ್ರ್ಯವಾದಿ ಸಾಮಾಜಿಕ ಭವಿಷ್ಯದ ಅದ್ಭುತ ದಾರ್ಶನಿಕ, ಮತ್ತು ಸಾಮಾನ್ಯವಾಗಿ ಕಮ್ಯುನಿಸ್ಟ್ ಅಥವಾ ಸಮಾಜವಾದಿ ಎಂದು ಅವರನ್ನು ವಿವರಿಸಲಾಗಿದೆ. ಅವರ ಅಭಿಪ್ರಾಯಗಳು ಮತ್ತು ಚಟುವಟಿಕೆಗಳಿಗಾಗಿ ಅವರು ತಮ್ಮ ಕಾಲದ ಹಲವಾರು ಯುರೋಪಿಯನ್ ರಾಜ್ಯಗಳ ಕೋಪಕ್ಕೆ ಒಳಗಾಗಿದ್ದರು ಮತ್ತು ಲಂಡನ್, ಜೀವನದ ಉತ್ತರಾರ್ಧದಲ್ಲಿ ಅವರಿಗೆ ಆಶ್ರಯ ನೀಡಿತು. ಕ್ರಾಂತಿಕಾರಿ ಚಟುವಟಿಗಳಿಂದಾಗಿ ಅವರಿಗೆ ಬ್ರಿಟಿಷ್ ಪೌರತ್ವವನ್ನು ಎಂದಿಗೂ ನೀಡಲಿಲ್ಲ. ಜರ್ಮನಿಯಲ್ಲಿ ಜನಿಸಿದ ಅವರು ಯಾವುದೇ ಪೌರತ್ವಯಿಲ್ಲದೆ ನಿಧನರಾದರು.

ಬಂಡವಾಳದ ಕುರಿತಾದ ತನ್ನ ಯುಗ-ನಿರ್ಮಾಣದ ಸಂಶೋಧನೆಗಾಗಿ ಮಾರ್ಕ್ಸ್ ಲಂಡನ್‌ನಲ್ಲಿರುವ ಬ್ರಿಟಿಷ್ ಮ್ಯೂಸಿಯಂ ಲೈಬ್ರರಿಯನ್ನು ತಮ್ಮ ಪ್ರಯೋಗಾಲಾಯವನ್ನಾಗಿ ಮಾಡಿಕೊಂಡಿದ್ದರು. ಆಗ ಬ್ರಿಟನ್ ಅತ್ಯಂತ ಮುಂದುವರಿದ ಬಂಡವಾಳಶಾಹಿ ರಾಷ್ಟ್ರವಾಗಿತ್ತು, ಅದು ಕೈಗಾರಿಕಾ ಕ್ರಾಂತಿಯ ತವರು ಮತ್ತು ದೊಡ್ಡ ವಸಾಹತುಶಾಹಿ ಶಕ್ತಿಯೂ ಆಗಿತ್ತು. ವಸಾಹತುಶಾಹಿ ಲೂಟಿ ಇಲ್ಲದೆ ಬಂಡವಾಳ ಬೆಳೆಯಲು ಸಾಧ್ಯವಿಲ್ಲ. ಇದನ್ನು ಮಾರ್ಕ್ಸ್‌ನ ಮಾತಿನಲ್ಲಿ ಹೇಳುವುದಾದರೆ, "ಹಣವು ಒಂದು ಕೆನ್ನೆಯ ಮೇಲೆ ಜನ್ಮಜಾತ ರಕ್ತದ ಕಲೆಯೊಂದಿಗೆ ಜಗತ್ತಿಗೆ ಬಂದರೆ, ಬಂಡವಾಳವು ತಲೆಯಿಂದ ಪಾದದವರೆಗೆ, ಪ್ರತಿ ರಂಧ್ರದಿಂದ, ರಕ್ತ ಮತ್ತು ಕೊಳೆಯೊಂದಿಗೆ ಬರುತ್ತದೆ." ಆಶ್ಚರ್ಯಕರವಾಗಿ, ಬಂಡವಾಳದ ವಿರುದ್ಧದ ಮಾರ್ಕ್ಸ್‌ರ ವಿಚಾರಗಳು, 'ವಸಾಹತುಶಾಹಿಯಿಂದ ಸ್ವಾತಂತ್ರ್ಯಕ್ಕಾಗಿ ವಿಶ್ವಾದ್ಯಂತ ಬೆಳೆಯುತ್ತಿರುವ ಹೋರಾಟದೊಂದಿಗೆ ಹೆಣೆದುಕೊಂಡಿತು'.

1848ರ ಆರಂಭದಲ್ಲಿ ಬರೆದ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ದಸ್ತಾವೇಜು, ಯುರೋಪನಲ್ಲಿ ತಕ್ಷಣದ ಕ್ರಾಂತಿಯ ಭರವಸೆಯೊಂದಿಗೆ ಮಿಡಿಯಿತು. ಆದರೆ ಅದು ಅಲ್ಲಿ ಸಂಭವಿಸಲಿಲ್ಲ ಮತ್ತು ಬಂಡವಾಳವು 1848ರ ಕ್ರಾಂತಿಯನ್ನು ಹತ್ತಿಕ್ಕುವ ಮೂಲಕ ತನ್ನ ಆಳ್ವಿಕೆಯನ್ನು ಬಲಪಡಿಸಿ ಕೊಂಡಿತು. ಮಾರ್ಕ್ಸ್ ಅವರು ಬಂಡವಾಳದ ಅಧ್ಯಯನ ಮತ್ತು ಕಾರ್ಮಿಕ ವರ್ಗದ ಹೋರಾಟದ ಆರಂಭದ ಅಲೆಗಳ ನಡುವೆ ಏಕತೆಯ ಸಂಬಂಧಗಳನ್ನು ಸ್ಥಾಪಿಸುವುದರ ಮೇಲೆ ತನ್ನನು ಕೇಂದ್ರೀಕರಿಸಿದರು. ಮತ್ತು ಇನ್ನೊಂದೆಡೆ ವಸಾಹತುಶಾಹಿ ವಿರೋಧಿ ದಂಗೆಗಳು ಹೆಚ್ಚಿದವು. 1850ರ ದಶಕದಲ್ಲಿ, ಮಾರ್ಕ್ಸ್ ಅಮೆರಿಕದ ಜರ್ನಲ್ 'ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್‌ಗೆ, ಲಂಡನ್ ಮೂಲದ ಯುರೋಪಿಯನ್ ವರದಿಗಾರರಾಗಿ ಬರೆಯುತ್ತಿದ್ದರು. ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯ ಬೂಟಾಟಿಕೆ ಮತ್ತು ಅನಾಗರಿಕ ಲೂಟಿ ಮತ್ತು ಚಿತ್ರಹಿಂಸೆಗಳು ಅವರ ರವಾನೆಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಂಡವು.

1853ರ ಬೇಸಿಗೆಯಲ್ಲಿ, ಭಾರತದಲ್ಲಿ ಆದಿವಾಸಿ ದಂಗೆಗಳು ಸ್ಫೋಟಗೊಳ್ಳುವ ಮೊದಲು, ಬ್ರಿಟಿಷ್ ವಸಾಹತುಶಾಹಿಯ ನೊಗವನ್ನು ಕಿತ್ತು ಎಸೆಯುವ ಭಾರತೀಯ ಜನರ ಹೋರಾಟದ ಕಾರ್ಯಸೂಚಿಯನ್ನು ಮಾರ್ಕ್ಸ್ ಬರೆದರು. 1857 ರ ಮಹಾ ದಂಗೆಯ ಆರಂಭದ ಹಿನ್ನೆಲೆಯಲ್ಲಿ, ಯುರೋಪಿಯನ್ ವ್ಯಾಖ್ಯಾನವು ಭಾರತೀಯ ಸೈನಿಕರ ಆಪಾದಿತ ಇಂಗ್ಲಿಷ್-ವಿರೋಧಿ 'ಜನಾಂಗೀಯ ಅನಾಗರಿಕತೆ'ಯ ಸುತ್ತ ಸುತ್ತಿದಾಗ, ಮಾರ್ಕ್ಸ್ ಮತ್ತು ಎಂಗಲ್ಸ್ ಈ ದಂಗೆಯನ್ನು ವಸಾಹತುಶಾಹಿ-ವಿರೋಧಿ ಪ್ರತಿರೋಧದ ಉದಯೋನ್ಮುಖ ವೇದಿಕೆಯಾಗಿ ಸ್ವಾಗತಿಸಿದರು. 1858 ರಲ್ಲಿ, ಎಂಗೆಲ್ಸ್‌ಗೆ ಬರೆದ ಪತ್ರದಲ್ಲಿ, ಮಾರ್ಕ್ಸ್, ಭಾರತವನ್ನು 'ನಮ್ಮ ಅತ್ಯುತ್ತಮ ಮಿತ್ರ' ಎಂದು ಬಣ್ಣಿಸಿದರು (ಬ್ರಿಟಿಷ್ ಬಂಡವಾಳಶಾಹಿ ಮತ್ತು ವಸಾಹತುಶಾಹಿಯ ಅವಳಿ ಶತ್ರುಗಳ ವಿರುದ್ಧದ ಯುದ್ಧದಲ್ಲಿ). ಆ ದಿನಗಳಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್‌ಗೆ ಭಾರತದಿಂದ ನೈಜ-ಸಮಯದ ಮಾಹಿತಿಯನ್ನು ಸಂಗ್ರಹಿಸುವುದು ಸುಲಭವಲ್ಲ, ಆದರೆ ಓದುಗರು ಅವರ ಸಹಾನುಭೂತಿಯು ಸಂಪೂರ್ಣವಾಗಿ ಭಾರತೀಯ ಹೋರಾಟಗಾರರ ಮೇಲಿದೆ ಎಂದು ಸ್ಪಷ್ಟವಾಗಿ ನೋಡುತ್ತಾರೆ. ಆರೆಸ್ಸೆಸ್ ಸಿದ್ಧಾಂತಿಗಳು ಮತ್ತು ಪ್ರಚಾರಕರು, 'ಮಾರ್ಕ್ಸ್ ಅವರನ್ನು ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಬೆಂಬಲಿಸುವವರೆಂದು ತೋರಿಸಲು', ಮೆಕಾಲೆಯೊಂದಿಗೆ ತಾಳೆ ಮಾಡುವ ಅವರ ಕಿಡಿಗೇಡಿತನ ಮತ್ತು ದುರುದ್ದೇಶವನ್ನು ನಾವು ಸಂಪೂರ್ಣವಾಗಿ ಬಹಿರಂಗ ಪಡಿಸಬೇಕು ಮತ್ತು ಖಂಡಿಸಬೇಕು.

ಮಾರ್ಕ್ಸ್ ಕಮ್ಯುನಿಸ್ಟ್ ಕನಸಿನೊಂದಿಗೆ ತನ್ನ ಪ್ರಯಾಣವನ್ನು ಪ್ರಾರಂಭಿಸಿದರು ಮತ್ತು ಇತಿಹಾಸದ ವಿಶ್ಲೇಷಣೆಯು, ಅವರಿಗೆ ಇದು ಒಂದು ಸಾಧಿಸ ಬಹುದಾದ ಕನಸು ಎಂಬ ವಿಶ್ವಾಸವನ್ನು ನೀಡಿತು. ಆದರೆ ಇತಿಹಾಸದ ಮುಂದುವರಿಕೆ ಮತ್ತು ತಮ್ಮದೇ ಆದ ಇತಿಹಾಸವನ್ನು ಬರೆಯುವ ಜನರ ಶಕ್ತಿಯಲ್ಲಿ ಈ ಸಹಜ ವಿಶ್ವಾಸವನ್ನು ಮೀರಿ, ಪರಿಪೂರ್ಣ ಭವಿಷ್ಯವನ್ನು ರೂಪಿಸುವುದನ್ನು ಬಿಟ್ಟು, ಬೇರೆ ಭವಿಷ್ಯ ನುಡಿಯಲು ಮಾರ್ಕ್ಸ್ ಚಿಂತಿಸಲಿಲ್ಲ. ಅವರಿಗೆ ಯಾವಾಗಲೂ ಸಂಘರ್ಷವನ್ನ ಇಲ್ಲಿ ಮತ್ತು ಈಗಲೇ ನಡೆಸಬೇಕಾಗಿತ್ತು ಮತ್ತು ಇದಕ್ಕಾಗಿ ಪ್ರತಿಯೊಬ್ಬರು ಐತಿಹಾಸಿಕವಾಗಿ ನೀಡಲಾದ ಪರಿಸ್ಥಿತಿ ಮತ್ತು ಲಭ್ಯವಿರುವ ವಸ್ತುಗಳನ್ನು ಮಾತ್ರ ಅವಲಂಬಿಸಬಹುದು. 1848ರ ಕ್ರಾಂತಿಯ ಕನಸು, ಇದಕ್ಕಾಗಿ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ನಿಯೋಜಿಸಲಾಯಿತು ಮತ್ತು ಬರೆಯಲಾಯಿತು, ಆದರೆ ಅದು ಈಡೇರಲಿಲ್ಲ. ಮಾರ್ಕ್ಸ್ ಅವರ ಜೀವಿತಾವಧಿಯಲ್ಲಿ ಆ ಕನಸನ್ನು ಅತ್ಯಂತ ಶಕ್ತಿಯುತವಾಗಿ ಪುನರುಜ್ಜೀವನಗೊಳಿಸಿದ ಘಟನೆಯೆಂದರೆ 1871 ರ ಪ್ಯಾರಿಸ್ ಕಮ್ಯೂನ್.



ಆದರೆ ಅದು ಎಪ್ಪತ್ತೊಂದು ದಿನಗಳ ನಂತರ ಬಿದ್ದು ಹೋಯಿತು. 20ನೇ ಶತಮಾನದ ಆರಂಭದಲ್ಲಿ ಮೊದಲ ನಿರ್ಣಾಯಕ ಸಮಾಜವಾದಿ ಮಾದರಿಯಾಗಿ ಹೊರಹೊಮ್ಮಿದ ಸೋವಿಯತ್ ಒಕ್ಕೂಟವು ಏಳು ದಶಕಗಳ ನಂತರ ಕುಸಿದು ಕಣ್ಮರೆಯಾಯಿತು.

20ನೇ ಶತಮಾನದ ಸಮಾಜವಾದವು ತನ್ನ ಭರವಸೆಗಳನ್ನು ಈಡೇರಿಸಲು ವಿಫಲವಾಗಿದೆ. ಆದರೆ ಇಂದು ಬಂಡವಾಳಶಾಹಿಯು ಹೇಗೆ ಸಾಗುತ್ತಿದೆ? ಮಾರ್ಕ್ಸ್ ಕಾಲದಲ್ಲಿ, ಬಂಡವಾಳವು ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ಚಲಾವಣೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿತ್ತು, ಇದು ಲಾಭದ ಸಾಕ್ಷಾತ್ಕಾರಕ್ಕೆ ಪೂರ್ವಾಪೇಕ್ಷಿತವಾಗಿತ್ತು. ಬಂಡವಾಳದ ಕ್ರೋಢೀಕರಣ, ಎಷ್ಟೇ ಲೂಟಿ ಮತ್ತು ಪ್ರಾಚೀನವಾಗಿದ್ದರೂ, ಬರಿಯ ಜೀವನಾಧಾರದ ಮಟ್ಟದಲ್ಲಿ ಮಾತ್ರ ಕಾರ್ಮಿಕರ ಸಾಮಾಜಿಕ ಪುನರುತ್ಪಾದನೆಯನ್ನು ಖಚಿತಪಡಿಸಿ ಕೊಳ್ಳಬೇಕಾಗಿತ್ತು.

ಆದರೆ, ಇಂದು ಬಂಡವಾಳವು ಉತ್ಪಾದನೆಯೊಂದಿಗಿನ ಯಾವುದೇ ನಿರ್ದಿಷ್ಟ ವಾದ ಸಂಪರ್ಕ ಕಡಿತಗೊಳ್ಳುವ ಬೆದರಿಕೆಯನ್ನು ಎದಿರಿಸುತ್ತಿದೆ ಮತ್ತು ಯಾಂತ್ರೀಕೃತಗೊಂಡ ಮತ್ತು ಕೃತಕ ಬುದ್ಧಿಮತ್ತೆಯ ಅಪ್ಲಿಕೇಶನ್ ಅನ್ನು ಹೆಚ್ಚಿಸುವ ಮೂಲಕ ಉತ್ಪಾದನೆ ನಡೆಸುತ್ತಿದೆ, ಉತ್ಪಾದನಾ ಪ್ರಕ್ರಿಯೆಗಳು ಹೆಚ್ಚಿನ ವರ್ಗದ ಜನರನ್ನು ಅನಾವಶ್ಯಕವೆಂದು, ಕೆಲಸದಿಂದ ತೆಗೆದು ಹಾಕುವ ಬೆದರಿಕೆ ಹಾಕುತ್ತಿವೆ. ಮತ್ತು 'ನಿರಂಕುಶವಾದವು' ಬಂಡವಾಳಶಾಹಿಯ ಪ್ರಮಾಣಿತ ರಾಜಕೀಯ ರೂಪದಿಂದ 'ಪ್ರಜಾಪ್ರಭುತ್ವವನ್ನು' ಹೊರಹಾಕಲು ಬೆದರಿಕೆ ಹಾಕುತ್ತಿದೆ. ಸೋವಿಯತ್ ಒಕ್ಕೂಟದ ಪತನದ ನಂತರ 'ಇತಿಹಾಸದ ಅಂತ್ಯ' ಎಂದು ಹುರಿದುಂಬಿಸಿದ ಸಜ್ಜನರು ರಷ್ಯಾದ ಉಕ್ರೇನ್ ಆಕ್ರಮಣದ ನಂತರ 'ಇತಿಹಾಸದ ಅಂತ್ಯ'ದ ಬಗ್ಗೆ ದೂರುತ್ತಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಬಂಡವಾಳಶಾಹಿಯು ಇಂದು ಸಮರ್ಥನೀಯವಲ್ಲದ ವರ್ತಮಾನದಲ್ಲಿ ಬೇರೂರಿರುವ ತನ್ನ ಆಳವಾದ ಬಿಕ್ಕಟ್ಟನ್ನು ಎದುರಿಸುತ್ತಿದೆ ಮತ್ತು ಕೋವಿಡ್ ನಿಂದ ನಾಶವಾದ-ಹವಾಮಾನ-ಅಳಿವಿನಂಚಿನಲ್ಲಿರುವ ಅಸ್ತವ್ಯಸ್ತವಾಗಿರುವ ಜಗತ್ತಿನಲ್ಲಿ ಅನಿಶ್ಚಿತ ಭವಿಷ್ಯದಲ್ಲಿ ಬಿಕ್ಕಟ್ಟು ಪ್ರಾರಂಭವಾಗುತ್ತದೆ. 'ಸಮಾಜವಾದದ ಬಿಕ್ಕಟ್ಟಿನ' ಬಗ್ಗೆ ನಿರುತ್ಸಾಹಗೊಳ್ಳುವ ಬದಲು, ಸಮಾಜವಾದಿಗಳು ಸಮಾಜವಾದದ 'ಹುಟ್ಟು'ವಾಗಿನ ತೊಂದರೆಗಳನ್ನು ಜಯಿಸಲು ಹೆಚ್ಚು ಕಷ್ಟಪಟ್ಟು ಹೋರಾಡಿ, ಬಂಡವಾಳಶಾಹಿ, ಅತೀತದಿಂದ, ಉಂಟು ಮಾಡುತ್ತಿರುವ ನೋವುಗಳಿಗೆ ಮಾನವೀಯ ಪರ್ಯಾಯವನ್ನು ನಿರ್ಮಿಸಬಹುದೇ? 21 ನೇ ಶತಮಾನದಲ್ಲಿ ಸಮಾಜವಾದವು ಉನ್ನತ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿಯ ಸಮಗ್ರ ನಿರಾಕರಣೆ ಮತ್ತು ಮಾರ್ಕ್ಸ್ ಹೇಳಿದಂತೆ ಪ್ರಕೃತಿಯೊಂದಿಗೆ ತೊಡಗಿಸಿಕೊಳ್ಳುವ ಸಂಭಾಷಣೆ ಎಂದರ್ಥ. ಇದುವೇ ಇಂದಿನ ಪೀಳಿಗೆಯ ಮಾರ್ಕ್ಸ್‌ವಾದಿಗಳನ್ನು ಮುನ್ನಡೆಸಬೇಕಾದ ಸವಾಲು!

★ ದೀಪಂಕರ ಭಟ್ಟಾಚಾರ್ಯ | ಅನುವಾದ: ನಾ ದಿವಾಕರ್

**ಕಾರ್ಪೋರೇಟ್ ಹಿಂದುತ್ವ ರಾಜಕಾರಣದ ಪ್ರಯೋಗ ಶಾಲೆಯಾಗಿ ಕರ್ನಾಟಕ ... ಪುಟ 4ರಿಂದ ಮುಂದುವರಿಸಲಾಗಿದೆ**

ಸಂದರ್ಭದಲ್ಲಿ ಈ ವಿವಾದಗಳನ್ನೇ ಮುನ್ನೆಲೆಗೆ ತರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ.

ಹಿಂದುತ್ವ ರಾಜಕಾರಣದ ಬುನಾದಿಯನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ಮುಂದಾಳತ್ವ ವಹಿಸಿರುವುದು ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಿದ್ದು, ಹೊಸ ಶಿಕ್ಷಣ ನೀತಿಯನ್ನು ಅವಸರದಲ್ಲಿ ಜಾರಿಗೊಳಿಸಿರುವುದು ಇದರ ಸೂಚನೆಯೇ ಆಗಿದೆ. ಇದೇ ಸಂದರ್ಭದಲ್ಲಿ 6 ರಿಂದ 10ನೆ ತರಗತಿಯವರೆಗಿನ ಪಠ್ಯಕ್ರಮವನ್ನು ಪರಿಷ್ಕರಿಸುವ ಮೂಲಕ ಬಿಜೆಪಿ ಸರ್ಕಾರ ಶೈಕ್ಷಣಿಕ ವಲಯವನ್ನು ಸಂಪೂರ್ಣ ಕೇಸರೀಕರಣ ಮಾಡಲು ಮುಂದಾಗಿದೆ. ಭಗತ್ ಸಿಂಗ್, ನಾರಾಯಣ ಗುರು ಕುರಿತ ಪಾಠ, ಪದ್ಯಗಳನ್ನು ಕೈಬಿಡುವುದು, ರಾಜ್ಯದ ಪುರೋಗಾಮಿ ಸಾಹಿತಿಗಳ ಪಠ್ಯಗಳನ್ನು ತೆಗೆದುಹಾಕುವುದು, ಕುವೆಂಪು ಅವರ ನಾಡಗೀತೆಗೆ ಅಪಮಾನ ಮಾಡಿರುವ ವ್ಯಕ್ತಿಯನ್ನು ಪಠ್ಯಪರಿಷ್ಕರಣ ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿರುವುದು ಇವೇ ಮುಂತಾದ ವಿವಾದಗಳಿಂದ ಈ ವರ್ಷ ರಾಜ್ಯದ ಮಕ್ಕಳಿಗೆ ಸೂಕ್ತ ಸಮಯದಲ್ಲಿ ಪಠ್ಯಗಳನ್ನು ಒದಗಿಸಲಾಗುತ್ತಿಲ್ಲ.

ತನ್ನ ಹಿಂದುತ್ವ ಕಾರ್ಯಸೂಚಿಯನ್ನು ಶತಾಯಗತಾಯ ಜಾರಿಗೊಳಿಸುವ ಅವಸರದಲ್ಲಿದ್ದಂತಿರುವ ರಾಜ್ಯ ಬಿಜೆಪಿ ಸರ್ಕಾರ ಶಿಕ್ಷಣವನ್ನು ಕೇಸರೀಕರಣ ಮಾಡುವ ಮೂಲಕ, ಪ್ರಗತಿಪರ, ಪುರೋಗಾಮಿ ಚಿಂತನೆಗಳ ಎಲ್ಲ ಪಠ್ಯಗಳಿಗೂ ಕತ್ತರಿ ಹಾಕಲು ಮುಂದಾಗಿದೆ. ಭಾರತದ ಪಾರಂಪರಿಕ ಇತಿಹಾಸವನ್ನು ವೈಭವೀಕರಿಸುವ ನೆಪದಲ್ಲಿ ಪ್ರಾಚೀನ ಸಾಂಸ್ಕೃತಿಕ ಆಚರಣೆಗಳನ್ನು ಮತ್ತು ಪದ್ಧತಿಗಳನ್ನು ಪಠ್ಯಕ್ರಮದಲ್ಲಿ ಅಳವಡಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಸಂಘಪರಿವಾರದ ಕಾರ್ಯಸೂಚಿಯನ್ನು ಜಾರಿಗೊಳಿಸಲು ಶತಪ್ರಯತ್ನ ಮಾಡಲಾಗುತ್ತಿದೆ. ಈ ಹಿಂದೆ ಇದ್ದ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಪಠ್ಯ ಪರಿಷ್ಕರಣ ಸಮಿತಿಯಲ್ಲಿ ತುಕಡೇ ತುಕಡೇ ಗ್ಯಾಂಗ್ ಇದೆ, ದೇಶದ್ರೋಹಿಗಳ ಗುಂಪು ಇದೆ ಎಂದು ಹೇಳುವ ಮೂಲಕ ರಾಜ್ಯ ಶಿಕ್ಷಣ ಸಚಿವರು ತಮ್ಮ ಅಸಹಿಷ್ಣುತೆಯನ್ನು ಪ್ರದರ್ಶಿಸಿದ್ದಾರೆ.

ಏತನ್ಮಧ್ಯೆ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಬಳಿ ಇರುವ ಐತಿಹಾಸಿಕ ವಿದುರಾಶ್ವತ್ಥದಲ್ಲಿ ನಿರ್ಮಿಸಲಾಗಿರುವ ಸ್ವಾತಂತ್ರ್ಯ ಸಂಗ್ರಾಮದ ಸ್ಮಾರಕ ಕಟ್ಟಡ ಮತ್ತು ಚಿತ್ರ ಗ್ಯಾಲರಿಯ ಮೇಲೆ ಹಿಂದೂ ಬಲಪಂಥೀಯರ ಕೆಂಗಣ್ಣು ಬಿದ್ದಿದ್ದು, ಈ ಚಿತ್ರ ಗ್ಯಾಲರಿಯಲ್ಲಿ ಗಾಂಧಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ ಎಂದೂ, ಸಾವರ್ಕರ್ ಅವರನ್ನು ಅವಮಾನಿಸಲಾಗಿದೆ ಎಂದೂ, ಟಿಪ್ಪು ಸೇರಿದಂತೆ ಮುಸ್ಲಿಂ ನಾಯಕರಿಗೆ ಹೆಚ್ಚಿನ ಗೌರವ ನೀಡಲಾಗಿದೆ ಎಂದೂ ಆರೋಪಿಸಿರುವ ಕೆಲವು ಬಲಪಂಥೀಯ ಸಂಘಟನೆಗಳು, ಗ್ಯಾಲರಿಯನ್ನು ಹಾನಿ ಮಾಡುವುದಾಗಿ ಬೆದರಿಕೆ ಹಾಕಿರುವುದು ಬೆಳಕಿಗೆ ಬಂದಿದೆ. ಸ್ಥಳೀಯ ಶಾಸಕರ ಮತ್ತು ಸಂಘಟನೆಗಳ ಪ್ರಯತ್ನಗಳಿಂದ ಈ ಚಾರಿತ್ರಿಕ ಸ್ಮಾರಕದ ಬಳಿ ಶಾಂತಿ ನೆಲೆಸಿದ್ದು, ಯಾವುದೇ ಸಂದರ್ಭದಲ್ಲಿ ಪ್ರಕ್ಷುಬ್ಧ ವಾತಾವರಣ ಸೃಷ್ಟಿಯಾಗುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ.

ಈ ನಡುವೆ ಕಳೆದ ವಾರದಲ್ಲಿ ದಕ್ಷಿಣ ಕನ್ನಡದಲ್ಲಿ ಮೂರು ಹತ್ಯೆಗಳು ಸಂಭವಿಸಿವೆ. ಬಿಜೆಪಿ ಯುವಮೋರ್ಚಾದ ಕಾರ್ಯಕರ್ತ ಪ್ರವೀಣ್ ನೆಟ್ಟಾರೆ ಹತ್ಯೆಯಾದ ಮರುದಿನವೇ ಸುರತ್ಕಲ್‌ನಲ್ಲಿ ಫಾಜಿಲ್ ಎಂಬ ಮುಸ್ಲಿಮ್ ವ್ಯಕ್ತಿಯ ಹತ್ಯೆಯಾಗಿದೆ. ಇದಕ್ಕೂ ಒಂದು ವಾರದ ಮುನ್ನ ಉಡುಪಿಯ ಮಸೂದ್ ಎಂಬ ವ್ಯಕ್ತಿಯ ಹತ್ಯೆಯಾಗಿತ್ತು. ಈ ಹತ್ಯೆಗಳ ಹಿಂದೆ ಮತಾಂಧ ರಾಜಕಾರಣದ ಛಾಯೆ ಇರುವುದು ಸ್ಪಷ್ಟವಾಗಿದ್ದು, ಬಹುಸಮಖ್ಯಾತ ಮತ್ತು ಅಲ್ಪಸಂಖ್ಯಾತ ಸಮುದಾಯದ ಮತಾಂಧ ಶಕ್ತಿಗಳು ಕರಾವಳಿ ಕರ್ನಾಟಕವನ್ನು ಕೋಮುದ್ವೇಷ, ಮತದ್ವೇಷದ ತಾಣವಾಗಿಸಿವೆ. ಇಂತಹ ದುಷ್ಕೃತ್ಯಗಳನ್ನು ನಿಯಂತ್ರಿಸಲು ಕ್ರಮ ಜರುಗಿಸಬೇಕಾದ ಬೊಮ್ಮಾಯಿ ಸರ್ಕಾರ ರಾಜ್ಯದಲ್ಲಿ ಯೋಗಿ ಮಾದರಿಯನ್ನು ಅಗತ್ಯ ಬಿದ್ದರೆ ಜಾರಿಗೊಳಿಸುವುದಾಗಿ ಹೇಳಿರುವುದು ದುರಾದೃಷ್ಟಕರ. ಉನ್ನತ ಶಿಕ್ಷಣ ಸಚಿವ ಅಶ್ವತ್ಥ ನಾರಾಯಣ್, ಎನ್ಕೌಂಟರ್ ಮೂಲಕ ಹತ್ಯೆಗಳನ್ನು ನಿಯಂತ್ರಿಸುತ್ತೇವೆ ಎಂದು ಹೇಳಿರುವುದು ಬೇಜವಾಬ್ದಾರಿ ಹೇಳಿಕೆಯಾಗಿದೆ.

ಈ ಜ್ವಲಂತ ಸಮಸ್ಯೆಗಳ ನಡುವೆಯೇ ಕರ್ನಾಟಕ 2023ರ ವಿಧಾನಸಭಾ ಚುನಾವಣೆಗಳಿಗೆ ಸಿದ್ಧವಾಗಬೇಕಿದೆ. ಕರ್ನಾಟಕ ಕ್ರಮೇಣ ಕಾರ್ಪೋರೇಟ್ ಬಂಡವಾಳಕ್ಕೆ ಪ್ರಶಸ್ತ ಭೂಮಿಯಾಗುತ್ತಿದ್ದಂತೆಯೇ ಹಿಂದುತ್ವ ರಾಜಕಾರಣದ ಕೋಮುವಾದಿ ಕಾರ್ಯಸೂಚಿಗೂ ಮುಕ್ತ ವಾತಾವರಣವನ್ನು ಸೃಷ್ಟಿಸಿಕೊಳ್ಳುತ್ತಿದೆ. ಕಾರ್ಪೋರೇಟ್ ಸ್ನೇಹಿ-ಕೋಮುವಾದಿ ಆಡಳಿತವನ್ನು ಕೊನೆಗೊಳಿಸಲು ಇರುವ ಏಕೈಕ ಮಾರ್ಗ ಎಂದರೆ 2023ರ ಚುನಾವಣೆಗಳ ವೇಳೆಗೆ ಪರ್ಯಾಯ ರಾಜಕೀಯ ಶಕ್ತಿಯನ್ನು ರೂಪಿಸುವುದೇ ಆಗಿದೆ. ಈ ನಿಟ್ಟಿನಲ್ಲಿ ಎಲ್ಲ ಪ್ರಗತಿಪರ, ಎಡಪಂಥೀಯ ಸಂಘಟನೆಗಳು ಮತ್ತು ಜಾತ್ಯತೀತ ಪಕ್ಷಗಳು ಒಗ್ಗೂಡುವ ಅನಿವಾರ್ಯತೆಯೂ ಎದುರಾಗಿದೆ. ★



**ಸೌಹಾರ್ದ, ಸಮೃದ್ಧ, ಜನತಾ ಕರ್ನಾಟಕ ನಿರ್ಮಾಣಕ್ಕಾಗಿ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳ ರಾಜ್ಯ ಮಟ್ಟದ ಸಮಾವೇಶವು ದಿನಾಂಕ 16.07.2022ರಂದು ಆಯೋಜಿಸಲಾಗಿತ್ತು. CPI, CPI(M), CPI(ML) Liberation, SUCI(C), AIFB, RPI ಮತ್ತು ಸ್ವರಾಜ್ ಇಂಡಿಯಾ ಪಕ್ಷಗಳು ಈ ಸಮಾವೇಶದ ಭಾಗಿಯಾಗಿದ್ದರು** | ಚಿತ್ರ: ಲೇಖ ಅಡವಿ

# ಬುಲ್ಡೋಜ್ ಮಾಡಲಾದ ನ್ಯಾಯ

ಪ್ರಕ್ಷುಬ್ಧಗೊಳಿಸುವಂತಹ ಘಟನೆಗಳನ್ನು ನಾವು ನೋಡುತ್ತಿದ್ದೇವೆ. ಭಾರತದಾದ್ಯಂತ ಹಿಂದೂ ಧಾರ್ಮಿಕ ಹಬ್ಬಗಳನ್ನು ನೆಪವಾಗಿಟ್ಟುಕೊಂಡು, ಆರ್‌ಎಸ್‌ಎಸ್ ಅಂಗಸಂಸ್ಥೆಗಳು ಮುಸ್ಲಿಂ ಪ್ರದೇಶಗಳ ಮೂಲಕ ಬೆದರಿಕೆಯ ಸಶಸ್ತ್ರ ಮೆರವಣಿಗೆಗಳನ್ನು ಆಯೋಜಿಸಿ, ಹಿಂದೂ ಪರಮಾಧಿಕಾರವನ್ನು ಒಪ್ಪಿಕೊಳ್ಳುವವರಿಗೆ ಮಾತ್ರ ಭಾರತದಲ್ಲಿ ಉಳಿಯಲು ಅವಕಾಶವಿದೆ ಎಂದು ಘೋಷಿಸುವ ಘೋಷಣೆಗಳನ್ನು ಕೂಗುತ್ತಿದ್ದಾರೆ. ಮೊದಲು ರಾಮ ನವಮಿಯಂದು, ಮತ್ತು ನಂತರ ಹನುಮ ಜಯಂತಿಯಂದು, RSS-ಸಂಯೋಜಿತ ಸಂಘಟನೆಗಳು ಮುಸ್ಲಿಮರನ್ನು ಅವಮಾನಿಸುವ, ಬೆದರಿಸುವ ಮತ್ತು ದಾಳಿ ಮಾಡುವ ಉದ್ದೇಶದಿಂದ ಮೆರವಣಿಗೆಗಳನ್ನು ನಡೆಸಿ, ಮಸೀದಿಗಳನ್ನು ಧ್ವಂಸಗೊಳಿಸಿದವು. ಈ ಹಿಂಸಾತ್ಮಕ ಮೆರವಣಿಗೆಗಳು ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದಿಂದ ಕೆಲವು ಸ್ಥಳಗಳಲ್ಲಿ ಪ್ರತೀಕಾರದ ಕಲ್ಲು ತೂರಾಟವನ್ನು ಎದುರಿಸಿದವು.

ಬಿಜೆಪಿ ಆಡಳಿತವಿರುವ ಮಧ್ಯಪ್ರದೇಶದ ಖಾರ್ಗೋನ್‌ನಲ್ಲಿ, ರಾಮನವಮಿ ಹಿಂಸಾಚಾರದ ಮರುದಿನ, ರಾಜ್ಯದ ಅಧಿಕಾರಿಗಳು ಪೀಡಿತ ಮುಸ್ಲಿಂ ಪ್ರದೇಶದಲ್ಲಿ ಮನೆಗಳನ್ನು ಧ್ವಂಸ ಮಾಡಲು ಬುಲ್ಡೋಜರ್‌ಗಳನ್ನು ಕಳುಹಿಸಿದ್ದಾರೆ. "ಅತಿಕ್ರಮಣಗಳನ್ನು" ತೆಗೆದುಹಾಕಲು ಡೆಮಾಲಿಷನ್ ಡ್ರೈವ್ ಎಂದು ಸ್ಥಳೀಯ ಅಧಿಕಾರಿಗಳು ಹೇಳಿಕೊಂಡರೆ, "ಗಲಭೆಕೋರರ" ಮನೆಗಳನ್ನು ಕೆಡವಲು ಯಾವಾಗಲೂ ಬುಲ್ಡೋಜರ್‌ಗಳನ್ನು ಕಳುಹಿಸಲಾಗುವುದು ಎಂದು ರಾಜ್ಯ ಗೃಹ ಸಚಿವರು ಘೋಷಿಸಿದ್ದಾರೆ. ಅಂತೆಯೇ ಉತ್ತರಾಖಂಡದ ರೂರ್ಕಿಯಲ್ಲಿ, ಮೂರು ಹಳ್ಳಿಗಳಲ್ಲಿ ಹನುಮ ಜಯಂತಿ ಮೆರವಣಿಗೆಯಲ್ಲಿ ಮಸೀದಿಯ ಮುಂದೆ "ನೀವು ಭಾರತದಲ್ಲಿ ವಾಸಿಸಲು ಬಯಸಿದರೆ ನೀವು ರಾಮನನ್ನು ಪೂಜಿಸಬೇಕು" ಸೇರಿದಂತೆ ಮುಸ್ಲಿಂ ವಿರೋಧಿ ಘೋಷಣೆಗಳನ್ನು ಕೂಗಿದ್ದಾರೆ. ಮರುದಿನ, ಪೊಲೀಸರು ಬುಲ್ಡೋಜರ್‌ಗಳನ್ನು ಹಳ್ಳಿಗಳಲ್ಲಿ ನಿಲ್ಲಿಸಿ ಮುಸ್ಲಿಮರನ್ನು ಶರಣಾಗುವಂತೆಯೂ ಇಲ್ಲದಿದ್ದರೆ ಅವರು ತಮ್ಮ ಮನೆಗಳನ್ನು ನೆಲಸಮಗೊಳಿಸಬೇಕಾಗುತ್ತದೆ ಎಂದೂ ಬೆದರಿಕೆ ಹಾಕಿದ್ದಾರೆ.

ದೆಹಲಿಯ ಜಹಾಂಗೀರ್‌ಪುರಿಯಲ್ಲಿ, ಬಿಜೆಪಿ ನಿಯಂತ್ರಣದಲ್ಲಿರುವ ದೆಹಲಿಯ ಮುನ್ಸಿಪಲ್ ಕಾರ್ಪೊರೇಷನ್, ಮೋದಿ ಸರ್ಕಾರದ ದೆಹಲಿ ಪೊಲೀಸರು ಮತ್ತು ದೆಹಲಿ ಆಮ್ ಆದ್ಮಿ ಪಕ್ಷದ ಸರ್ಕಾರದ ಲೋಕೋಪಯೋಗಿ ಇಲಾಖೆ ಮತ್ತು ಆರೋಗ್ಯ ಇಲಾಖೆಗಳ ಜೊತೆಯಲ್ಲಿ ಮಸೀದಿಯ ಸಮೀಪವಿರುವ ಮುಸ್ಲಿಂ ಮನೆಗಳು ಮತ್ತು ಅಂಗಡಿಗಳನ್ನು ಧ್ವಂಸಗೊಳಿಸುತ್ತಿದೆ. ಏಪ್ರಿಲ್ 16 ರಂದು ಹನುಮ ಜಯಂತಿ ಮೆರವಣಿಗೆಯ ಸಂದರ್ಭದಲ್ಲಿ ಅದೇ ಮಸೀದಿಯನ್ನು ಧ್ವಂಸಗೊಳಿಸಲಾಯಿತು.

ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ್ದರೂ ಧ್ವಂಸ ಕಾರ್ಯ ಮುಂದುವರಿದಿದೆ. ರಾಜ್ಯದ ಪೋಲೀಸ್, ಮುನಿಸಿಪಾಲಿಟಿ ಮತ್ತು ಇತರ ಅಧಿಕಾರಿಗಳ ಅಸಂವಿಧಾನಿಕ ಹಿಂದೂ ಪರಮಾಧಿಕಾರದ ಈ ಮಾದರಿಯನ್ನು ಯುಪಿಯಲ್ಲಿನ ಯೋಗಿ ಸರ್ಕಾರದಿಂದ ನಕಲಿಸಲಾಗಿದೆ. ಚುನಾವಣೆಯ ಸಂದರ್ಭದಲ್ಲಿ ಯೋಗಿ ಅವರು ಅಪರಾಧಿಗಳ ಮನೆಗಳನ್ನು ಕೆಡವುವ "ಬುಲ್ಡೋಜರ್ ಬಾಬಾ" ಎಂದು ಹೇಳಿಕೊಂಡರು. ಚುನಾವಣೆಯ ನಂತರ, ಯುಪಿಯಲ್ಲಿ, ಹಿಂದೂ ಮಹಿಳೆಯರನ್ನು "ಅತ್ಯಾಚಾರ" ಮಾಡಿದ ಆರೋಪ ಹೊತ್ತಿರುವ ಮುಸ್ಲಿಂ ಪುರುಷರ ಮನೆಗಳ ಹೊರಗೆ ಪೊಲೀಸರು ಬುಲ್ಡೋಜರ್‌ಗಳನ್ನು ಇರಿಸಿದ್ದಾರೆ. ಹಿಂದೂ ಮಹಿಳೆಯರೊಂದಿಗೆ ಒಮ್ಮತದ ಸಂಬಂಧ ಹೊಂದಿರುವ ಮುಸ್ಲಿಂ ಪುರುಷರು ಮತ್ತು ಹಿಂದೂ ಮಹಿಳೆಯರ ಪೋಷಕರಿಂದ ಅತ್ಯಾಚಾರದ ಆರೋಪವನ್ನು ಹೆಚ್ಚಾಗಿ ಎದುರಿಸುತ್ತಾರೆ. ಅಂತಹ ಮುಸ್ಲಿಂ ಪುರುಷರನ್ನು ಕೋಮುವಾದಿ ಬಿಜೆಪಿಯು ಅತ್ಯಾಚಾರಿಗಳೆಂದು ನಿರೂಪಿಸುತ್ತದೆ.

ಹಿಂಸಾತ್ಮಕ ಹಿಂದೂ ಪರಮಾಧಿಕಾರದ ಪ್ರತಿಪಾದಕರೊಂದಿಗೆ ಪೊಲೀಸ್ ಸಹಭಾಗಿತ್ವವಿದೆ. ಹಾಗಾಗಿ, ಹನುಮ ಜಯಂತಿಯ ದಿನದಂದು ಹಿಂಸಾತ್ಮಕ ಘಟನೆಗಳ ನಂತರ ದೆಹಲಿಯಲ್ಲಿ ಹೆಚ್ಚಿನ ಬಂಧನಗಳು ಮುಸ್ಲಿಮರದ್ದಾಗಿವೆ. ಬಿಜೆಪಿ ಮತ್ತು ಎನ್‌ಡಿಎ ಆಡಳಿತವಿರುವ ರಾಜ್ಯಗಳಲ್ಲೂ ಇದೇ ಮಾದರಿ ಅನುಸರಿಸಲಾಗುತ್ತಿದೆ. ರಾಜಸ್ಥಾನ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದಂತಹ ಪ್ರತಿಪಕ್ಷಗಳ ಆಳ್ವಿಕೆಯ ರಾಜ್ಯಗಳಲ್ಲಿಯೂ ಸಹ, ಹಿಂದೂ ಬಹುಸಂಖ್ಯಾವಾದಿಗಳು ಅದೇ ರೀತಿಯ ಸಶಸ್ತ್ರ ಮೆರವಣಿಗೆಗಳನ್ನು ನಡೆಸಲು ಮತ್ತು ಮುಸ್ಲಿಮರ ವಿರುದ್ಧ ನಿಂದನೆ, ಬೆದರಿಕೆ ಮತ್ತು ಹಿಂಸಾಚಾರವನ್ನು ನಡೆಸಲು ಅನುಮತಿಸಲಾಗಿದೆ. ಇದು ಕೆಲವು ಸಂದರ್ಭಗಳಲ್ಲಿ ಗಲಭೆ ಮತ್ತು ಪ್ರತೀಕಾರದ ಕಲ್ಲು ತೂರಾಟಕ್ಕೆ ಕಾರಣವಾಯಿತು. ಶಾಂತಿ ಮತ್ತು ನ್ಯಾಯಕ್ಕಾಗಿ ವ್ಯರ್ಥವಾಗಿ ಕಾಯುತ್ತಿರುವ ಅಲ್ಪಸಂಖ್ಯಾತ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಗಳನ್ನು ರಕ್ಷಿಸಲು ವಿರೋಧ ಪಕ್ಷದ ಆಡಳಿತವಿರುವ ರಾಜ್ಯಗಳು ಸಹ ವಿಫಲರಾಗುತ್ತಿರುವುದು ವಿವೇಚನಾರಹಿತವಾಗಿದೆ. ಉದಾಹರಣೆಗೆ ದೆಹಲಿ ಧ್ವಂಸಗಳ ಬಗ್ಗೆ ಆಮ್ ಆದ್ಮಿ ಪಕ್ಷದ ಮೌನವು ನಾಚಿಕೆಗೇಡಿನ ಸಂಗತಿಯಾಗಿದೆ.

**ಶಾಂತಿ ಮತ್ತು ನ್ಯಾಯಕ್ಕಾಗಿ ವ್ಯರ್ಥವಾಗಿ ಕಾಯುತ್ತಿರುವ ಅಲ್ಪಸಂಖ್ಯಾತ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಗಳನ್ನು ರಕ್ಷಿಸಲು ವಿರೋಧ ಪಕ್ಷದ ಆಡಳಿತವಿರುವ ರಾಜ್ಯಗಳು ಸಹ ವಿಫಲರಾಗುತ್ತಿರುವುದು ವಿವೇಚನಾರಹಿತವಾಗಿದೆ.**

ಈ ಸಂಘಟಿತವಾದ ಹಿಂದೂ-ಪರಮಾಧಿಕಾರದ ಭಯೋತ್ಪಾದನೆಯ ಪ್ರದರ್ಶನಗಳು ಹಿಂದೂ-ಮೇಲುಗೈ ಕಟ್ಟುಪಾಡುಗಳು ಮತ್ತು ಬೆದರಿಕೆಗಳ ನಿರಂತರ ವಾಗ್ದಾಳಿಯೊಂದಿಗೆ ಸೇರಿಕೊಂಡಿವೆ: ಮುಸ್ಲಿಂ ಮಾರಾಟಗಾರರು ಮತ್ತು ಸೇವಾ ಪೂರೈಕೆದಾರರ ಬಹಿಷ್ಕಾರಕ್ಕೆ ಕರೆ; ಹಲಾಲ್ ಮಾಂಸದ ಮಾರಾಟಗಾರರ ವಿರುದ್ಧ ದ್ವೇಷವನ್ನು ಹುಟ್ಟುಹಾಕುವುದು; ನವರಾತ್ರಿಯಲ್ಲಿ ಮಾಂಸದ ಮಾರಾಟ ಮತ್ತು ಸೇವನೆಯನ್ನು ನಿಷೇಧಿಸುವುದು; ಮತ್ತು ಇತ್ಯಾದಿ. ಮುಸ್ಲಿಮರು ಆಕ್ರಮಣಕಾರರು ಮತ್ತು "ಗಲಭೆಕೋರರು" ಎಂದು ಪ್ರಚಾರ ಮಾಧ್ಯಮಗಳಿಂದ ವರ್ಧಿಸಲ್ಪಟ್ಟ ಬಿಜೆಪಿ ನಿರೂಪಣೆಯಿಂದ ಇಂತಹ ಘಟನೆಗಳನ್ನು ಅನುಸರಿಸಲಾಗಿದೆ. ಇಂದು ನಡೆಯುತ್ತಿರುವ ಈ ಸಂದರ್ಭಗಳಲ್ಲಿ ಮುಸ್ಲಿಮರನ್ನು ದುರದೃಷ್ಟಕರ ಬಲಿಪಶುಗಳೆಂದು ಪರಿಗಣಿಸದೆ ಅವರೇ ಆಕ್ರಮಣಕಾರರು ಎಂಬಂತೆ ಬಿಂಬಿಸಲಾಗುತ್ತಿದೆ... ಬಿಜೆಪಿ-ಪೋಷಿತ ಗುಂಪುಗಳು ಮತ್ತು ಬಿಜೆಪಿ ಸರ್ಕಾರಗಳ ಹಿಂಸಾಚಾರದ ಸಂಪೂರ್ಣ ದೃಶ್ಯಾವಳಿಗಳ ಬಗ್ಗೆ ನ್ಯಾಯಾಲಯಗಳು ಮೌನ ವಹಿಸಿವೆ. ನ್ಯಾಯಾಲಯಗಳ ಮೌನ ನಿಜಕ್ಕೂ ಕಳವಳಕಾರಿ.

ಹಿಂದೂಗಳು ತಮ್ಮ ಮುಸ್ಲಿಂ ನೆರೆಹೊರೆಯವರನ್ನು ರಕ್ಷಿಸುವ ಶ್ಲಾಘನೀಯ ನಿದರ್ಶನಗಳಿದ್ದರೂ, ಹಿಂಸಾಚಾರವನ್ನು ತಡೆಗಟ್ಟಲು ಮತ್ತು ನ್ಯಾಯವನ್ನು ಪಡೆಯಲು ಹೆಚ್ಚಿನ ಪ್ರಯತ್ನಗಳನ್ನು ಪರಿಸ್ಥಿತಿಯು ಒತ್ತಾಯಿಸುತ್ತದೆ. ಪ್ರಜಾಸತಾತ್ಮಕ ಶಕ್ತಿಗಳು, ವಿಶೇಷವಾಗಿ ಬಹುಸಂಖ್ಯಾತ ಸಮುದಾಯದಿಂದ, ಶಾಂತಿ, ಘನತೆ ಮತ್ತು ನ್ಯಾಯಕ್ಕಾಗಿ ಮುಂದಾಗಬೇಕಿದೆ.

★ **ಅನುವಾದ: ನಾ ದಿವಾಕರ್**

# ಹಾಲಿ ಪೌರಕಾರ್ಮಿಕರಿಗೆ ನೇಮಕಾತಿ ಬೇಡ, ಖಾಯಂಗೊಳಿಸಿ!

ಪೌರಕಾರ್ಮಿಕರಿಲ್ಲದ ನಗರ ಹೇಗಿರುತ್ತಾದೆಂದು ಒಮ್ಮೆ ಊಹಿಸಿಕೊಳ್ಳಿ, ಬೀದಿ ಬೀದಿಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ, ಮನೆಯ ಹೊರಗಿನ ಮೂಲೆ ಮೂಲೆಗಳಲ್ಲಿ ಎಲ್ಲೆಂದರಲ್ಲಿ ತುಂಬಿ ತುಳುಕುತ್ತಿರುವ ಕಸದ ರಾಶಿ ಕಣ್ಮುಂದೆ ಇದ್ದಾರೆ ಸಮಾಜದ ಸ್ವಾಸ್ಥ್ಯ ಏನಾಗುತ್ತದೆಂದು ಕಲ್ಪಿಸಿಕೊಳ್ಳಿ, ಊಹಿಸಿಕೊಳ್ಳುವುದು ಸಹ ಕಷ್ಟಸಾಧ್ಯ, ಸರಿ ತಾನೇ? ಏಕೆಂದರೆ ರಾಜ್ಯದಾದ್ಯಂತ ಇರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿ 50,000 ಕ್ಕೂ ಹೆಚ್ಚು ಪೌರಕಾರ್ಮಿಕರು ನಗರಗಳನ್ನು ಸ್ವಚ್ಛವಾಗಿಡುವುದಕ್ಕಾಗಿ, ಘನತ್ಯಾಜ್ಯವನ್ನ ತೆರವುಗೊಳಿಸಲು ಪ್ರತಿದಿನ ಅವಿರತವಾಗಿ ಶ್ರಮಿಸುತ್ತಾರೆ. ದೇಶಾದ್ಯಂತ ಕೋವಿಡ್ ಸಾಂಕ್ರಾಮಿಕ ರೋಗವು ಲಕ್ಷಗಟ್ಟಲೆ ಜೀವಗಳನ್ನು ಬಲಿ ತೆಗೆದುಕೊಂಡಾಗ ಮತ್ತು ಸಾರ್ವಜನಿಕರು ತಮ್ಮ ತಮ್ಮ ಮನೆಗಳಲ್ಲಿ ಇರಬೇಕೆಂದು ಸರ್ಕಾರ ಕಡ್ಡಾಯಗೊಳಿಸಿದಾಗಲೂ ಸಹ, ಪೌರಕಾರ್ಮಿಕರು ತಮ್ಮ ಜೀವವನ್ನು ಲೆಕ್ಕಿಸದೇ, ಅ ಇಡೀ ಸಮಯದಲ್ಲಿ ಕೆಲಸ ಮಾಡಿದರು. ಇವರ ಈ ಕಾರ್ಯಕ್ಕೆ ಸಾರ್ವಜನಿಕರು ಚಪ್ಪಾಳೆ ತಟ್ಟಿ ಪುಷ್ಪವೃಷ್ಟಿಯನ್ನೇ ಪೌರಕಾರ್ಮಿಕರ ಮೇಲೆ ಸುರಿಸಿದರು. ಸದ್ಯಕ್ಕೆ ಕೋರನಾದಂತಹ ಸಂದಿಗ್ಧ ಸಮಯ ಕಳೆದಿದೆ, ಆದರೆ ಸಾಂಕ್ರಾಮಿಕ ರೋಗ ಮತ್ತು ಲಾಕ್‌ಡೌನ್‌ನ ಸಮಯದಲ್ಲಿ ಹಾಗೂ ಅದಕ್ಕೂ ಮೊದಲು ಪೌರಕಾರ್ಮಿಕರು ಎದುರಿಸುತ್ತಿದ್ದಂತಹ ಸಮಸ್ಯೆಗಳು ಮುಂದುವರಿಯುತ್ತಲೇ ಇವೆ. ಅವುಗಳಲ್ಲಿ ಮುಖ್ಯವಾಗಿ ಉದ್ಯೋಗ, ವೇತನ ಮತ್ತು ಸಾಮಾಜಿಕ ಭದ್ರತೆಯ ಕೊರತೆ, ಅಮಾನವೀಯ ಕೆಲಸದ ಪರಿಸ್ಥಿತಿಗಳು ಮತ್ತು ಜೀವನ ನಿರ್ವಹಣೆಯಲ್ಲಿನ ಸಂಧಿಗ್ಧ ಪರಿಸ್ಥಿತಿಗಳು ಈ ಕಾರ್ಮಿಕರನ್ನು ಸದಾ ಕಾಡುತ್ತಲೇ ಇದ್ದಾವೆ.

ಈ ಸಂಕಷ್ಟಗಳಿಂದ ನೊಂದಿರುವ ಪೌರಕಾರ್ಮಿಕರ ಉತ್ತಮ ಜೀವನಕ್ಕಾಗಿ, ಕರ್ನಾಟಕದಾದ್ಯಂತ ಇರುವ ಪೌರಕಾರ್ಮಿಕರ ಅನೇಕ ಸಂಘಟನೆಗಳು 1ನೇ ಜುಲೈ 2022 ರಿಂದ ಅನಿರ್ದಿಷ್ಟಾವಧಿಗೆ ಅಹೋರಾತ್ರಿ ಮುಷ್ಕರ ನಡೆಸಲು ತೀರ್ಮಾನಿಸಿ ನಾಲ್ಕು ದಿನದ ಮುಷ್ಕರ ನಡೆಸಿ ಗೆಲುವನ್ನು ಪಡೆದುಕೊಂಡರು. ಪೌರಕಾರ್ಮಿಕರ ಸೇವೆಯನ್ನು ಖಾಯಂಗೊಳಿಸುವುದು ಈ ಮುಷ್ಕರದ ಪ್ರಮುಖ ಹಕ್ಕೋತ್ತಾಯವಾಗಿದೆ.

ಬಹುಪಾಲು ಪೌರಕಾರ್ಮಿಕರು ಗತಕಾಲದಿಂದ ಶೋಷಣೆಗೊಳಪಟ್ಟು ತುಳಿತಕ್ಕೊಳಗಾದ ದಲಿತ ಸಮುದಾಯಕ್ಕೆ ಸೇರಿದವರಾಗಿದ್ದಾರೆ ಮತ್ತು ಅದರಲ್ಲೂ ಹೆಚ್ಚಿನವರು ಮಹಿಳೆಯರೇ ಆಗಿದ್ದಾರೆ ಎಂಬುವ ಅಂಶಗಳನ್ನು ಬಹುಮುಖ್ಯವಾಗಿ ಗಮನಿಸಬೇಕಾಗಿದೆ. ದಲಿತರಾಗಿ ಮತ್ತು ಮಹಿಳೆಯರಾಗಿ ಈ ಶೋಷಿತ ಸಮುದಾಯಗಳಿಂದ ಬಂದ ಪೌರಕಾರ್ಮಿಕರು ನಗರವನ್ನು ಸ್ವಚ್ಛವಾಗಿಡುವ ಮೂಲಕ ಎಲ್ಲಾ ಜನರ ಆರೋಗ್ಯವನ್ನು ಕಾಪಾಡುವ ಪ್ರಮುಖ ಕೆಲಸವನ್ನು ನಿರ್ವಹಿಸುತ್ತಿದ್ದಾರೆ, ಆದರೆ ಅಧಿಕಾರಿಗಳು ಮತ್ತು ಸಾರ್ವಜನಿಕರು ಈ ಪೌರಕಾರ್ಮಿಕರು ದಲಿತರೆಂಬ ಕಾರಣಕ್ಕೆ ಅವರ ವಿರುದ್ಧ ತಾರತಮ್ಯ ಮತ್ತು ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ. ಪೌರಕಾರ್ಮಿಕರು ಕೆಲಸ ಮಾಡುವ ಸ್ಥಳಗಳಲ್ಲಿ ಕುಡಿಯವ ನೀರಿನ ವ್ಯವಸ್ಥೆ ಇರುವುದಿಲ್ಲ, ಅಕ್ಕಪಕ್ಕದ ಮನೆಯವರನ್ನು ಕೇಳಿದರೆ ಕೆಲವರು ಕೊಡಲು ನಿರಾಕರಿಸುತ್ತಾರೆ ಮತ್ತೇ ಕೆಲವರು ಶೌಚಾಲಯಕ್ಕೆ ಬಳಸುವ ಜಗ್‌ಗಳಲ್ಲಿ ನೀರು ನೀಡುತ್ತಾರೆ. ಘನತ್ಯಾಜ್ಯ ವಿಲೇವಾರಿಯ ಕೆಲಸವು ಅನ್ನೈರ್ಮಲೀಕರಣದಿಂದ ಕೂಡಿದ್ದು, ಈ ಕೆಲಸ ಮಾಡುವ ಪೌರಕಾರ್ಮಿಕರಿಗೆ ಸೂಕ್ತ ರಕ್ಷಣಾತ್ಮಕ ಪರಿಕಾರಗಳನ್ನು ನೀಡಿರುವುದಿಲ್ಲ. ಅದು ಅಲ್ಲದೆ ಕಸಗುಡಿಸುವ ಮತ್ತು ಮನೆ ಮನೆಗಳಿಂದ ಕಸ ಸಂಗ್ರಹಿಸಲು ಸೂಕ್ತ ಸಲಕರಣೆಗಳನ್ನು ಸಹ ನೀಡಿರುವುದಿಲ್ಲ. ಇಷ್ಟೆಲ್ಲಾ ಸಂಕಷ್ಟಗಳ ನಡುವೆಯು ಸಮಾಜದ ಸ್ವಾಸ್ಥ್ಯ ಕಾಪಾಡುವ ಪೌರಕಾರ್ಮಿಕರು ಹಲವಾರು ರೋಗ ರುಜನಿಗಳಿಗೆ ಅತಿಬೇಗ ತುತ್ತಾಗಿ ಸಮಾಜಕ್ಕಾಗಿ ಜೀವ ಬಿಡುತ್ತಾರೆ.

ಹೀಗಾಗಿ ಪೌರಕಾರ್ಮಿಕರು ತಮ್ಮ ಬದುಕು ಸಂಕಷ್ಟದಲ್ಲಿರುವುದರಿಂದ ರಾಜ್ಯ ಸರ್ಕಾರ ಮತ್ತು ಸಮಾಜದ ಗಮನ ಸೆಳೆಯಲು ಮುಷ್ಕರದಂತಹ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಬಂದೋದಗಿದೆ.




**ಜೂಲೈ 1ರಿಂದ 4ನೇ ತಾರೇಕಿನ ವರೆಗೂ ಕರ್ನಾಟಕ ರಾಜ್ಯದಾದ್ಯಂತ ಪೌರಕಾರ್ಮಿಕರು ತಮ್ಮ ಹುದ್ದೆಗಳ ಖಾಯಮಾತಿಗಾಗಿ ದಿಟ್ಟ ಹೋರಾಟವನ್ನು ನಡೆಸಿದರು. ಅದರಲ್ಲಿ ಎಐಸಿಸಿಟಿಯು ಸಂಯೋಜಿತ ಸಂಘಟನೆಗಳಾದ ಬಿಬಿಎಂಪಿ ಪೌರಕಾರ್ಮಿಕರ ಸಂಘ ಮತ್ತು ಕರ್ನಾಟಕ ಪ್ರಗತಿಪರ ಪೌರಕಾರ್ಮಿಕರ ಸಂಘ ಮುಂದಾಳತ್ವವನ್ನು ವಹಿಸಿತ್ತು | ಚಿತ್ರ: ಮೈತ್ರೇಯಿ ಕೃಷ್ಣನ್**

ಪೌರಕಾರ್ಮಿಕರು ಮುಷ್ಕರದಂತಹ ಕಠಿಣಕ್ರಮಕ್ಕೆ ಏಕೆ ಮುಂದಾಗಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು, ನಾವು ಅವರ ಕೆಲಸದ ಪರಿಸ್ಥಿತಿಗಳು, ಸೇವಾ ಸೌಲಭ್ಯಗಳ ಪರಿಸ್ಥಿತಿಗಳು ಮತ್ತು ಅವರ ಜೀವನದ ಇತರ ಅಂಶಗಳನ್ನು ನೋಡಬೇಕಾಗಿದೆ. ಮೇ 2016 ರ ಹಿಂದೆಯೇ ಎಲ್ಲಾ ಪೌರಕಾರ್ಮಿಕರ ಸೇವೆಗಳನ್ನು ಮಾರ್ಚ್ 2017 ರೊಳಗೆ ಖಾಯಂಗೊಳಿಸಲು ಅಂದಿನ ಸರ್ಕಾರದ ಕ್ಯಾಬಿನೆಟ್ ನಿರ್ಧಾರವನ್ನು ತೆಗೆದುಕೊಂಡಿತ್ತು. ಆದರೆ ಇಲ್ಲಿಯ ತನಕ ಯಾವುದೇ ಪ್ರಕ್ರಿಯೆ ನಡೆಯದೇ ಇರುವುದನ್ನು ಗಮನಿಸಿದರೆ, ಪೌರಕಾರ್ಮಿಕರ ಬವಣೆಗಳು ಏನೆಂದು ಸ್ಪಷ್ಟವಾಗಿ ತಿಳಿಯುತ್ತವೆ.

ಇಂದು, ರಾಜ್ಯದಲ್ಲಿರುವ 288 ನಗರ ಸ್ಥಳೀಯ ಸಂಸ್ಥೆಗಳಲ್ಲಿ 54,512 ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ, ಅವರಲ್ಲಿ 10,755 ಖಾಯಂ ಪೌರಕಾರ್ಮಿಕರು ಮಾತ್ರ ವೇತನ ಶ್ರೇಣಿಯ ಪ್ರಕಾರ ವೇತನವನ್ನು ಪಡೆಯುತ್ತಿದ್ದಾರೆ, ವಾರದ ರಜೆ, ಸರ್ಕಾರಿ ಘೋಷಿತ ರಜಾದಿನಗಳು ಮತ್ತು ಇತರೆ ರಜೆಗಳನ್ನು ಪಡೆದುಕೊಳ್ಳುತ್ತಿದ್ದಾರೆ ಹಾಗೂ ನಿವೃತ್ತಿ ಸೇವಾ ಸೌಲಭ್ಯಗಳನ್ನು ಹೊಂದಿದ್ದಾರೆ.

ಉಳಿದವರು ನೇರ-ಪಾವತಿ ಪೌರಕಾರ್ಮಿಕರು, ಇವರಿಗೆ ನಗರ ಸ್ಥಳೀಯ ಸಂಸ್ಥೆಗಳಿಂದ ನೇರವಾಗಿ ವೇತನವನ್ನು ಪಾವತಿಸಲಾಗುತ್ತದೆ ಮತ್ತು ಗುತ್ತಿಗೆ ಪೌರಕಾರ್ಮಿಕರು. ಈ ಕೊನೆಯ ಎರಡು ವರ್ಗದ ಕಾರ್ಮಿಕರಿಗೆ ಕೇವಲ ಕನಿಷ್ಠ ವೇತನವನ್ನು ನೀಡಲಾಗುತ್ತದೆ (ತಿಂಗಳಿಗೆ ಸುಮಾರು ರೂ. 12,000/-) ಮತ್ತು ರಜೆ, ವಾರದ ರಜೆ, ಸರ್ಕಾರಿ ಘೋಷಿತ ರಜಾದಿನಗಳು, ಗ್ರಾಚ್ಯುಟಿ, ನಿವೃತ್ತಿ ಸೌಲಭ್ಯಗಳು ಸೇರಿದಂತೆ ಇತರ ಎಲ್ಲಾ ಸೌಲಭ್ಯಗಳನ್ನು ನಿರಾಕರಿಸಲಾಗಿದೆ. ಅದರಲ್ಲೂ ಗುತ್ತಿಗೆ ಕಾರ್ಮಿಕರ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ, ಏಕೆಂದರೆ, ಗುತ್ತಿಗೆದಾರರು ಪೌರಕಾರ್ಮಿಕರಿಗೆ ನೀಡುವ ಕನಿಷ್ಠ ವೇತನವನ್ನು ಸಹ ದೋಚುತ್ತಿದ್ದಾರೆ ಮತ್ತು ಅತ್ಯಲ್ಪ ವೇತವನ್ನು ನೀಡುತ್ತಿದ್ದಾರೆ.

ಆದರೂ ಎಲ್ಲಾ ಪೌರಕಾರ್ಮಿಕ ವರ್ಗಗಳಲ್ಲಿರುವ ಒಂದು ಸಾಮಾನ್ಯ ಲಕ್ಷಣವೆಂದರೆ ಅಮಾನವೀಯ ಕೆಲಸದ ಪರಿಸ್ಥಿತಿ. ಕರ್ನಾಟಕವು ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳು ಸೇರಿದಂತೆ ವಿವಿಧ ರಂಗಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಸಂಭ್ರಮಿಸುತ್ತಿದೆ, ಆದರೆ ರಾಜ್ಯದಾದ್ಯಂತ ಪೌರಕಾರ್ಮಿಕರು ಅತ್ಯಂತ ಅಮಾನವೀಯ ಪರಿಸ್ಥಿತಿಯಲ್ಲಿ ಅವೈಜ್ಞಾನಿಕ ಮಾದರಿಯಲ್ಲಿ ಬೀದಿ ಕಸಗೂಡಿಸುವುದು ಮತ್ತು ಕಸ ಸಂಗ್ರಹಣೆ ಮಾಡುವ ಅನೈರ್ಮಲೀಕರಣ ಕೆಲಸವನ್ನು ಮಾಡುತ್ತಿದ್ದಾರೆ. ಕೊಳೆತುನಾರುವ ಕಸವನ್ನು ಬರೀ ಕೈಗಳಿಂದಲೇ ಎತ್ತುವಂತೆ ಬಲವಂತ ಪಡಿಸಲಾಗುತ್ತದೆ ಮತ್ತು ಅದನ್ನು ಸಾಗಿಸಲು ಮುರಿದ ಬಿದ್ದಿರುವ ತಳ್ಳುವ ಗಾಡಿಗಳನ್ನು ನೀಡಿದ್ದಾರೆ. ಇದರಿಂದಾಗಿ ಪೌರಕಾರ್ಮಿರು ಬೆನ್ನುನೋವು ಮತ್ತು ಸೊಂಟನೋವಿನಿಂದ ನರಕ ಯಾತನೆ ಅನುಭವಿಸುತ್ತಾರೆ. ಬೆಂಗಳೂರು ಮಹಾನಗರದಂತಹ ವಾಹನ ದಟ್ಟನೆ ಇರುವು ರಸ್ತೆಗಳಲ್ಲಿ ಪೌರಕಾರ್ಮಿಕರು ಮುರಿದ ತಳ್ಳುವಗಾಡಿಗಳ ಮೂಲಕ ಕಸ ಸಾಗಿಸುವಾಗ ಹಲವಾರು ಅಪಘಾತಗಳು ಸಂಭವಿಸಿದ್ದಾವೆ, ಆದರೂ ಅಪಘಾತಕ್ಕೊಳಗಾದ ಪೌರಕಾರ್ಮಿಕರಿಗೆ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ.

ಪಟ್ಟಣಗಳು ಮತ್ತು ನಗರಗಳನ್ನು ಸ್ವಚ್ಛವಾಗಿಡಲು ಹಾಗೂ ಜನರ ಆರೋಗ್ಯವನ್ನು ರಕ್ಷಿಸಲು ಪೌರಕಾರ್ಮಿಕರು ಪ್ರತಿದಿನ ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 2.30 ರವರೆಗೆ ಕೆಲಸ ಮಾಡುತ್ತಾರೆ. ಬೆಂಗಳೂರು ಮತ್ತು ಮೈಸೂರು ಹೊರತುಪಡಿಸಿ, ಇತರ ನಗರ ಸ್ಥಳೀಯ ಸಂಸ್ಥೆಗಳಡಿಯಲ್ಲಿ ಬರುವ ಪೌರಕಾರ್ಮಿಕರು ಗೂಡಿಸುವುದು ಸೇರಿದಂತೆ ಮ್ಯಾನ್‌ಹೋಲ್‌ಗಳು ಮತ್ತು ಚರಂಡಿಗಳನ್ನು ಸ್ವಚ್ಛಗೊಳಿಸುವ ಎರಡು ಕೆಲಸಗಳನ್ನು ಮಾಡುತ್ತಾರೆ. ಇದಲ್ಲದೆ, ಪೌರಕಾರ್ಮಿಕರು ಬೀದಿ ಗುಡಿಸುವ ಮತ್ತು ಮನೆ ಮನೆಗಳಿಂದ ಕಸ ಸಂಗ್ರಹಿಸುವ ಕೆಲಸಗಳ ಜೊತೆಗೆ ರಸ್ತೆಗಳಲ್ಲಿ ಬಿದ್ದಿರುವ ಮಾನವರ ಮಲಮೂತ್ರ ಮಿಶ್ರಿತ ತ್ಯಾಜ್ಯ ಮತ್ತು ಸತ್ತ ಪ್ರಾಣಿಗಳನ್ನು ಬರೀ ಕೈಯಿಂದ ತೆರವುಗೊಳಿಸುವಂತೆ ಒತ್ತಾಯಕ್ಕೊಳಪಡುತ್ತಾರೆ. ನಗರ ಪ್ರದೇಶಗಳಲ್ಲಿ ಮಾನವರ ಮಲ ಮೂತ್ರವನ್ನು ತೆರೆದ ಚರಂಡಿಗಳಿಗೆ ಬಿಡಲಾಗುತ್ತದೆ, ಇದು ಎಲ್ಲಾ ನಗರಗಳಲ್ಲೂ ಸಹ ಸಾಮಾನ್ಯ ಅಭ್ಯಾಸವಾಗಿಬಿಟ್ಟಿದೆ. ಹಾಗೆಯೇ, ಸೂಕ್ತ ಶೌಚಾಲಯಗಳ ವ್ಯವಸ್ಥೆ ಇಲ್ಲದಿರುವುದರಿಂದ ಸಾಕಷ್ಟು ಜನರು ಬಯಲಿನಲ್ಲಿ ಮಲಮೂತ್ರ ವಿಸರ್ಜನೆ ಮಾಡುತ್ತಾರೆ, ಇವುಗಳನ್ನು ಸಹ ಪೌರಕಾರ್ಮಿಕರಿಂದಲೇ ಸ್ವಚ್ಛಗೊಳಿಸಲಾಗುತ್ತದೆ. ಈ ರೀತಿಯ ಕೆಲಸ ಮಲಹೊರುವ ಪದ್ಧತಿಯೇ ಹೊರತು ಬೇರೇನೂ ಅಲ್ಲ.

ಡಾ | ಬಿ.ಆರ್. ಅಂಬೇಡ್ಕರ್ ರವರು "ಜಾತಿ ಕೇವಲ ಕೆಲಸದ ಆಧಾರದ ಮೇಲೆ ಮಾಡಿದ ವಿಭಜನೆಯಲ್ಲ, ಅದು ಕಾರ್ಮಿಕರ ವಿಭಜನೆ" ಎಂದು ಸ್ಪಷ್ಟವಾಗಿ ಘೋಷಿಸಿದರು. ಬಹುಪಾಲು ಪೌರಕಾರ್ಮಿಕರು ದಲಿತ ಸಮುದಾಯಕ್ಕೆ ಸೇರಿದವರು ಮತ್ತು ಈ ಕೆಲಸವನ್ನು ಸ್ವಇಚ್ಛೆಯಿಂದ ಆಯ್ಕೆ ಮಾಡಿಕೊಂಡವರಲ್ಲ, ಆದರೆ ಅವರ ಹುಟ್ಟಿನಿಂದಲೇ, ಅಳಿಸಲಾಗದ ಜಾತಿಯ ಕಳಂಕದಿಂದಾಗಿ, ಭಾರತೀಯ ಜಾತಿ ವ್ಯವಸ್ಥೆಯ ದುಷ್ಟ ಶಕ್ತಿಯು ಪೌರಕಾರ್ಮಿಕರು ವಂಶ ಪರಂಪರ್ಯವಾಗಿ ಈ ವೃತ್ತಿಯನ್ನೇ ಅನಿವಾರ್ಯವಾಗಿ ಆಯ್ಕೆ ಮಾಡಿಕೊಳ್ಳುವಂತೆ ಕೆಟ್ಟ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ ಮತ್ತು ಬಲವಂತ ಪಡಿಸುತ್ತದೆ. ಜಾತಿ ವ್ಯವಸ್ಥೆಯಿಂದ ಕೂಡಿದ ಸಮಾಜ ಮತ್ತು ಆಡಳಿತ ನಡೆಸುವ ಪ್ರಾಬಲ್ಯ ಜಾತಿಗಳು ದಲಿತರಿಂದ ಅನೈರ್ಮಲೀಕರಣ ಕೆಲಸವನ್ನು ಮಾಡುವಂತೆ ಒತ್ತಾಯಪಡಿಸುತ್ತಾರೆ. ಹೀಗಾಗಿ, ಊಳಿಗಮಾನ್ಯ ಜಾತಿವಾದಿ ಸಮಾಜವು ಅಸ್ಪೃಶ್ಯ ಸಮುದಾಯವನ್ನು ಕಸಗೂಡಿಸುವವರು ಮತ್ತು ನೈರ್ಮಲೀಕರಣ ಕೆಲಸ ಮಾಡುವವರು ಎಂದು ಪರಿಗಣಿಸಿದೆ.

ಐಪಿಡಿ ಸಾಲಪ್ಪ ಸಮಿತಿಯ ವರದಿಯನ್ನು ನಾವು ಇಲ್ಲಿ ಸ್ಮರಿಸಿಕೊಳ್ಳಬೇಕು. ಸಾಲಪ್ಪ ಸಮಿತಿಯು, "ಕಸಗುಡಿಸುವವರು ಮತ್ತು ನೈರ್ಮಲೀಕರಣ ಕೆಲಸ ಮಾಡುವವರ ಜೀವನ ಮತ್ತು ಕೆಲಸದ ಪರಿಸ್ಥಿತಿಗಳ ಸುಧಾರಣೆಯ ಕುರಿತು" ವರದಿಯನ್ನು ಏಪ್ರಿಲ್ 1976 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸಲ್ಲಿಸಿ ಕೆಲಸವು ಶಿಫಾರಸ್ಸುಗಳನ್ನು ಮಾಡಿದೆ. ಅವುಗಳು : ತಾತ್ಕಾಲಿಕವಾಗಿ ಉದ್ಯೋಗದಲ್ಲಿರುವ ಮತ್ತು ಒಂದು ವರ್ಷಕ್ಕೆ ಕಡಿಮೆಯಿಲ್ಲದೆ ಸೇವೆಯಲ್ಲಿ ತೊಡಗಿರುವ ಎಲ್ಲಾ ಪೌರಕಾರ್ಮಿಕರನ್ನು ಖಾಯಂಗೊಳಿಸಬೇಕೆಂದು, ನಗರ ಸ್ಥಳೀಯ ಸಂಸ್ಥೆಗಳು ಪ್ರತಿ 1,000 ಜನಸಂಖ್ಯೆಗೆ ಇಬ್ಬರು ಪೌರಕಾರ್ಮಿಕರನ್ನು ನೇಮಿಸಿಕೊಳ್ಳಬೇಕೆಂದು, ಪೌರಕಾರ್ಮಿಕರಿಗೆ ಮೇಲ್ವಿಚಾರಕ ಸಿಬ್ಬಂದಿಯಿಂದ ಮತ್ತು ಸಾರ್ವಜನಿಕರಿಂದ ಆಗುವಂತಹ ನಿಂದನೆ ಮತ್ತು ಅವಮಾನಗಳನ್ನು ನಿಲ್ಲಿಸಬೇಕೆಂದು, ಕೆಲಸದ ಪರಿಸ್ಥಿತಿಗಳನ್ನು ಸುಧಾರಿಸಬೇಕೆಂದು, ಸೂಕ್ತ ವೇತನ, ವಾರದ ರಜೆ/ ಸರ್ಕಾರಿ ಘೋಷಿತ ರಜೆ/ ಇತರೆ ರಜಾ ದಿನಗಳು, ಸಮವಸ್ತ್ರಗಳು, ರಕ್ಷಣಾತ್ಮಕ ಪರಿಕಾರಗಳು ಮತ್ತು ಶುಚಿಗೊಳಿಸಲು ಬೇಕಾಗಿರುವ ಎಲ್ಲಾ ಸಾಧನಗಳನ್ನು ಒದಗಿಸಬೇಕೆಂದು ಹಾಗೂ ಪಿಂಚಣಿ, ಗ್ರಾಚ್ಯುಟಿ, ಜೀವ ವಿಮಾ ಯೋಜನೆ ಮತ್ತು ಕುಟುಂಬ ಕಲ್ಯಾಣ ಯೋಜನೆಗಳ ಪ್ರಯೋಜನಗಳನ್ನು ನೀಡಲು ಸಮಿತಿಯು ಶಿಫಾರಸ್ಸು ಮಾಡಿದೆ. ಮುಖ್ಯವಾಗಿ, ಯಾವುದೇ ಪುರಸಭೆಯಲ್ಲಿ ಪೌರಕಾರ್ಮಿಕರ ಸಂಖ್ಯೆ 200 ಕ್ಕಿಂತ ಕಡಿಮೆಯಿಲ್ಲದಿರುವಲ್ಲಿ ಕಾರ್ಮಿಕ ಕಲ್ಯಾಣ ಅಧಿಕಾರಿಗಳನ್ನು ನೇಮಿಸಲು ಸಮಿತಿ ಶಿಫಾರಸ್ಸು ಮಾಡಿದೆ. ಐ.ಪಿ.ಡಿ. ಸಾಲಪ್ಪ ಸಮಿತಿಯು ಸಂಶೋಧನೆ ನಡೆಸಿ ಮಾಡಿದ ಶಿಫಾರಸ್ಸುಗಳು ಅರ್ಧ ಶತಮಾನದ ನಂತರವೂ ಸಹ ಯಾವುದೇ ಪ್ರಗತಿಯನ್ನು ಕಾಣದೆ ಅದೇ ಸ್ಥಿತಿಯಲ್ಲಿದ್ದಾವೆ ಎನ್ನುವುದನ್ನು ಗಮನಿಸಿದರೆ, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಆಡಳಿತರೂಢ ಸರ್ಕಾರಗಳು ಮಾಡಿದ ಮಹಾ ದ್ರೋಹವಾಗಿದೆ.

## ಪೌರಕಾರ್ಮಿಕರು ಮತ್ತು ಮಕ್ಕಳು

ಇಂದಿನ ಪೌರಕಾರ್ಮಿಕರ ಅನಿರ್ದಿಷ್ಟ ಕಾಲದ ಮುಷ್ಕರ ನ್ಯಾಯಯುತ ವಾದ ಬೇಡಿಕೆಗಳಿಗಾಗಿ ನಡೆಯುತ್ತಿದೆ. ಬಡತನವನ್ನು ಸಾಂಸ್ಥೀಕರಣದ ವಿರುದ್ಧ ವಾಗಿದೆ. ಕೆಲಸ ಇದೆ ಆದರೆ ಅದಕ್ಕೆ ತಕ್ಕ ವೇತನ ಹಾಗೂ ಅದರ ಭದ್ರತೆ ಇಲ್ಲ. ಇದನ್ನೇ under employment ಎನ್ನು ತ್ತಾರೆ. ಮುಖ್ಯ ಬೇಡಿಕೆಗಳು ಕಾರ್ಮಿಕರ ಕೆಲಸದ ಸುತ್ತ ಹೆಣೆಯ ಲಾಗಿದೆ. ಖಾಯಮಾತಿ, ಪಿಂಚಣಿ ಹಾಗೂ ಇತರೆ ಬೇಡಿಕೆಗಳು ಸೇರಿವೆ. ಇನ್ನು ಹೇಳುವುದಾದರೆ ಅವರ ವಾಸ ಹಾಗೂ ಮಕ್ಕಳ ಭವಿಷ್ಯ ಎತ್ತ ಸಾಗುತ್ತಿದೆ? ಮಧ್ಯಮ ವರ್ಗದವರಿಗೆ ಎರಡು ಬೆಡ್ರೂಮ್ ಮನೆ ಇದ್ದರೆ ಅದು ಕನಿಷ್ಠ ಸೌಕರ್ಯ ಎಂದು ಬೇಸರ ಪಡುತ್ತಾರೆ. ಆದರೆ ಬಡ ಪೌರಕಾರ್ಮಿಕರಿಗೆ ಬಾಡಿಗೆ ಮನೆ ಎಂದರೆ ಒಂದು ಕೋಣೆ, ಅದರಲ್ಲಿ ಅಡಿಗೆ ಹಾಗೂ ಸ್ನಾನಕ್ಕೆ ವ್ಯವಸ್ಥೆ.

ಸ್ವತಂತ್ರ ಮಲಗುವ, ಡ್ರಾಯಿಂಗ್ ಕೋಣೆ, ಅಡುಗೆ ಮನೆ ಹಾಗೂ ಬಚ್ಚಲು ಮನೆ ಇರುವುದಿಲ್ಲ. ಇನ್ನು ಓದುವ ಮಕ್ಕಳಿಗೆ ಸ್ಟಡಿ ರೂಂ ಅಂದರೆ ಓದುವ ಕೋಣೆ ಇರುವುದಿಲ್ಲ. ಮಕ್ಕಳು, ಹಿರಿಯರು, ಅಪ್ಪ ಅಮ್ಮ, ಎಲ್ಲರೂ ಅದೇ ಅರ್ಧ ಕೋಣೆಯಲ್ಲಿ ವಾಸಿಸಬೇಕು. ಇದು ಇಡೀ ಕುಟುಂಬಕ್ಕೆ ಜೈಲ್ ಶಿಕ್ಷೆ ಯನ್ನ ಸರ್ಕಾರ ಮಾನ್ಯತೆ ಮಾಡಿದೆ ಎಂದು ಕಾಣುತ್ತದೆ. ಇದರಷ್ಟು ಅಮಾನವೀಯ ಸ್ಥಿತಿ, ಮಾನವಹಕ್ಕುಗಳ ಉಲ್ಲಂಘನೆ ನಮ್ಮ ಪೌರಕಾರ್ಮಿಕರ ಜೀವನದಲ್ಲಿ ದೊಡ್ಡ ದುರಂತ, ಎದ್ದು ಕಾಣುತ್ತದೆ. ಮಕ್ಕಳ ಜೀವನ ಬೀದಿಯಲ್ಲೇ ಸಾಗುತ್ತದೆ. ಹಾಗಾದರೆ ಬೀದಿ ಎಷ್ಟು ಸುರಕ್ಷಿತ? ಓದಿನ ಮೇಲೆ ಹೇಗೆ ಗಮನ ಇರಿಸುವುದು? ಬೀದಿ ಮಕ್ಕಳ ದುರ್ಬಳಕೆ ಈ ಸಮಾಜ ದಲ್ಲಿ ಇಲ್ಲವೇ ? ಪೌರಕಾರ್ಮಿಕ ಕುಟುಂಬಕ್ಕೆ ಘನತೆಯ ಬದುಕಿಗೆ ಅವಕಾಶ ಇಲ್ಲವೇ? ಪೌರಕಾರ್ಮಿಕರ ಬೇಡಿಕೆಗೆ ಸರ್ಕಾರ ಮಾನ್ಯತೆ ನೀಡಬೇಕು. ಅವರು ಈ ದೇಶದ ನಾಗರೀಕರು. ನಾಗರಿಕ ಹಕ್ಕುಗಳಿಗಾಗಿ ನಡೆಯುತ್ತಿರುವ ಮುಷ್ಕ ಕರಕ್ಕೆ ನಮ್ಮ ಬೆಂಬಲವಿದೆ. ಈಗ ಸರ್ಕಾರ ರಾಜಕೀಯ ಇಚ್ಛಾ ಶಕ್ತಿ ತೋರುತ್ತಾ ಎಲ್ಲಾ ಕಾರ್ಮಿಕರ ಬೇಡಿಕೆ ಈಡೇರಿಸಲೇಬೇಕು ಎಂದು ನಾವು ಒತ್ತಾಯಿಸುತ್ತೇವೆ.

**ಡಾ. ರತಿರಾವ್**

ಐತಿಹಾಸಿಕವಾಗಿ ತುಳಿತಕ್ಕೊಳಗಾದ ಮತ್ತು ಶೋಷಿತ ಸಮುದಾಯಗಳ, ವಿಶೇಷವಾಗಿ ದಲಿತರ ಉನ್ನತಿಗಾಗಿ ವಿಸ್ತಾರವಾದ ಕಾರ್ಯವಿಧಾನದ ಮೂಲಕ, ಅವರಿಗಿರುವ ತಾರತಮ್ಯವನ್ನು ಪರಿಹರಿಸಲು, ಸಂವಿಧಾನದಲ್ಲಿ ಕಡ್ಡಾಯಗೊಳಿಸಿರುವುದು ಸಂವಿಧಾನ ರಚನಾಕಾರರ ಕಾಳಜಿಯನ್ನು ತೋರಿಸುತ್ತದೆ. ಅನುಚ್ಛೇದ 17 ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡುತ್ತದೆ. ಅನುಚ್ಛೇದ 46 ರ ಪ್ರಕಾರ ರಾಜ್ಯವು ದುರ್ಬಲ ವರ್ಗದ ಜನರ ಶೈಕ್ಷಣ ಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಕಾಳಜಿಯಿಂದ ಉತ್ತೇಜಿಸಲು ಮತ್ತು ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಸಾಮಾಜಿಕ ಅನ್ಯಾಯ ಮತ್ತು ಎಲ್ಲಾ ರೀತಿಯ ಶೋಷಣೆಯಿಂದ ಅವರನ್ನು ರಕ್ಷಿಸಲು ಬಯಸುತ್ತದೆ. ಹಾಗಾಗಿ ರಾಜ್ಯ ಸರ್ಕಾರವು ಪೌರಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಸಂವಿಧಾನಾತ್ಮಕ ಜವಾಬ್ದಾರಿಯನ್ನು ಹೊಂದಿದೆ. ಇದಲ್ಲದೆ, ಭಾರತದಲ್ಲಿನ ಸಮಾನತೆಯ ನ್ಯಾಯತತ್ವದ ಪ್ರಕಾರ ಔಪಚಾರಿಕ ಸಮಾನತೆಯಿಂದ ವಸ್ತುನಿಷ್ಠ ಸಮಾನತೆಗೆ ಪರಿವರ್ತಿಸುವ ದೃಷ್ಟಿಯಿಂದ ವಿಶೇಷವಾಗಿ ಈ ಕಾರ್ಮಿಕರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಯಾವುದೇ ಅಡ್ಡಿಯಿಲ್ಲ. ಸಮಾಜದಲ್ಲಿ ಅಸ್ತಿತ್ವದಲ್ಲಿರುವ ರಚನಾತ್ಮಕ ಅಸಮಾನತೆಗಳನ್ನು ನಿವಾರಿಸುವುದಕ್ಕಾಗಿ ಸಂವಿಧಾನದಲ್ಲಿ ವಿಶೇಷ ನಿಬಂಧನೆಗಳನ್ನು ಸೇರಿಸಿಲಾಗಿದೆ, ಇಲ್ಲವಾದಲ್ಲಿ ನಿಜವಾದ ಅಥವಾ ವಾಸ್ತವಿಕ ಸಮಾನತೆ ಭ್ರಮೆಯಾಗಿ ಉಳಿಯುತ್ತದೆ. ಸಂವಿಧಾನದ ಅನುಚ್ಛೇಧ 15(4) ಕೆಲವು ವರ್ಗಗಳನ್ನು ವಿಶೇಷವಾಗಿ ಗುರುತಿಸಿ, ಆ ಮೂಲಕ ವಸ್ತುನಿಷ್ಠ ಸಮಾನತೆಯನ್ನು ಸಾಧಿಸಲು ಅವಕಾಶ ಕಲ್ಪಿಸಿಕೊಡುತ್ತದೆ. ಹೀಗಾಗಿ ಸಮಾಜದಲ್ಲಿ ತಳಮಟ್ಟದಲ್ಲಿರುವ ಪೌರಕಾರ್ಮಿಕರನ್ನು ಮೇಲಕ್ಕೆತ್ತಲು ಅದರಲ್ಲೂ ದಲಿತ ಮಹಿಳೆಯರೇ ಹೆಚ್ಚಾಗಿರುವ ಪೌರಕಾರ್ಮಿಕರನ್ನು ಖಾಯಂಗೊಳಿಸಲು ಕರ್ನಾಟಕ ಸರ್ಕಾರಕ್ಕೆ ವಿಶೇಷಾಧಿಕಾರವಿದ್ದು, ಅದನ್ನು ಪೌರಕಾರ್ಮಿಕರ ಪರವಾಗಿ ಚಲಾಯಿಸಬೇಕಾಗಿದೆ.

ಆದರೆ ಸರ್ಕಾರ ಸಾಮಾನ್ಯವಾಗಿ ಬಳಸುವ ವಾದವೆಂದರೆ ಉಮಾದೇವಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಕಾರ್ಮಿಕರನ್ನು ಖಾಯಂಗೊಳಿಸುವುದು "ಹಿಂಬಾಗಿಲ ಮೂಲಕ ನೇಮಕಾತಿ ಮಾಡುವ ಪ್ರಕ್ರಿಯೆಯಾಗಿದೆ" ಎಂದು ತಿಳಿಸಿದ್ದು, ಖಾಯಂಗೊಳಿಸುವ ಪ್ರಕ್ರಿಯೆಯನ್ನು ನಿಷೇಧಿಸಿದೆ ಎಂಬುದಾಗಿದೆ. ಆದರೆ ಇದು ತಪ್ಪು ಕಲ್ಪನೆಯಾಗಿದೆ ಏಕೆಂದರೆ ಉಮಾದೇವಿ ಪ್ರಕರಣದಲ್ಲಿ ಸಂವಿಧಾನದ ಪರಿಚ್ಛೇದ 15(4)ರ ಅಡಿಯಲ್ಲಿ ರಾಜ್ಯಕ್ಕಿರುವ ಬಾಧ್ಯತೆಗಳನ್ನು ಕಡಿಮೆ ಮಾಡುವುದಿಲ್ಲ. ಇದಲ್ಲದೆ, ಉಮಾದೇವಿ ಪ್ರಕರಣವನ್ನು ಒಳಗೊಂಡಂತೆ ಕಾರ್ಮಿಕರನ್ನು ಖಾಯಂಗೊಳಿಸುವಂತೆ ತಡೆಯಲು ಯಾವುದೇ ಸಾರ್ವತ್ರಿಕ ನಿಯಮಗಳಿಲ್ಲ. ಇದಲ್ಲದೆ, ಉಮಾದೇವಿ ಪ್ರಕರಣದ ನಂತರದಲ್ಲಿ ಕಾರ್ಮಿಕರನ್ನು ಖಾಯಂಗೊಳಿಸುವಂತೆ ಕೋರಿ ದಾಖಲಾದ ಪ್ರಕರಣಗಳಲ್ಲಿ, ಸರ್ವೋಚ್ಛ ನ್ಯಾಯಾಲಯವು ಖಾಯಂಗೊಳಿಸುವಂತೆ ನಿರ್ದೇಶನ ನೀಡಿದಲ್ಲದೆ, ಉದ್ಯೋಗದಾತರು ತಮಗಾಗಿ ತಮ್ಮ ಜೀವಮಾನವೆಲ್ಲಾ ರಕ್ತ ಬೆವರು ಸುರಿಸಿ ದುಡಿದ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸುವುದನ್ನು ತಪ್ಪಿಸುವುದಕ್ಕಾಗಿ, ಉಮಾದೇವಿ ಪ್ರಕರಣವನ್ನು ಸಾಧನವನ್ನಾಗಿ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದೆ.

ಸಮಾಜದ ಸ್ವಾಸ್ಥ್ಯಕ್ಕಾಗಿ ಅನೈರ್ಮಲೀಕರಣದಿಂದ ಕೂಡಿದ ಕೆಲಸವನ್ನು ಮಳೆ, ಚಳಿ, ಗಾಳಿ, ಬಿಸಿಲು ಯಾವುದನ್ನು ಲೆಕ್ಕಿಸದೇ ತಮ್ಮ ಜೀವವನ್ನೇ ಪಣಕ್ಕಿಟ್ಟು ಕೆಲಸ ಮಾಡುತ್ತಿರುವ ಪೌರಕಾರ್ಮಿಕರು ಇಂದು ತಮ್ಮ ನ್ಯಾಯಬದ್ಧವಾದ ಖಾಯಂ ಕೆಲಸಕ್ಕಾಗಿ ಹಕ್ಕೊತ್ತಾಯ ಮಾಡುತ್ತಿದ್ದಾರೆ. ಹಾಲಿ ರಾಜ್ಯದಾದ್ಯಂತ ಕೆಲಸ ಮಾಡುತ್ತಿರುವ ಎಲ್ಲಾ ಪೌರಕಾರ್ಮಿರನ್ನು ಖಾಯಂಗೊಳಿಸಬೇಕೆ ವಿನಃ, ನೇಮಕಾತಿಯಲ್ಲ ಎಂಬುವುದು ಪೌರಕಾರ್ಮಿಕರ ದೊಡ್ಡ ಘೋಷಣೆಯಾಗಿದೆ. ವಾಸ್ತವಾಗಿ ಪೌರಕಾರ್ಮಿಕರ ಬದುಕು ತಾರತಮ್ಯ ಮತ್ತು ಶೋಷಣೆಗಳಿಂದ ಕೂಡಿರುವುದರಿಂದ ರಾಜ್ಯ ಸರ್ಕಾರವು ಪೌರಕಾರ್ಮಿಕರ ಹಕ್ಕೊತ್ತಾಯಗಳಿಗೆ ಕಾನೂನಾತ್ಮಕವಾಗಿ ಮತ್ತು ನೈತಿಕವಾಗಿ ಸ್ಪಂದಿಸುವ ಜವಾಬ್ದಾರಿಯನ್ನು ಹೊಂದಿದೆ. ಕರೋನಾ ಸಾಂಕ್ರಮಿಕದ ವಿರುದ್ಧ ನಡೆದ ಹೋರಾಟದಲ್ಲಿ ಪೌರಕಾರ್ಮಿಕರು ಮುಂಚೂಣಿಯಲ್ಲಿದ್ದರೆಂದು ಹೆಮ್ಮೆಪಟ್ಟು ಚಪ್ಪಾಳೆ ತಟ್ಟಿ ಪೌರಕಾರ್ಮಿಕರ ಮೇಲೆ ಪುಷ್ಪವೃಷ್ಠಿ ಸುರಿಸಿದ ಸಾರ್ವಜನಿಕರು ಪೌರಕಾರ್ಮಿಕರ ನ್ಯಾಯಯುತವಾದ ಹಕ್ಕೊತ್ತಾಯಕ್ಕೆ ಬೆಂಬಲಿಸುವುದು ಅವರ ಬಾಧ್ಯತೆಯಾಗಿದೆ.

**(ಈ ಲೇಖನವು ಮೊದಲಿಗೆ 'ವಾರ್ತಾ ಭಾರತಿ' ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು)**

**★ ಕ್ಲಿಫ್ಟನ್ ಡಿ' ರೋಜಾರಿಯೋ | ಅನುವಾದ: ರಘುಪತಿ ಸಿದ್ದಯ್ಯ**

# ಯಶಸ್ಸು ಪಡೆದ ಪೌರಕಾರ್ಮಿಕರ ಮುಷ್ಕರದ ದೃಶ್ಯಾವಳಿಗಳು















# ಮಹಾನ್ ನಕ್ಸಲ್ ಬಾರಿ ದಂಗೆಯ 55 ನೇ ವಾರ್ಷಿಕೋತ್ಸವದಂದು

ಆಧುನಿಕ ಭಾರತೀಯ ಇತಿಹಾಸವು ಜನಪ್ರಿಯ ದಂಗೆಗಳ ಸರಣಿಯಿಂದ ಕೂಡಿದೆ. ಭಾರತದ ಸ್ವಾತಂತ್ರ್ಯಕ್ಕಾಗಿ ಸುದೀರ್ಘವಾದ ಹೋರಾಟವು ತುಳಿತಕ್ಕೊಳಗಾದ ಭಾರತೀಯರ ವಿವಿಧ ಸಮುದಾಯಗಳ ದಂಗೆಗಳಿಂದ ನಡೆಸಲ್ಪಟ್ಟಿತು. ಭಾರತವು ಹೊರಗಿನಿಂದ ಬಂದ ವಸಾಹತುಶಾಹಿ ಶಕ್ತಿಯಿಂದ ಮಾತ್ರವಲ್ಲದೆ ಒಳಗಿನಿಂದ ಭಾರತೀಯರ ಮೇಲೆ ಪ್ರಾಬಲ್ಯ ಸಾಧಿಸಿದ ಸಾಮಾಜಿಕ ರಚನೆ ಅಂದರೆ ಜಾತಿ ವ್ಯವಸ್ಥೆ, ಪಿತೃಪ್ರಭುತ್ವ, ಊಳಿಗಮಾನ್ಯ ಶಕ್ತಿ ಮತ್ತು ಸ್ಥಳೀಯ ರಾಜ್ಯಗಳು ಮತ್ತು ಪಾಳೆಗಾರರು.

ಭೂಮಾಲೀಕರು, ಲೇವಾದೇವಿಗಾರರು ಮತ್ತು ವಸಾಹತುಶಾಹಿ ಆಡಳಿತಗಾರರಿಂದ ಶೋಷಣೆಯಿಂದ ಸ್ಥಳೀಯ ಜನರು ಮತ್ತು ಬಡ ರೈತರ ದಂಗೆಗಳು ಪ್ರತಿರೋಧದ ರೂಪವಾಗಿತ್ತು.

ನಾವು ಹತ್ತೊಂಬತ್ತನೇ ಶತಮಾನದ ಮೊದಲ ಸ್ವಾತಂತ್ರ್ಯ ಸಂಗ್ರಾಮ (1857-59) ಸೇರಿದಂತೆ ಅನೇಕ ದಂಗೆಗಳ ಅಥವಾ ದೊಡ್ಡ ಸಾಮೂಹಿಕ ಜಾಗೃತಿಗಳ ಬಗ್ಗೆ ಮಾತನಾಡಿದರೂ ಅವುಗಳಿಗೆ, ಜನರ ಪ್ರತಿರೋಧವೇ ಮುಖ್ಯ ಆಧಾರವಾಗಿದೆ. ಜತೆಗೆ, ಗಾಂಧಿಯವರ ನಾಯಕತ್ವದ ನಾಗರಿಕ ಅಸಹಕಾರ ಮತ್ತು ಕ್ವಿಟ್ ಇಂಡಿಯಾ ಚಳುವಳಿಗಳು ಅಥವಾ 1940 ರ ತೆಭಾಗ ಮತ್ತು ತೆಲಂಗಾಣದಂತಹ ಕಮ್ಯುನಿಸ್ಟ್ ನೇತೃತ್ವದ ರೈತ ದಂಗೆಗಳು ಸಹ ಸೇರಿಕೊಂಡಿವೆ.

ನಿಜವಾದ ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯದ ಕನಸನ್ನು ನನಸಾಗಿಸಲು ಭಾರತ ಹೋರಾಡುತ್ತಿರುವಾಗ 1947ರ ನಂತರದ ಏರಿಕೆಗಳು ಮುಂದುವರೆದಿವೆ. 25 ಮೇ, 1967 ರಂದು ನಕ್ಸಲ್ಬರಿಯಲ್ಲಿ ಭೂರಹಿತ ರೈತರು ಮತ್ತು ತುಳಿತಕ್ಕೊಳಗಾದ ಚಹಾ ಕಾರ್ಮಿಕರ ದಂಗೆಯು ಅಂತಹ ಒಂದು ಐತಿಹಾಸಿಕ ಕ್ಷಣವಾಗಿದೆ. ಇದು ಭಾರತದಾದ್ಯಂತ ತುಳಿತಕ್ಕೊಳಗಾದ ಮತ್ತು ಯುವಜನರೊಂದಿಗೆ ಭಾರಿ ಅವಿನಾಭಾವ ಸಂಬಂಧ ಹೊಂದಿದೆ.

ಪ್ರಭುತ್ವವು ಅದನ್ನು ಹತ್ತಿಕ್ಕಲು ನಿಜವಾದ ಯುದ್ಧವನ್ನ ನದೆಸಿತು. ವಸಾಹತುಶಾಹಿ ಯುಗದ ಮೇಲೆ ಹೆಚ್ಚು ಸೆಳೆಯುವ ಕ್ರೂರ ಕಾನೂನುಗಳ ವಿವೇಚನಾರಹಿತ ಬಳಕೆ, ಕಸ್ಟಡಿ ಹಿಂಸಾಚಾರ ಮತ್ತು ಹೆಚ್ಚುವರಿ ನ್ಯಾಯಾಂಗ ಭಯೋತ್ಪಾದನೆಯ ಇಂದಿನ ಶಸ್ತ್ರಾಗಾರವು ಆರಂಭದಲ್ಲಿ ರಾಜ್ಯ ದಮನದ ಪ್ರಯೋಗಾಲಯದಲ್ಲಿ ತನ್ನ ಮೊದಲ ದೊಡ್ಡ ಉತ್ತೇಜನವನ್ನು ಪಡೆಯಿತು. 1970ರ ದಶಕ. ನಕ್ಸಲ್ಬಾರಿಯ ಪರಂಪರೆಯು 55 ವರ್ಷಗಳ ಹಿಂದೆ ಆ ಐತಿಹಾಸಿಕ ಏರಿಕೆಯಿಂದ ದಿನದಿಂದ ದಿನಕ್ಕೆ ಬೆಳೆಯುತ್ತಾ, ಆಳವಾಗುತ್ತಾ ಮತ್ತು ಹರಡುತ್ತಲೇ ಇದೆ.

22 ಏಪ್ರಿಲ್, 1969 ರಂದು ಸಿಪಿಐ(ಎಂಎಲ್) ರಚನೆಗೆ ಕಾರಣವಾಯಿತು ಮತ್ತು ಹೊಸ ಪಕ್ಷವು ಭಾರತೀಯ ರಾಜ್ಯದ ಸಂಪೂರ್ಣ ಶಕ್ತಿ ಮತ್ತು ಕ್ರೋಧವನ್ನು ಎದುರಿಸಬೇಕಾಗಿತ್ತು, ಹೆಚ್ಚುವರಿ ನ್ಯಾಯಾಂಗ ಹಿಂಸಾಚಾರ ಮತ್ತು ಹತ್ಯಾಕಾಂಡಗಳು ಸೇರಿದಂತೆ ಇಂಡೋನೇಷ್ಯಾದಲ್ಲಿ ಕಮ್ಯುನಿಸ್ಟರ ಸುಹಾರ್ತೋ ಯುಗದ ರಕ್ತಪಾತದ ಛಾಯೆಯನ್ನು ಹೊಂದಿತ್ತು, ಪಕ್ಷವು ಚಂಡಮಾರುತವನ್ನು ಎದುರಿಸುವಲ್ಲಿ ಯಶಸ್ವಿಯಾಗಿದೆ. ಇದು ಭಾರತದಲ್ಲಿ ಕಮ್ಯುನಿಸ್ಟ್ ಆಂದೋಲನಕ್ಕೆ ಭಾರಿ ಶಕ್ತಿ ಮತ್ತು ಕ್ರಾಂತಿಯನ್ನುಂಟು ಮಾಡಿದೆ. ಇಂತಹ ವ್ಯಾಪಕವಾದ ಭಿನ್ನಾಭಿಪ್ರಾಯದ ಧ್ವನಿಗಳನ್ನು ಗುರಿಯಾಗಿಸಲು ಮೋದಿ ಆಡಳಿತವು 'ನಗರ ನಕ್ಸಲ್' ಪದದ ನಾಣ್ಯ ಮತ್ತು ವಿವೇಚನೆಯಿಲ್ಲದ ಬಳಕೆಯು ನಕ್ಸಲ್ಬಾರಿಯ ಶಕ್ತಿ ಮತ್ತು ಸ್ಥಿತಿಸ್ಥಾಪಕತ್ವಕ್ಕೆ ಸಾಕ್ಷಿಯಾಗಿದೆ.

ನಕ್ಸಲ್ಬಾರಿಯ ಜನಪ್ರಿಯ ಪುರಾಣಕ್ಕೆ ವಿರುದ್ಧವಾಗಿ, ಇದು ಭಾರತದ ನೆಲದಲ್ಲಿ ಚೀನೀ ಕ್ರಾಂತಿಯ ಪಥವನ್ನು ಅನುಕರಿಸಲು ಪ್ರಯತ್ನಿಸುತ್ತಿರುವ ಕೆಲವು ಪ್ರತ್ಯೇಕ ಕ್ರಾಂತಿಕಾರಿಗಳ ಅರಾಜಕತಾವಾದಿ, ಸಾಹಸಮಯ ಕೃತ್ಯವಲ್ಲ. ಹಾಗಿದ್ದಿದ್ದರೆ, ಅದು ಕೇವಲ ಅಲ್ಪಾವಧಿಯ ಗುಳ್ಳೆಯಾಗುತ್ತಿತ್ತು. ಇದು ಅನ್ಯಾಯ ಮತ್ತು ದಬ್ಬಾಳಿಕೆಯ ವಿರುದ್ಧದ ದಂಗೆಗಳ ಭಾರತದ ಸಂಪ್ರದಾಯದಲ್ಲಿ ಬೇರೂರಿರುವ ಸಾಮೂಹಿಕ ಕ್ರಾಂತಿಯಾಗಿದೆ. ಇದು ಭಾರತದ ಸ್ವಾತಂತ್ರ್ಯ ಚಳುವಳಿಯ ಕಿಡಿಗಳು ಮತ್ತು ಶಕ್ತಿಯನ್ನು ಹೊಂದಿತ್ತು, ಅದರ ಮೂಲಭೂತ ಸಾಮರ್ಥ್ಯ ಮತ್ತು ಪರಂಪರೆಯನ್ನು ಅರಿತುಕೊಳ್ಳುವ ದಿಟ್ಟ ಮತ್ತು ಅದ್ಭುತ ಪ್ರಯತ್ನ.

ಕಮ್ಯುನಿಸ್ಟ್ ಆಂದೋಲನದ ಇತಿಹಾಸದಲ್ಲಿ ಇದು ತೇಭಾಗ ಮತ್ತು ತೆಲಂಗಾಣದ ಚೈತನ್ಯವನ್ನು ಪುನರುತ್ಥಾನಗೊಳಿಸಲು ಮತ್ತು ಸ್ವಾತಂತ್ರ್ಯದ ನಂತರದ ಜನಪ್ರಿಯ ನಿರಾಶೆ ಮತ್ತು ರಾಜಕೀಯ ಸ್ಥಿತ್ಯಂತರದ ಮೊದಲ ಪ್ರಮುಖ ಅಲೆಯನ್ನು (1967 ರ ಚುನಾವಣೆಯಲ್ಲಿ ಕಾಂಗ್ರೆಸ್ ಒಂಬತ್ತು ರಾಜ್ಯಗಳನ್ನು ಕಳೆದುಕೊಂಡಿತು) ದೃಢವಾದ ಕ್ರಾಂತಿಕಾರಿಯಾಗಿ ಪರಿವರ್ತಿಸುವ ದೃಢವಾದ ಪ್ರಯತ್ನವಾಗಿತ್ತು. ಅನ್ವೇಷಣೆ.

ಕಾ. ಚಾರು ಮಜುಂದಾರ್ ಅವರು ತೆಭಾಗಾ ಚಳುವಳಿಯ ಸಮರ್ಪಿತ ಸಂಘಟಕರಾಗಿದ್ದರು ಮತ್ತು ಅವರು ತಮ್ಮ ಎಲ್ಲಾ ಕ್ರಾಂತಿಕಾರಿ ಅನುಭವ ಮತ್ತು ಒಳನೋಟವನ್ನು ತಮ್ಮ ಒಡನಾಡಿಗಳ ತಂಡದೊಂದಿಗೆ ಮತ್ತು ಡಾರ್ಜಿಲಿಂಗ್ ಮತ್ತು ಉತ್ತರ ಬಂಗಾಳದ ಡೋರ್ಸ್ ಮತ್ತು ಗುಡ್ಡಗಾಡು ಪ್ರದೇಶಗಳ ಹೋರಾಟದ ಜನರೊಂದಿಗೆ ನಕ್ಸಲ್ಬಾರಿ ದಂಗೆಯನ್ನು ನಿರ್ಮಿಸಲು ತಮ್ಮ ತೇಭಾಗದ ದಿನಗಳಿಂದಲೂ ಅಭಿವೃದ್ಧಿಪಡಿಸಿದರು. CPI(ML)ನ ಅಡಿಪಾಯ ಮತ್ತು ಅದರ ಕ್ಷಿಪ್ರ ಹರಡುವಿಕೆಯು ಕ್ರಾಂತಿಕಾರಿ ಕಮ್ಯುನಿಸ್ಟ್ ಚಳುವಳಿಯ ಆಳವಾದ ಬೇರುಗಳನ್ನು ಮತ್ತು ಅದರ ತಳಮಟ್ಟದ ಆಕರ್ಷಣೆ ಮತ್ತು ಶಕ್ತಿಯನ್ನು ತೋರಿಸಿದೆ. ಮತ್ತು 1970ರ ದಶಕದ ಘೋಷಿತ ತುರ್ತುಪರಿಸ್ಥಿತಿಯಿಂದ ಇಂದಿನ ಫ್ಯಾಸಿಸ್ಟ್ ಆಕ್ರಮಣಕಾರಿ ಆಳ್ವಿಕೆಯವರೆಗೆ ಆಂದೋಲನವು ತನ್ನ ನೆಲವನ್ನು ಹಿಡಿದಿಟ್ಟುಕೊಳ್ಳುವಲ್ಲಿ ಮತ್ತು ತನ್ನ ದಿಗಂತವನ್ನು ವಿಸ್ತರಿಸುವಲ್ಲಿ ಯಶಸ್ವಿಯಾಗಿರುವ ರೀತಿ ಅದರ ಸಹಜ ಶಕ್ತಿ ಮತ್ತು ಸ್ಥಿತಿಸ್ಥಾಪಕತ್ವವನ್ನು ತೋರಿಸುತ್ತದೆ.

ನಕ್ಸಲ್ಬಾರಿಯ 55ನೇ ವರ್ಷಾಚರಣೆಯ ಸಂದರ್ಭದಲ್ಲಿ ಎಲ್ಲಾ ಚಳುವಳಿಯ ಹುತಾತ್ಮರಿಗೆ, ಈ ಮಹಾನ್ ಉದ್ದೇಶಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ನಾಯಕರು ಮತ್ತು ಕಾರ್ಯಕರ್ತರಿಗೆ ಮತ್ತು ಭಾರತದಾದ್ಯಂತ ಸಂದೇಶವನ್ನು ಹರಡಿದ ಎಲ್ಲಾ ಕವಿಗಳು, ಗಾಯಕರು, ಚೆಂಡೆವಾದಕರಿಗೆ ನಾವು ನಮ್ಮ ಆಳವಾದ ಗೌರವವನ್ನು ಸಲ್ಲಿಸುತ್ತೇವೆ. ಹೋರಾಟದ ಎಲ್ಲಾ ಕ್ಷೇತ್ರಗಳಲ್ಲಿನ ಜನರು ತಮ್ಮ ಎಲ್ಲಾ ಧೈರ್ಯ, ಶಕ್ತಿ ಮತ್ತು ಪ್ರೀತಿಯಿಂದ ಚಳುವಳಿಯನ್ನು ಉಳಿಸಿಕೊಳ್ಳಲು ಪ್ರಚಂಡ ದಮನವನ್ನು ತಡೆದುಕೊಂಡಿದ್ದಾರೆ. ನಕ್ಸಲ್ಬಾರಿ ದಬ್ಬಾಳಿಕೆ ಮತ್ತು ಅನ್ಯಾಯದ ವಿರುದ್ಧ ಜನರ ಪ್ರತಿರೋಧದ ಅದಮ್ಯ ಮನೋಭಾವದ ರೂಪಕವಾಗಿದೆ. ಅಧಿಕಾರದ ಅಮಲಿನಲ್ಲಿದ್ದ ದೊರೆಗಳ ದುರಹಂಕಾರ ಮತ್ತು ಆಕ್ರಮಣಶೀಲತೆಯ ಎದುರು ಹೋರಾಟದ ಸಮೂಹದ ಧಿಕ್ಕಾರದ ನಗುವಿದು. ಯುದ್ಧ ನಡೆಯುತ್ತಿದೆ ಮತ್ತು ಜನರು ಕೊನೆಯ ಪದಗಳನ್ನು ಹೊಂದಿರುತ್ತಾರೆ. ನಕ್ಸಲ್ಬಾರಿಗೆ ರೆಡ್ ಸೆಲ್ಯೂಟ್!★**ಅನುವಾದ: ನಾ ದಿವಾಕರ್**

# ಮಾರ್ಕ್ಸ್‌ವಾದ ಎಂದರೇನು?



ಭಾಗ 3

ಮೊದಲನೆಯ ಮತ್ತು ಎರಡನೆಯ ಭಾಗಗಳು ಹಿಂದಿನ ಎರಡು ಸಂಚಿಕೆಗಳಲ್ಲಿ ಪ್ರಕಟವಾಗಿವೆ

ಕಾಮ್ರೇಡ್ ಲೆನಿನ್ ಅವರ "ಮೂರು ಮೂಲಗಳು ಮತ್ತು ಮಾರ್ಕ್ಸ್‌ವಾದದ ಮೂರು ಘಟಕ ಭಾಗಗಳು" ಎಂಬ ಲೇಖನದ ಮೂಲಕ ಮಾರ್ಕ್ಸ್‌ವಾದವನ್ನು ಅರ್ಥಮಾಡಿಕೊಳ್ಳುವ ನಮ್ಮ ಪ್ರಯಾಣವನ್ನು ನಾವು ಮುಂದುವರಿಸೋಣ. ಈ ಭಾಗದಲ್ಲಿ ನಾವು ಮಾರ್ಕ್ಸ್ ಮತ್ತು ಎಂಗೆಲ್ಸ್ "ವರ್ಗ ಹೋರಾಟ" ಸಿದ್ಧಾಂತವನ್ನು ಹೇಗೆ ಅಭಿವೃದ್ಧಿಪಡಿಸಿದರು ಎಂಬುದನ್ನು ನೋಡೋಣ.

ಊಳಿಗಮಾನ್ಯ ಪದ್ಧತಿಯನ್ನು ಕೊನೆಗೊಳಿಸಿದ ನಂತರ, "ಮುಕ್ತ" ಬಂಡವಾಳಶಾಹಿ ಸಮಾಜವು ಕಾಣಿಸಿಕೊಂಡಿತು. ಹೊಸ ಬಂಡವಾಳಶಾಹಿ ಸಮಾಜವು ವಾಸ್ತವದಲ್ಲಿ "ಮುಕ್ತ" ಸಮಾಜವಲ್ಲ ಎಂದು ಶೀಘ್ರದಲ್ಲೇ ಅರಿವಾಯಿತು. ಈ ಸ್ವಾತಂತ್ರ್ಯವು ಕಾರ್ಮಿಕ ವರ್ಗದ ದಬ್ಬಾಳಿಕೆ ಮತ್ತು ಶೋಷಣೆಯ ಹೊಸ ವ್ಯವಸ್ಥೆಯನ್ನು ಅರ್ಥೈಸುತ್ತದೆ ಎಂಬುದು ಸ್ಪಷ್ಟವಾಯಿತು. ಊಳಿಗಮಾನ್ಯ ಪದ್ಧತಿಯ ಅಡಿಯಲ್ಲಿ ಕಾರ್ಮಿಕರನ್ನು ನಿರ್ದಿಷ್ಟ ಜಮೀನುದಾರನಿಗೆ ಜೋಡಿಸಲಾಗಿತ್ತು. ಬಂಡವಾಳಶಾಹಿಯ ಅಡಿಯಲ್ಲಿ ಕಾರ್ಮಿಕರಿಗೆ ತಮ್ಮ ಯಜಮಾನರನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿತ್ತು. ತಮ್ಮನ್ನು ಯಾರು ಶೋಷಿಸಬಹುದು ಎಂಬುದನ್ನು ನಿರ್ಧರಿಸುವ ಸ್ವಾತಂತ್ರ್ಯ ಕಾರ್ಮಿಕರಿಗಿತ್ತು. ದುಡಿಯುವ ವರ್ಗ ಸಾಧಿಸಬಹುದಾದ ಏಕೈಕ ಸ್ವಾತಂತ್ರ್ಯ ಅದು.

ಹೊಸ ಶೋಷಕರು ಮತ್ತು ದಬ್ಬಾಳಿಕೆಗಾರರ ವಿರುದ್ಧ ಕಾರ್ಮಿಕರು ತಮ್ಮ ಹೋರಾಟವನ್ನು ಮುಂದುವರೆಸಬೇಕಾಗಿತ್ತು. ಈ ದಬ್ಬಾಳಿಕೆಯ ವಿರುದ್ಧದ ಪ್ರತಿಭಟನೆಯ ಪ್ರತಿಬಿಂಬವಾಗಿ ವಿವಿಧ ಸಮಾಜವಾದಿ ಸಿದ್ಧಾಂತಗಳು ತಕ್ಷಣವೇ ಹೊರಹೊಮ್ಮಿದವು. ಆದಾಗ್ಯೂ, ಆರಂಭಿಕ ಸಮಾಜವಾದವು "ಕಾಲ್ಪನಿಕ" ಸಮಾಜವಾದವಾಗಿತ್ತು. ಅದು ಕೇವಲ ಕಾಲ್ಪನಿಕ ಮತ್ತು ಅಪ್ರಾಯೋಗಿಕ ಸಮಾಜವಾದವಾಗಿತ್ತು.

ಅದು ಬಂಡವಾಳಶಾಹಿ ಸಮಾಜವನ್ನು ಟೀಕಿಸಿತು ಮತ್ತು ಖಂಡಿಸಿತು. ಬಂಡವಾಳಶಾಹಿ ಸಮಾಜವನ್ನು ನಾಶಮಾಡುವ ಕನಸು ಕಂಡಿತು. ಅದು ಉತ್ತಮ ಸಮಾಜದ ದೃಷ್ಟಿಕೋನಗಳನ್ನು ಹೊಂದಿತ್ತು ಮತ್ತು ಶೋಷಣೆಯ ಅನೈತಿಕತೆಯನ್ನು ಶ್ರೀಮಂತರಿಗೆ ಮನವರಿಕೆ ಮಾಡಲು ಪ್ರಯತ್ನಿಸಿತು.

ಆದರೆ ಕಾಲ್ಪನಿಕ ಸಮಾಜವಾದವು ನಿಜವಾದ ಪರಿಹಾರವನ್ನು ಸೂಚಿಸಲು ಸಾಧ್ಯವಾಗಲಿಲ್ಲ. ಅದು ಬಂಡವಾಳಶಾಹಿಯ ಅಡಿಯಲ್ಲಿ ವೇತನ-ಗುಲಾಮಗಿರಿಯ ನೈಜ ಸ್ವರೂಪವನ್ನು ವಿವರಿಸಲು ಸಾಧ್ಯವಾಗಲಿಲ್ಲ, ಬಂಡವಾಳಶಾಹಿ ಅಭಿವೃದ್ಧಿಯ ನಿಯಮಗಳನ್ನು ಬಹಿರಂಗಪಡಿಸಲು ಸಾಧ್ಯವಾಗಲಿಲ್ಲ, ಕಾಲ್ಪನಿಕ ಸಮಾಜವಾದವು ಹೊಸ ಸಮಾಜದ ಸೃಷ್ಟಿಕರ್ತನಾಗಲು ಸಮರ್ಥವಾಗಿರುವ ಸಾಮಾಜಿಕ ಶಕ್ತಿಯನ್ನು ತೋರಿಸಲು ಸಾಧ್ಯವಾಗಲಿಲ್ಲ.

ಈ ಮಧ್ಯೆ, ಫ್ರಾನ್ಸ್‌ನಲ್ಲಿ, ಊಳಿಗಮಾನ್ಯ ಪದ್ಧತಿಯ ಪತನದೊಂದಿಗೆ ಬಿರುಗಾಳಿಯ ಕ್ರಾಂತಿ ನಡೆಯಿತು. ಫ್ರೆಂಚ್ ಕ್ರಾಂತಿಯ ಅನುಭವವು ವರ್ಗಗಳ ಹೋರಾಟವು ಎಲ್ಲಾ ಅಭಿವೃದ್ಧಿಯ ಆಧಾರ ಮತ್ತು ಪ್ರೇರಕ ಶಕ್ತಿಯಾಗಿದೆ ಎಂದು ಸ್ಪಷ್ಟವಾಗಿ ಬಹಿರಂಗಪಡಿಸಿತು. ಊಳಿಗಮಾನ್ಯ ವರ್ಗದ ಶಕ್ತಿಗಳನ್ನು ಸೋಲಿಸುವ ಮೂಲಕವೇ ಬಂಡವಾಳಶಾಹಿ ಸಮಾಜವನ್ನು ಸ್ಥಾಪಿಸಲಾಯಿತು ಎಂದು ಅರಿವಾಯಿತು. ಫ್ರೆಂಚ್ ಕ್ರಾಂತಿಯ ವಿಶ್ಲೇಷಣೆಯ ಆಧಾರದ ಮೇಲೆ ಮಾರ್ಕ್ಸ್ ವರ್ಗ ಹೋರಾಟದ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿದರು.

ಎಲ್ಲಾ ನೈತಿಕ, ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ನುಡಿಗಟ್ಟುಗಳು, ಘೋಷಣೆಗಳು ಮತ್ತು ಭರವಸೆಗಳ ಹಿಂದೆ ಕೆಲವು ವರ್ಗಗಳ ಹಿತಾಸಕ್ತಿಗಳಿವೆ ಎಂದು ಮಾರ್ಕ್ಸ್ ನಮಗೆ ಕಲಿಸಿದರು. ಪ್ರತಿಯೊಂದು ಹಳೆಯ ಸಂಸ್ಥೆಗಳು, ಅದು ಎಷ್ಟು ಅನಾಗರಿಕ ಮತ್ತು ಕೊಳೆತ ಎಂದು ತೋರಿದರೂ, ಕೆಲವು ಆಳುವ ವರ್ಗಗಳ ಶಕ್ತಿಗಳಿಂದ ಮುಂದುವರಿಯುತ್ತದೆ. ಮತ್ತು ಆ ವರ್ಗಗಳ ಪ್ರತಿರೋಧವನ್ನು ಒಡೆದುಹಾಕಲು ಒಂದೇ ಒಂದು ಮಾರ್ಗವಿದೆ; ಹಳೆಯದನ್ನು ಅಳಿಸಿಹಾಕುವ ಮತ್ತು ಹೊಸದನ್ನು ಸೃಷ್ಟಿಸುವ ಸಾಮರ್ಥ್ಯವಿರುವ ಶಕ್ತಿಗಳನ್ನು ಕಂಡುಹಿಡಿಯುವುದು ಆ ಮಾರ್ಗವಾಗಿದೆ.

ಮಾರ್ಕ್ಸ್‌ನ ತಾತ್ವಿಕ ಭೌತವಾದವು ಶ್ರಮಜೀವಿಗಳಿಗೆ ಇದುವರೆಗೆ ಎಲ್ಲಾ ತುಳಿತಕ್ಕೊಳಗಾದ ವರ್ಗಗಳು ಸೊರಗಿರುವ ಆಧ್ಯಾತ್ಮಿಕ ಗುಲಾಮಗಿರಿಯಿಂದ ಹೊರಬರುವ ಮಾರ್ಗವನ್ನು ತೋರಿಸಿದೆ. ಬಂಡವಾಳಶಾಹಿಯ ಸಾಮಾನ್ಯ ವ್ಯವಸ್ಥೆಯಲ್ಲಿ ಕಾರ್ಮಿಕ ವರ್ಗದ ನಿಜವಾದ ಸ್ಥಾನವನ್ನು ಮಾರ್ಕ್ಸ್‌ನ ಆರ್ಥಿಕ ಸಿದ್ಧಾಂತವು ವಿವರಿಸಿದೆ. ಕಾರ್ಮಿಕ ವರ್ಗವು ಬಂಡವಾಳಶಾಹಿಯನ್ನು ಉರುಳಿಸುವ ಸಾಮರ್ಥ್ಯ ಹೊಂದಿದೆ. ಕಾರ್ಮಿಕ ವರ್ಗವು ತನ್ನ ವರ್ಗ ಹೋರಾಟವನ್ನು ನಡೆಸುವ ಮೂಲಕ ಪ್ರಬುದ್ಧ ಮತ್ತು ವಿದ್ಯಾವಂತರಾಗುತ್ತಿದೆ; ಅದು ಬೂರ್ಜ್ವಾ ಸಮಾಜದ ಪೂರ್ವಾಗ್ರಹಗಳನ್ನು ತೊಡೆದುಹಾಕುತ್ತಿದೆ; ಇದು ಕಾರ್ಮಿಕರನ್ನು ಹೆಚ್ಚು ನಿಕಟವಾಗಿ ಒಟ್ಟುಗೂಡಿಸುತ್ತದೆ ಮತ್ತು ಅದರ ಯಶಸ್ಸಿನ ಅಳತೆಯನ್ನು ಅಳೆಯಲು ಕಲಿಯುತ್ತಿದೆ; ಅದು ತನ್ನ ಬಲವನ್ನು ಉಕ್ಕಿಸುತ್ತಿದೆ ಮತ್ತು ಅದಮ್ಯವಾಗಿ ಬೆಳೆಯುತ್ತಿದೆ. ★ **ಪಿ.ಆರ್.ಎಸ್ ಮಣಿ**

# ಚಾರು ಮಜುಂದಾರ್ ಅವರ ಜೀವನದ ಮುಖ್ಯ ಘಟ್ಟಗಳು



- ಚಾರು ಮಜುಂದಾರ್ - 15 ಮೇ 19 - 28 ಜುಲೈ 1972
- ಅವರನ್ನು - ಸಿ ಎಂ ಎಂದು ಕರೆಯುತ್ತಾರೆ. ಸಿಪಿಐ (ಎಂಎಲ್) ಪಕ್ಷದ ಸಂಸ್ಥಾಪಕರು . ಅವರು ಬಂಗಾಳದ ಸಿಲಿಗುರಿಯಲ್ಲಿ ಜನಿಸಿದರು.
- ಅವರು ಭಾರತದ ಸ್ವತಂತ್ರ್ಯ ಚಳುವಳಿಯ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದರು
- 1938 ಕಾಲೇಜು ಶಿಕ್ಷಣದಿಂದ ಹೊರ ನಡೆದು ರೈತರನ್ನು ಸಂಘಟಿಸಲು ತೊಡಗಿದ್ದರು
- ಎರಡನೆಯ ಮಹಾಯುದ್ಧದ ಹೊತ್ತಿಗೆ ಕಮ್ಯುನಿಸ್ಟ್ ಪಕ್ಷವನ್ನು ಬಹಿಷ್ಕರಿಸಲಾಗಿತ್ತು, ಆಗ ಅವರು ಜಲಪೈಗುರಿ ಜಿಲ್ಲೆಯಲ್ಲಿ ರೈತರ ನಡುವೆ ಕೆಲಸ ಮಾಡುತ್ತಿದ್ದರು.
- 1942ರಲ್ಲಿ ರೈತರ ಹೋರಾಟದಲ್ಲಿ "ಫಸಲನ್ನು ವಶಪಡಿಸಿಕೊಳ್ಳಿ" ಚಳುವಳಿಯಲ್ಲಿ ಭಾಗವಹಿಸಿದ್ದರು.
- 1943ರಲ್ಲಿ ಸಿಪಿಐ ಪಕ್ಷದ ಜಲಪೈಗುರಿ ಜಿಲ್ಲಾ ಸದಸ್ಯರಾದರು
- 1947ರಲ್ಲಿ ಮಹಾನ್ ಕ್ಷಾಮದ ಸಮಯದಲ್ಲಿ ನಡೆದ ಹೋರಾಟಗಳಲ್ಲಿ ಭಾಗವಹಿಸಿ, ತೇಭಾಗ ಚಳುವಳಿಯ ಮುಂಚೂಣಿಯಲ್ಲಿ ಇದ್ದರು. ಈ ಸಮಯದಲ್ಲಿ ಅವರ ಕ್ರಾಂತಿಕಾರಿ ನಿಲುವುಗಳು ರೂಪುಗೊಂಡವು.
- ನಂತರದಲ್ಲಿ ಅವರು ಡಾರ್ಜಿಲಿಂಗ್ ನಲ್ಲಿ ಟೀ ತೋಟಗಳ ಕಾರ್ಮಿಕರ ನಡುವೆ ಕೆಲಸ ಮಾಡಿದರು.
- 1948ರಲ್ಲಿ ಸಿಪಿಐ ನಿಷೇಧಿಸಲ್ಪಟ್ಟಿತು. ಮೂರು ವರ್ಷ ಜೈಲ್ನಲ್ಲಿ ಕಳೆದರು. 1952ರಲ್ಲಿ ಅವರು ಸಂಗಾತಿ ಲೀಲಾ ಮಜುಂದಾರ್ ಸೇನ್ಗುಪ್ತಾ ಅವರನ್ನು ಮದುವೆಯಾದರು.
- 1960ರ ದಶಕದ ಮಧ್ಯ ಭಾಗದಲ್ಲಿ ಉತ್ತರ ಬಂಗಾಳದಲ್ಲಿ ಸಿಪಿಐಎಂ ಪಕ್ಷದೊಳಗೆ ಎಡಪಂತೀಯರ ಗುಂಪನ್ನು ರಚಿಸಿದ್ದರು. 1967ರಲ್ಲಿ ಅವರ ಸಂಗಾತಿ ಕನು ಸನ್ಯಾಲ್ ನಾಯಕತ್ವದಲ್ಲಿ ನಕ್ಸಲ್ ಬಾರಿಯಲ್ಲಿ ಕ್ರಾಂತಿಕಾರಿ ರೈತರ ಹೋರಾಟವನ್ನು ಕಟ್ಟಿದರು. ಇದನ್ನೇ ಚೀನಾ ಕಮ್ಯುನಿಸ್ಟ್ ಪಕ್ಷದ "ವಸಂತ ಕಾಲದ ಗುಡುಗು" ಎಂದು ಬೀಜಿಂಗ್ ಪತ್ರಿಕೆಯು ತನ್ನ ಸಂಪಾದಕೀಯದಲ್ಲಿ ಬರೆಯಿತು.
- ಆ ಸಮಯದಲ್ಲಿ ಅವರು 6 ಐತಿಹಾಸಿಕ ದಸ್ತಾವೇಜುಗಳನ್ನು ಬರೆದರು. ಅದರಲ್ಲಿ ಅವರು ಭಾರತದ ಕ್ರಾಂತಿಯು ಸಶಸ್ತ್ರ ಹೋರಾಟದ ಮಾರ್ಗ ಹಿಡಿಯಬೇಕು ಮತ್ತು ಚೀನೀ ಕ್ರಾಂತಿ ಮಾರ್ಗವೇ ನಮ್ಮ ಮಾರ್ಗ ಎಂದರು.
- 1967ರಲ್ಲಿಯೇ ಅವರು ಸಿಪಿಐಎಂ ನಿಂದ ಹೊರನಡೆದು "ಅಖಿಲ ಭಾರತ ಕ್ರಾಂತಿಕಾರಿಗಳ ಸಮನ್ವಯ ಸಮಿತಿ" ಕಟ್ಟಿದರು.
- 1969ರಲ್ಲಿ ಅದು ಸಿಪಿಐ (ಎಂಎಲ್) ಎಂದು ಸ್ಥಾಪನೆಯಾಯಿತು. ಅದರ ಸಂಸ್ಥಾಪಕ ಕಾರ್ಯದರ್ಶಿಯಾಗಿ ಸಿಎಂ ಆಯ್ಕೆಯಾದರು.
- ಅವರು ದೇಶಾದ್ಯಂತ ಸಂಚರಿಸಿ ಶ್ರೀಕಾಕುಳಂ, ಗೋಪಿಬಲ್ಲಬಪುರ್ ಡೆಬ್ರಾ, ಲಖೀಮಪುರ್ ಖೇರಿ ಮುಂತಾದೆಡೆ ಹೋರಾಟಗಳನ್ನು ಕಟ್ಟಿದರು.
- ಅವರನ್ನು ಜುಲೈ 16 ರಂದು ಕಲ್ಕತ್ತಾದಲ್ಲಿ ಪೊಲೀಸರು ಬಂಧಿಸಿದರು ತೀವ್ರ ಚಿತ್ರಹಿಂಸೆಯಿಂದ ಅವರು ಪೊಲೀಸ್ ಲಾಕಪ್ ನಲ್ಲಿಯೇ ತೀರಿ ಕೊಂಡರು.

# ನಾಡ ನಡುವಿನಿಂದ

**— ಸಿದ್ದಲಿಂಗಯ್ಯ**

**ನಾಡ ನಡುವಿನಿಂದ ಸಿಡಿದ, ನೋವಿನ ಕೂಗೇ**

**ಆಕಾಶದ ಅಗಲಕ್ಕೂ, ನಿಂತ ಅಲವೇ**

**ಕೋಟಿ ಕೋಟಿ ಕಪ್ಪು ಜನರ, ಮೊಟ್ಟ ಮೊದಲ ಮಾತೇ**

**ನೀರಿನಾಚೆ ಮೋಡದಾಚೆ, ಮೊಳಗಿದಂಥ ಘೋಷವೇ**

**ಬಾಳಿನಲ್ಲಿ ಕಂಡುಕೊಂಡೆ, ಹೋರಾಟದ ದಾರಿಯ**

**ಕರೆದು ಕರೆದು ತೋರಿಸಿದೆ, ಮಹಾಮನೆಯ ಬಿರುಕನು**

**ಜಾತಿಯನ್ನು ಹೂತು ಬಿಡಲು, ಲಕ್ಷ ಲಕ್ಷ ಜನರನು**

**ಕಟ್ಟಿ ಕ್ರಿಯಾರಂಗಕ್ಕಿಳಿದ, ಸ್ವಾಭಿಮಾನ ಸಮುದ್ರ**

**ಮಹಾರಾಷ್ಟ್ರದ ಮಣ್ಣಿನಲಿ, ಮೂಡಿಬಂದ ಗಡುಗು ಸಿಡಿಲೇ**

**ಮಳೆಯನೇಕೆ ತಾರಲಿಲ್ಲ, ಮಿಂಚು ಮಾಯೆ ಅಷ್ಟೆಯೇ**

**ಅಭಿಮಾನದ ನೇಗಿಲಿಂದ, ಬಂಜರು ನೆಲ ಉತ್ತವನೇ**

**ಪಾತಿ ಮಾಡಿ ನಾಟಿ ಹಾಕಿ, ಬೆಳೆಯ ಕಾಣದೋದವನೆ**

**ಕಪ್ಪುಕ್ಕಿನ ಕೋಳಗಳನು, ಕಡಿದು ಎಸೆದ ವಜ್ರವೇ**

**ಬಂಗಾರದ ಕೋಳಹೊಕ್ಕ, ಮಹಾಬೌದ್ಧ ಭಿಕ್ಷುವೇ**

**ಮಲಗಿದವರ ಕೂಡಿಸಿದೆ, ನಿಲಿಸುವವರು ಯಾರೋ**

**ಛಲದ ಜೊತೆಗೆ ಬಲದ ಪಾಠ, ಕಲಿಸುವವರು ಯಾರೋ**

# ನಮ್ಮ ಸ್ವಾತಂತ್ರ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರ




ಡಿ ಡಿ ಕೊಸಂಬಿರವರ 1946ರ ಲೇಖನ, 'ಭಾರತದಲ್ಲಿ ಬೂರ್ಜ್ವಾಗಳು ಒಂದು ಪ್ರಬುದ್ಧತೆಗೆ ಬಂದರು' ಎಂಬುದರ ವಿಸ್ತ್ರಿತ ಭಾಗ. ಮುಂಬೈ ನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ಸೇರಿದ್ದಾಗ ಅವರೆಲ್ಲರೂ ತಮ್ಮ ಬಂಧನ ನಿಶ್ಚಿತ ಎಂದು ತಿಳಿದಿದ್ದರು. ಅವರುಗಳು ಅದಕ್ಕೆ ತಯ್ಯಾರಿಯಾಗಿ, ತಮ್ಮ ಎಲ್ಲಾ ಕುಟುಂಬದ ವ್ಯವಹಾರ ಮತ್ತು ವೈಯಕ್ತಿಕ ಹಣ ಕಾಸಿನ ಸ್ಥಿತಿ ಯನ್ನು ಮುಂದಿನ ಒಂದು ಎರಡು ವರ್ಷಗಳಿಗೆ ಎಲ್ಲಾ ರೀತಿಯ ಸಂದರ್ಭ ಗಳಿಗೆ ಸಿದ್ಧ ಪಡಿಸಿದ್ದರು.

ಈ ಲೇಖಕನಿಗೆ ಸೋಜಿಗ ಏನೆಂದರೆ, ಈ ಎಲ್ಲಾ ತೂಕದ ಮತ್ತು ಯೋಗ್ಯ ಪ್ರತಿನಿಧಿಗಳು ಬ್ರಿಟಿಷ್ ಪ್ರಭುತ್ವದ ದಾಳಿಯ ಬಗ್ಗೆ ತಿಳಿದಿದ್ದರು. ಆದರೂ ಸಹ ಕಾಂಗ್ರೆಸ್ ಮತ್ತು ಇಡೀ ದೇಶ, ಈ ಧಾಳಿ ವಿರುದ್ಧ ಏನು ಮಾಡಬೇಕು ಎಂದು ಯೋಚಿಸಿರಲ್ಲಿಲ್ಲ. ಸಾಮಾನ್ಯವಾದಂತಹ ಅಭಿಪ್ರಾಯ ವೇನೆಂದರೆ 'ಮಹಾತ್ಮರು ತಮಗೊಂದು ಕಾರ್ಯಯೋಜನೆ ನೀಡುತ್ತಾರೆ'. ಮತ್ತು ಈ ಬಂಧನಗಳ ಮುಂಚೆ ಮಹಾತ್ಮರ ಭಾಷಣ ದಲ್ಲಿ ಸಹ ಯಾವುದೇ ವಿಶೇಷತೆಗಳಿರಲಿಲ್ಲ. ಅಲ್ಲಿ ನೆರೆದಿದ್ದ ಪ್ರತಿದೊಡ್ಡ ಸ್ಫೋಟದ ಕ್ರಾಂತಿಕಾರಿ ಗುಣಗಳನ್ನು ಸಹ ಹೊಂದಿರಲಿಲ್ಲ. ಅಥವಾ ಯಾವುದೇ ನಿರ್ದಿಷ್ಟ ಕಾರ್ಯಕ್ರಮ ನೀಡಲಾಗಿರ ಲ್ಲಿಲ್ಲ. ಅಂದರೆ, ಮಹಾತ್ಮರ ಭಾಷಣ ಒಂದು ರೀತಿಯ 'ಮೇಜವಾಣಿ', ನಂತರ ನೀಡುವ ಸಂದೇಶ ದಂತಿತ್ತು. ಪ್ರಶ್ನೆ ಅದೇನೆಂದರೆ, ಜನರ ತೀವ್ರ ಅಸಮಾಧಾನದ ನಡುವೆ ಸಹ, ಆ ಭಾಷಣ ದಲ್ಲಿ ಯಾಕೆ ಒಂದು ಕ್ರಾಂತಿಕಾರಿ ಗುಣಲಕ್ಷಣ ಮತ್ತು ಕಾರ್ಯ ಯೋಜನೆಗಳು ಇರಲಿಲ್ಲ?

ಈ ಸುಸಂಭದ್ಧ ಪ್ರಶ್ನೆಗೆ ಕೋಸಾಂಬಿಯವರು ಮೂರು ಸ್ತರಗಳಲ್ಲಿ ಉತ್ತರ ನೀಡುತ್ತಾರೆ. ಒಂದು, "ವರ್ಗದ ಆಧಾರದ ಮೇಲೆ ನೋಡಿದರೆ ಕಾಂಗ್ರೆಸ್ಸಿಗರ ಪ್ರತಿಕ್ರಿಯೆ ಅದ್ಭುತ. ಆದರೆ ರಾಷ್ಟ್ರೀಯ ಕ್ರಾಂತಿಯ ಮಾಪಕ ದೃಷ್ಟಿ ಯಿಂದ ನೋಡಿದರೆ ಇದು ಅಪ್ರಯೋಜಕವೇ ಸರಿ. ಬ್ರಿಟೀಷ್ ಸರ್ಕಾರದ ಗಾಭರಿ, ಮತ್ತು ಅವರ ಎಲ್ಲಾ ನಾಯಕರುಗಳ ಬಂಧನಗಳ ಕಷ್ಟಗಳು, ಕಾಂಗ್ರೆಸ್ ನಾಯಕರ ಮೇಲೆ ಮುಂದಿನ ದಿನಗಳ ಬಗ್ಗೆ ಹೆಚ್ಚಿನ ಜವಾಬ್ದಾರಿಯ ನಡಾವಳಿ ಅನುಸರಿಸುವ ಪರಿಣಾಮ ಆಗಲ್ಲಿಲ್ಲ. ಹಾಗೇನೆ ಬಂಧನ,ಜೈಲು, ಕಾನ್ಸಂಟ್ರೇಷನ್ ಶಿಬಿರಗಳು, ಅವರ ಪ್ರತಿಷ್ಠೆಯನ್ನು ಜನರ ಮಧ್ಯೆ ಹೆಚ್ಚಿಸಿತ್ತು. ಆದ್ದರಿಂದ ಕಾಂಗ್ರೆಸ್ ಮಂತ್ರಿಗಳಿಗೆ ಜನತೆ ಮಧ್ಯೆ ತಮ್ಮನ್ನು ತಾವು ಜನಪ್ರಿಯಗಳಿಸುವ ಹೊಸ ಅವಶ್ಯಕತೆ ಬರಲೇ ಇಲ್ಲ."

ಎರಡನೆಯ ದಾಗಿ, "ಕಾಂಗ್ರೆಸ್ ನ ಲೆಕ್ಕಾಚಾರದ ಯೋಜನೆಗಳು, ಯುದ್ಧದ ನಂತರದಲ್ಲಿನ ಸಂದರ್ಭಕ್ಕೆ ಎರಡು ತರದ ಪ್ರತಿಫಲಕ್ಕೆ ಹೊಂದಿಕೊಳ್ಳುವಂಹದ್ದು ಆಗಿತ್ತು. ಅದೇನೆಂದರೆ, ಯುದ್ಧದಲ್ಲಿ ಬ್ರಿಟಿಷರ ವಿಜಯ ಅಥವಾ ಭಾರತ ವನ್ನು ಜಪಾನಿಯರು ಆಕ್ರಮಿಸಿಕೊಳ್ಳುವುದು. ಕೊಸಂಬಿಯವರು, ಇದನ್ನು ಈ ರೀತಿ ವಿವರಿಸುತ್ತಾರೆ "ಆಕಸ್ಮಾತ್ ಬ್ರಿಟೀನ್ ವಿಜಯೀ ಆದರೆ ಕಾಂಗ್ರೆಸ್ ಜಪಾನ್ ನ ಪರ ಇಲ್ಲ ಎಂದು ಆಗುತ್ತೆ. ಇನ್ನೊಂದೆಡೆ ಜಪಾನೀಯರು ಭಾರತವನ್ನ ಆಕ್ರಮಿಸಿಕೊಂಡರೆ, ಅವರು ಕಾಂಗ್ರೆಸ್ ಬ್ರಿಟಿಷರನ್ನು ಬೆಂಬಲಿಸಲಿಲ್ಲ ಎಂದು ತಿಳಿಯಲಾಗುತ್ತದೆ".

ಮೂರನೆಯದು, "ಕಾಂಗ್ರೆಸ್ ನಲ್ಲಿನ ಬೂಜ್ವಾ ಪ್ರತಿನಿಧಿಗಳು ಎನ್ನನ್ನೂ ಕಳೆದುಕೊಳ್ಳುವುದಿಲ್ಲ ಎಂದು ತಿಳಿದಿದ್ದರು". ಕೊನೆಯದಾಗಿ, "ಜನತೆಯ ಮೇಲಿನ ದೌರ್ಜನ್ಯ ವಿರುದ್ಧದ ಆಕ್ರೋಶವು ಅಧಿಕಾರಿ ಶಾಹಿಯ ತಲೆ ಮೇಲೆಯೇ ಬೀಳುತ್ತಿತ್ತು ಹಾಗೂ ಜನತೆಯ ಅಸಮಾಧಾನದ ಆಸ್ಫೋಟದಿಂದ ಭಾರತದ ಬೂಜ್ವಾ ಗಳನ್ನ ಯಾವುದೇ ರೀತಿ ಘಾಸಿ ಗೊಳಿಸುವು ದಿಲ್ಲ".

ಕೊಸಂಬಿಯವರು 'ಜನರ ಮನಸ್ಸಿನಲ್ಲಿ ಕ್ರಾಂತಿಯ ಉದ್ದೇಶ ಇದ್ದರೂ ಸಹ, ಅದು ಬೂರ್ಜ್ವಾಗಳ ಮತ್ತು ಕಾಂಗ್ರೆಸ್ ನ ಉದ್ದೇಶವಾಗಿರಲ್ಲಿಲ್ಲಾ ಎಂಬುದಕ್ಕೆ ಆಳವಾದ ವರ್ಗ ವಿಶ್ಲೇಷಣೆಯನ್ನ ಕೊಡುತ್ತಾರೆ. ಈ ಸಂದರ್ಭದಲ್ಲಿ ಲೆನಿನ್ ರ ಮಾತುಗಳನ್ನು ನೆನಪಿಸಿ ಕೊಳ್ಳಬೇಕು, "ಯಾವಾಗ ಕೆಳವರ್ಗದವರು ಹಳೆಯ ವ್ಯವಸ್ಥೆಯನ್ನ ತಿರಸ್ಕರಿಸುತ್ತಾರೆ ಮತ್ತು ಉಚ್ಚ ವರ್ಗದವರು ತಮ್ಮ ಹಳೇ ವ್ಯವಸ್ಥೆ ಮುಂದುವರಿಸಲು ಸಾಧ್ಯವಿಲ್ಲ ಎಂದು ತಿಳಿಯುತ್ತಾರೆ, ಆಗ ಮಾತ್ರವೇ ಒಂದು ಕ್ರಾಂತಿ ವಿಜಯೀ ಆಗುತ್ತದೆ". ಈ ಸತ್ಯವನ್ನ ಇನೊಂದು ರೀತಿ ಹೇಳ ಬಹುದು, 'ಒಂದು ಕ್ರಾಂತಿಕಾರೀ ಬಿಕ್ಕಟ್ಟು ಶೋಷಿತ ಮತ್ತು ಶೋಷಕ ಇಬ್ಬರನ್ನೂ ಆವರಿಸಿದರೆ ಮಾತ್ರ ಕ್ರಾಂತಿ ಸಂಭವಿಸುವುದು'. 1942ರಲ್ಲಿ ದುಡಿಯುವ ವರ್ಗ ಅತ್ಯಂತ ಆಳವಾದ ದುರವಸ್ಥೆ ಮತ್ತು ಅವನತಿಯನ್ನು ತಲುಪಿತ್ತು.

ಆದರೆ ಆಗ ಭಾರತದ ಬೂರ್ಜ್ವಾಗಳು ಎಂದಿಗಿಂತಲು ಹೆಚ್ಚಾಗಿ ಮೆರೆಯುತ್ತಿದ್ದರು. ಅಂದರೆ ಈ ಯುದ್ಧದ ಗುತ್ತೇದಾರಿ, ಬೆಲೆಗಳ ಉಬ್ಬರ, ವಿಸ್ತೃತ ಕಪ್ಪು ಮಾರುಕಟ್ಟೆ ಇವೆಲ್ಲದರ ಲಾಭವನ್ನು ಹೂಡಿಕೆದಾರರು ಮತ್ತು ಕೈಗಾರಿಕೆಗಳು ಅನುಭವಿಸುತ್ತಿದ್ದರು. ಅಷ್ಟು ಏಕೆ ಸಾಮಾನ್ಯವಾಗಿ ಭಾರತದಲ್ಲಿ ಅಸಂತೋಷವನ್ನು ಮುನ್ನೆಲೆಗೆ ತರುವ 'ಕೆಳ ಮಧ್ಯಮ ವರ್ಗವು' ಸಹ ಒಂದು ರೀತಿಯ ಉನ್ನತಿಯನ್ನು ಕಂಡರು. ಅವೇನೆಂದರೆ ಹೊಸದಾಗಿ ಸೃಷ್ಟಿಸಿದ ಗುಮಾಸ್ತ ಮತ್ತು ಸರ್ಕಾರಿ ನೌಕರಿಗಳು, ಯುದ್ಧ ಮತ್ತು ವಿಸ್ತೃತ ಗೊಳ್ಳುತ್ತಿದ್ದ ಆರ್ಥಿಕ ವ್ಯವಸ್ಥೆಯಿಂದಾಗಿ ಪ್ರಯೋಜನ ಪಡೆದರು. ಇದನ್ನು ಗಮನಿಸಿದ ಬ್ರಿಟಿಷರು ಭಾರತದಲ್ಲಿ ಹೆಚ್ಚಿನ ಬಂಡವಾಳ ಹೂಡಿ, ಭಾರತದ ಬಂಡವಾಳಿಗರು ಹೆಚ್ಚಿನ ಲಾಭ ಪಡೆಯುವಂತೆ ಅವಕಾಶ ಮಾಡಿಕೊಟ್ಟರು. ಈ ಕಾರಣಕ್ಕಾಗಿ 1942ನಲ್ಲಿ ಯಾವುದೇ ಪ್ಲಾನ್ ಇರಲಿಲ್ಲ. ಜನತೆ ಕ್ರಾಂತಿಗಾಗಿ ಹಂಬಾಲಿಸಿದ್ದರು ಸಹ ಅನೇಕ ತಡೆಗಳು ಏಕೆ ಬಂದವು ಎಂದು ತಿಳಿಯ ಬಹುದು'. (from exasperating essays, pp16-17)

ನಂತರದ ಚಾರಿತ್ರಿಕ ಅಧ್ಯಯನದ ಮುಖಾಂತರ ಒಂದು ಅಂಶ ಹೊರ ಬಂದಿದೆ, 'ಭಾರತ ಬಿಟ್ಟು ಚಳುವಳಿ'ಯ ಮೂಲ ಉದ್ದೇಶ, ಬ್ರಿಟೀಷ್ ರಾಜ್ ಜತೆ ಮುಖಾ-ಮುಖಿ ಸಂಘರ್ಷವಾಗಿರಲಿಲ್ಲ. ಬದಲಾಗಿ ಅದು ಮುನ್ನುಗ್ಗುತ್ತಿರುವ ಜಪಾನೀಯರ ಆಕ್ರಮಣದಿಂದ ಕಂಗೆಟ್ಟಿದ ಬ್ರಿಟಿಷರು ಕಾಂಗ್ರೆಸ್ ಪಕ್ಷಕ್ಕೆ, ಅಂದರೆ ಮುಸ್ಲಿಂ ಲೀಗ್ ಹೊರತು ಪಡಿಸಿ, ಅಧಿಕಾರ ಹಸ್ತಾಂತರಕ್ಕೆ ಒತ್ತಡದ ತಂತ್ರಗಾರಿಕೆ ಅಷ್ಟೇ ಆಗಿತ್ತು. ಬಹಿರಂಗವಾಗಿ ಗಾಂಧಿಯವರು ಯಾವುದೇ ರಾಜಿಗೆ ಸಿದ್ಧವಿಲ್ಲಾ ಎಂದು ಹೇಳುತ್ತಾ

ಚೌಕಾಸಿ ಮಾಡಲು ಎಲ್ಲಾ ಮಾರ್ಗಗಳನ್ನು ತೆರೆದಿಟ್ಟಿದ್ದರು. ಗಾಂಧಿಯವರು 4 ಆಗಸ್ಟ್ 1942ರ ಸರ್ ತೇಜ್ ಬಹದ್ದೂರ್ ಸಪ್ರುರವರಿಗೆ ಬರೆದ ಒಂದು ಪತ್ರದಲ್ಲಿ, 'ನಾನು ಬಿಕ್ಕಟ್ಟನ್ನು ತಡೆಯಲು ಎಲ್ಲಾ ಪ್ರಯತ್ನ ಮಾಡುತ್ತಿದ್ದೇನೆ, ಏಕೆಂದರೆ ಸಣ್ಣ ಪುಟ್ಟ ಕ್ರಮಗಳಿಂದ ಅದೇ ಫಲಿತಾಂಶ ಪಡೆಯಬಹುದೇ ಎಂದು'. ಆಗಸ್ಟ್ 6 ರಂದು ಅವರು 'ಭಾರತ ಬಿಟ್ಟು ತೊಲಗಿ' ನಿರ್ಣಯ ಅಂಗೀಕರಿಸಿದ ಮೇಲೆ ಎಸೋಸಿಯೇಟ್ಡ್ ಪ್ರೆಸ್ ಗೆ ನೀಡಿದ ಹೇಳಿಕೆಯಲ್ಲಿ 'ನಿಜ, ವೈಸರಾಯ್ ಗೆ ಒಂದು ಪತ್ರ ಹೋಗೆ ಹೋಗುತ್ತದೆ, ಅದೇನೂ ಅಂತಿಮ ಎಚ್ಚರಿಕೆ ಅಲ್ಲ, ಬದಲಾಗಿ ಸಂಘರ್ಷವನ್ನ ತಪ್ಪಿಸಬೇಕೆಂದು ಅದರಲ್ಲಿ ಮನವಿ ಮಾಡಲಾಗುತ್ತೆ. ಈ ಪತ್ರವೇನಾದರೂ ಅನುಕೂಲಕರ ಪ್ರತಿಕ್ರಿಯೆ ನಿಮ್ಮಿಂದ ಉಂಟು ಮಾಡಿದರೆ, ಇದನ್ನೆ ಮಾತುಕತೆಯ ತಳಹದಿ ಎಂದು ಪರಿಗಣಿಸ ಬಹುದು' ಎಂದು ಪತ್ರಿಕಾ ಹೇಳಿಕೆ ನೀಡಿದ್ದರು. ಗಾಂಧಿಯವರ ಅಗಸ್ಟ್ 8 ರ ಭಾಷಣ, 'ಮಾಡು ಇಲ್ಲಾ ಮಡಿ'ದಲ್ಲಿ ಅವರು ಜನತೆ ಯಾವುದೇ ಉದ್ರೇಕಕಾರಿ ಕ್ರಿಯೆ ಮಾಡಬಾರದು ಮತ್ತು ತಾವು ವೈಸರಾಯ್ ಗೆ ಬರೆದ ಪತ್ರದ ಉತ್ತರವನ್ನು ಎದುರು ನೋಡೋಣಾ ಎಂದರು. ಕೆಲವು ದಿನಗಳ ಹಿಂದೆ ಗಾಂಧಿಯವರು ವಿನೋಭಾ ಭಾವೆ ಜತೆ ಮಾತನಾಡುತ್ತಾ ಜಪಾನೀಯವರ ದಾಳಿಯಿಂದಾಗಿ ಅನಿವಾರ್ಯವಾಗಿ ಮಾತು ಕತೆಗೆ ಬ್ರಿಟೀಷರು ಬರಬೇಕಾಗುತ್ತದೆ, ಅವರು ಎಂದರೆ ನೆಹರು ಮತ್ತು ಅಜಾದರು, ಅಮೇರಿಕಾ ಅಧ್ಯಕ್ಷ ರೂಸ್ವೇಲ್ಟ್ ರವರು, ವಿಶ್ವ ಸಂಸ್ಥೆ ಮೂಲಕ ಚರ್ಚಿಲ್ ಮೇಲೆ ಒತ್ತಡ ಹೇರಿ ಅವರು ಕಾಂಗ್ರೆಸ್ ಜತೆ ಮಾತು ಕತೆಗೆ ತೊಡಗುವಂತೆ ಮಾಡುವರೆಂದು ನಿರೀಕ್ಷಿಸಿದ್ದರು.

ಈ ಎಲ್ಲಾ ನಿರೀಕ್ಷೆಗಳನ್ನ ಸುಳ್ಳು ಮಾಡುತ್ತಾ ಗಾಂಧಿಯವರ ಪತ್ರಕ್ಕೆ ವೈಸರಾಯ್ ಯಾವುದೇ ಸೊಪ್ಪು ಹಾಕದೆ, ದುರಹಂಕಾರಿ ಆಡಳಿತದ ಮೂಲಕ ಇಡೀ ಕಾಂಗ್ರೆಸ್ ನಾಯಕತ್ವವನ್ನ ಜೈಲಿಗೆ ತಳ್ಳಿದರು. ಆಗ ಗಾಂಧಿಯವರ ಮಾತು, 'ನಾನು ನಿಮ್ಮ ಮಿತ್ರನಾಗಿ ಉಳಿದಿದ್ದೇನೆ'. ಗಾಂಧಿಯವರು ವೈಸರಾಯ್ ರವರನ್ನು ಉದ್ದೇಶಿಸಿ, 'ತಾವು ನಾನು ಹೇಳಿದಂತೆ ಕ್ರಿಯಾಶೀಲರಾಗಲಿಲ್ಲ, ಆದಾಗ್ಯೂ ನೀವು ಯಾವಾಗಲೂ ತಕ್ಷಣ ಕ್ರಮ ತೆಗೆದುಕೊಳ್ಳುವ ಮೊದಲು ನನ್ನನ್ನು ಕರೆಸಿಕೊಳ್ಳಿ, ನಿಮ್ಮ ಆತಂಕಗಳನ್ನು ತಿಳಿಸಿ, ಅದರಿಂದ ನಿಮಗೆ ವಸ್ತು ಸ್ಥಿತಿಯ ಅರಿವು ಆಗುತ್ತದೆ. ನಿಮ್ಮ ಕ್ರಮದ ಅರಿವು ನಿಮಗೆ ಆಗುವುದು'.

ಆ ಸಮಯದಲ್ಲಿ ಉಂಟಾದ ಬೃಹತ್ ಜನತೆಯ ಹೋರಾಟಗಳನ್ನು ತಡೆಯಲು ಕಾಂಗ್ರೆಸ್ ಪಕ್ಷದ ನಾಯಕರನ್ನು ಸರ್ಕಾರ ಬಿಡುಗಡೆ ಮಾಡಲಿಲ್ಲ. ಇದರಿದಾಗಿ 'ಭಾರತ ಬಿಟ್ಟು ತೊಲಗಿ ' ಚಳುವಳಿಯು, ಲಾರ್ಡ್ ಲಿನಲಿತೋಗೌ ಹೇಳಿದಂತೆ, '1857ರ ನಂತರ ಆದ ಅತಿ ದೊಡ್ಡ ದಂಗೆ ಅದು'. ಲಿನಲಿತೋಗೌರವರು ಚರ್ಚಿಲ್ ರಿಗೆ ಕಳುಹಿಸಿದ ಸಂದೇಶದ ಪ್ರಕಾರ, 'ಜೈಲ್ ನಿಂದ ಗಾಂಧಿ ಮತ್ತು ಅವರ ಸಹಚರರು, ಹಿಂಸೆಯನ್ನು ಖಂಡಿಸುತಿದ್ದರು, ಎಲ್ಲಾ ಹೋರಾಟಗಾರರು ಪೊಲೀಸರಿಗೆ ಶರಣಾಗಿ ಎಂದು ಕರೆ ನೀಡುತ್ತಿದ್ದರು, ಮತ್ತು ಬ್ರಿಟೀಷ್ ಸರ್ಕಾರದ ಜತೆ ಸಹಕರಿಸಿ ಎಂದು ಕರೆ ನೀಡು ತಿದ್ದರು'. ಈ ಮೂಲಕ ಜಿ ಡಿ ಬಿರ್ಲಾರಂತವರ ರಾಯಭಾರಿಕೆಯಿಂದ ಗಾಂಧಿ ಬ್ರಿಟೀಷರ ವಿಶ್ವಾಸಗಳಿಸುತ್ತಿದ್ದರು ಎಂದು ಸಂದೇಶ ನೀಡುತ್ತಿದ್ದರು.

ಗಾಂಧಿ ನಾಯಕತ್ವದ ಸಂಶಯಾಸ್ಪದ ಇಂತಹ ಇಬ್ಬಂದಿ ನೀತಿಯ ನಾಯಕತ್ವವನ್ನು ಮಾಧ್ಯಮದ ಸಹಕಾರ ಮತ್ತು ಗಾಂಧಿಯವರ ಸುದೀರ್ಘ ಜೈಲುವಾಸದಿಂದಾಗಿ ಈ ವಿಚಾರವನ್ನು ಮುಚ್ಚಿ ಇಡಲಾಗುತ್ತಿತ್ತು. ಆದರೆ ಯುದ್ಧದ ನಂತರ ಗಾಂಧಿ ನಾಯಕತ್ವ ಹೆಚ್ಚಿದ ಹೆಮ್ಮೆಯಿಂದ ಹೊರಬಂದು ಮಾತುಕತೆಯ ಹೊಸ ಸುತ್ತಿನಿಂದಾಗಿ ಆಗಸ್ಟ್ 1947ರ ಅಧಿಕಾರ ಹಸ್ತಾಂತರದಲ್ಲಿ ಕೊನೆಗೊಂಡಿತು. ಆದರೆ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿಯ ಜಯ ಪ್ರಕಾಶ್ ನಾರಾಯಣ್, ಅಚ್ಯುತ್ ಪಟವರ್ಧನ್ ಮತ್ತು ಇತರರ ಸಮರ್ಥ ಮುಂಚೂಣಿ ನಾಯಕತ್ವದಲಿ ಮಿಲಿಟಂಟ್ ಚಳುವಳಿ ಮುಂದುವರೆಯಿತು. ಮುಸ್ಲಿಂ ಲೀಗ್ ಮತ್ತು ಅರ್ ಎಸ್ ಎಸ್/ ಹಿಂದೂ ಮಹಾಸಭಗಳು ಈ ಚಳುವಳಿಯನ್ನು ಕಟುವಾಗಿ ಟೀಕಿಸಿದವು. ಅದರಲ್ಲೂ ಹಿಂದೂ ಮಹಾಸಭಾ ನಾಯಕ ಶಾಮ್ ಪ್ರಸಾದ್ ಮುಖರ್ಜಿ ಪ್ರಾಂತೀಯ ಮಂತ್ರಿಗಳ ಸಭೆಯ ಪ್ರತಿನಿಧಿಯಾಗಿ, ಈ ಚಳುವಳಿಯನ್ನು ಹತ್ತಿಕ್ಕಲು ಭಾಗವಹಿಸಿದರು.

**ಸಿ. ಪಿ. ಐ. ಭಾರತ ಕಮ್ಯುನಿಸ್ಟ್ ಪಕ್ಷದ ತಪ್ಪುಗಳ ಗುಣಲಕ್ಷಣಗಳು:**
ನಿರ್ದಿಷ್ಟವಾಗಿ 1942ನಲ್ಲಿನ ಸಿಪಿಐ PW (People's War) ರಾಜಕೀಯ ಪಾತ್ರ ಹಾಗು ಮಾರ್ಗವು, ಪಕ್ಷದ ಫೆಬ್ರವರಿ 1948ನಲ್ಲಿ ನಡೆದ ಎರಡನೆಯ ಅಧಿವೇಶನದಲ್ಲಿ ಸ್ವಲ್ಪಮಟ್ಟದ ಸ್ವ-ವಿಮರ್ಶೆಗೆ ಒಳಗಾಯಿತು. 1942ನಲ್ಲಿ ನಡೆದ ಆ ತಪ್ಪಿನ ಕಾರಣದ ಸೈದ್ಧಾಂತಿಕ ನೆಲೆಯನ್ನ ಈ ರೀತಿಯಾಗಿ ಗುರುತಿಸಲಾಯಿತು. ಅದೇನೆಂದರೆ, 'ಫ್ಯಾಸಿಸಂ ಮತ್ತು ಸಾಮ್ರಾಜ್ಯಶಾಹಿಯ ಅಪಜಯದ ನಂತರ ಜನತೆಯ ಸ್ವಾತಂತ್ರ್ಯವು ಸ್ವಯಂ ಚಾಲಿತವಾಗೀ ತಾನೇ ತಾನಾಗಿ ಆಗುತ್ತದೆ ಎಂಬ ವಿಚಾರದ ನಂಬಿಕೆ' ಆಗಿತ್ತು. ಇಲ್ಲಿ ಪರಾಜಿತ ಫ್ಯಾಸಿಸಂ ಮತ್ತು ಸಾಮ್ರಾಜ್ಯ ಶಾಹಿಯು 'ಜನತೆಯ ಕ್ಯಾಂಪ ನಲ್ಲಿ ಬಂಧಿಯಾಗಿರುವುದು' ಎಂದು ನಂಬಲಾಗಿತ್ತು.

---

**ಪಕ್ಷದ ನಾಯಕತ್ವವು ರಾಷ್ಟ್ರೀಯ ಶತ್ರು ವಿರೋಧಿ ಹೋರಾಟ ದಲ್ಲಿ ತೊಡಗಿಸಿ ಕೊಂಡರೆ ಫ್ಯಾಸಿಸ್ಟ್ ವಿರೋಧಿ ಹೋರಾಟವು ಕ್ಷೀಣಿಸುತ್ತದೆ. ಅಥವಾ ಫ್ಯಾಸಿಸ್ಟ್ ವಿರೋಧಿ ಶಕ್ತಿಯನ್ನು ಬೆಂಬಲಿಸಿದರೆ, ದೇಶ ಪ್ರೇಮಿ ಜನತೆ ಯಿಂದ ದೂರ ವಾಗ ಬೇಕಾಗುತ್ತದೆ**

---

'ಜನತೆಯ ಸಮರದ ಕಾಲದಲ್ಲಿನ ಈ ರೀತಿಯ ಸಾಮ್ರಾಜ್ಯ ಶಾಹಿ ಪಾತ್ರವನ್ನ ಸರಿಯಾಗಿ ಅಂದಾಜು ಮಾಡದೆ ಇದಿದ್ದುದರಿಂದ ನಾವು ಫ್ಯಾಸಿಸ್ಟ್ ವಿರೋಧಿ ಯುದ್ಧದ ಒಳಗೆ ಸಾಮ್ರಾಜ್ಯಶಾಹಿಯನ್ನು ಸಹ ಎದುರಿಸುವ ಕರ್ತವ್ಯವನ್ನು ಮರತೆ ಬಿಟ್ಟೆವು. ಈ ಸ್ವಯಂ ವಿಮರ್ಷೆಯನ್ನು ಮುಂದುವರಿಸಿ ಮತ್ತು ಆಳಗೊಳಿಸುವ ಬದಲು, ಕೆಲವು ಹಿರಿಯ ಕಾಮ್ರೇಡ್ ಗಳು ತದ್ವಿರುದ್ಧವಾಗಿ ನಡೆದು ಕೊಂಡರು. ಹೀಗಾಗಿ ಇಎಂಎಸ್ ನಂಬೂದರಿ ಪಾದ್ ರವರ ಪುಸ್ತಕ "Reminiscences of the Indian Communists"ದಲ್ಲಿ ಭಾರತ ಕಮ್ಯುನಿಸ್ಟರ ಆಯ್ಕೆಯ ಸಂಕಷ್ಟ ಗಳನ್ನು ಗುರುತಿಸಿದ್ದಾರೆ. (ಅದೇನೆಂದರೆ ಪಕ್ಷದ ನಾಯಕತ್ವವು ರಾಷ್ಟ್ರೀಯ ಶತ್ರು ವಿರೋಧಿ ಹೋರಾಟದಲ್ಲಿ ತೊಡಗಿಸಿಕೊಂಡರೆ ಫ್ಯಾಸಿಸ್ಟ್ ವಿರೋಧಿ ಹೋರಾಟವು ಕ್ಷೀಣಿಸುತ್ತದೆ. ಅಥವಾ ಫ್ಯಾಸಿಸ್ಟ್ ವಿರೋಧಿ ಶಕ್ತಿಯನ್ನು ಬೆಂಬಲಿಸಿದರೆ, ದೇಶ ಪ್ರೇಮಿ ಜನತೆಯಿಂದ ದೂರವಾಗ ಬೇಕಾಗುತ್ತದೆ). ಆದ್ದರಿಂದ, ಪಾರ್ಟಿ ನಾಯಕತ್ವವು ಮೊದಲಿನ ಆಯ್ಕೆಯನ್ನು ಮೊದಲು ಆರು ತಿಂಗಳು ಮಾಡಿ, ನಂತರದಲ್ಲಿ ಎರಡನೆಯ ಆಯ್ಕೆಯನ್ನು ಡಿಸೆಂಬರ್ 1941ನಲ್ಲಿ ಮಾಡಿತ್ತು (ಪುಟ 87).

ಇಲ್ಲಿ ಇಡೀ ವಿಷಯವನ್ನು ಐಕ್ಯ ಕಮ್ಯುನಿಸ್ಟ್ ಪಕ್ಷದ ನಾಯಕತ್ವ, ಯಾವುದೇ ಹೊರಗಿನ ಮಧ್ಯ ಪ್ರವೇಶವಿಲ್ಲದೆ ಒಂದು ಸಮತೋಲನವಾದ ನ್ಯಾಯ ಬದ್ಧ ನಿರ್ಣಯ ತೆಗೆದುಕೊಂಡಿತ್ತೆಂದು ಹೇಳಲಾಗಿದೆ. ಇದು ಸತ್ಯವಲ್ಲ, ಇನ್ನೊಂದು ಸಣ್ಣ ಟಿಪ್ಪಣಿಯಲ್ಲಿ ನಂಬೂದರಿ ಪಾದ್ ಗುರುತಿಸಿ ಹೀಗೆ ಹೇಳಿದ್ದಾರೆ, 'ಕಮ್ಯುನಿಸ್ಟ್ ಚಳುವಳಿಯು, ರಾಷ್ಟ್ರೀಯ ಚಳುವಳಿಯ ನಾಯಕರಾದ ನೆಹರು ಮತ್ತು ಆಜಾದ್ ರವರ ನಿರ್ಣಯ ವನ್ನು ಕಮ್ಯುನಿಸ್ಟ್

ಚಳುವಳಿಯು ನಂತರದಲ್ಲಿ ಅನುಸರಿಸಿದ ಬಗ್ಗೆ ನಾಚಿಕೆ ಪಡಬೇಕಿಲ್ಲ' (ಪುಟ 17). 'ಉನ್ನತ ರಾಷ್ಟ್ರೀಯ ನಾಯಕರುಗಳ' ನೆರಳಿನಲ್ಲಿ ಅವಿತುಕೊಳ್ಳುವ ಬದಲು, ಕಮ್ಯುನಿಸ್ಟ್ ನಾಯಕತ್ವವು ಆ ತಪ್ಪುಗಳು ಹೆಚ್ಚು ಅಪಾಯಕಾರಿ ಮತ್ತು ನಾಚಿಗೆ ಕೇಡಿನದು ಎಂದು ಗೊತ್ತಿದ್ದರೂ ಸಹ, ಪಕ್ಷವು ಈ 'ತಪ್ಪು ನಿರ್ಣಯವನ್ನು' ಕೊನೆಯತನಕವು ಹಠಹಿಡಿದು ಅದನ್ನೆ ಎತ್ತಿ ಹಿಡಿಯಿತು. ಗಾಂಧಿ ನಾಯಕತ್ವದ 'ಭಾರತ ಬಿಟ್ಟು ತೊಲಗಿ' ಚಳುವಳಿಗೆ ಸೈದ್ಧಾಂತಿಕ ಆಧಾರವಿದೆಯಾದರೂ, ನಂತರದಲ್ಲಿ ಕಮ್ಯುನಿಸ್ಟ್ ಪಕ್ಷದ ನಾಯಕರುಗಳು ಬ್ರಿಟೀಷ್ ವಿರೋಧಿ ಅಲೆಗಳ ಕ್ರಾಂತಿಕಾರೀ ಸತ್ವವನ್ನು ಅರಿಯಬೇಕಿತ್ತು. ಅದನ್ನು ಫ್ಯಾಸಿಸ್ಟ್ ವಿರೋಧಿ ಹೋರಾಟಗಳನ್ನು ನಡೆಸುತ್ತಾ ಮತ್ತು ಜಪಾನೀಯರ ಆಕ್ರಮಣ ವಿರುದ್ಧ ಏಕ ಕಾಲಕ್ಕೆ ತಯ್ಯಾರಾಗಿ ಮುನ್ನುಗ್ಗ ಬೇಕ್ಕಿತ್ತು. ಸ್ಟಾಲಿನ್ ಗಾರ್ಡ್ ನಲ್ಲಿ ಸೋವಿಯೆತ್ ವಿಜಯದ ನಂತರ ಪಕ್ಷವು ಫ್ಯಾಸಿಸ್ಟ್ ವಿರೋಧಿ ಕಾರ್ಯಕ್ರಮ ಬಿಟ್ಟು ಸಾಮ್ರಾಜ್ಯಶಾಹಿ ವಿರೋಧಿ ಕಾರ್ಯ ವಿಧಾನವನ್ನು ತನ್ನ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಬೇಕಿತ್ತು.

ಆ ಸಮಯದಲ್ಲಿ ಒಂದು, ಪ್ರಭುತ್ವ ಧ್ವನಿಗಳಿಗೆ ಏನೂ ನಷ್ಟ ಇರಲ್ಲಿಲ್ಲ. ಉದಾಹರಣೆಗೆ ಸಿಪಿಐನ ಒಳ್ಳೆಯ ಮಿತ್ರ ಮತ್ತದರ ರಾಜಕೀಯ ಮಾರ್ಗ ಒಪ್ಪುತ್ತಿದ್ದ ಸ್ವಾಮಿ ಸಹಜಾ ನಂದರು ಬಿಹಾರದ ಕಡೆ Bakasht ಚಳುವಳಿಯನ್ನು ಪೂನರ್ಜಿವನಗೊಳಿಸಲು ಒತ್ತಾಯಿಸಿದ್ದರು. 'ಅವರ ಪ್ರಕಾರ ಕಿಸಾನ್ ಸಭಾವು ಆಂಟಿ ಫ್ಯಾಸಿಸ್ಟ್ ಚಳುವಳಿಯನ್ನು ಮುಂದು ವರಿಸುತ್ತಾ ಬ್ರಿಟಿಷರ ಜಪಾನಿ ವಿರುದ್ಧ ಯುದ್ಧ ಪ್ರಯತ್ನ ವನ್ನೂ

**ಪ್ರಜ್ಞಾ ವಂತ ಭಾರತೀಯರ ಪಕ್ಷವು, ಒಂದು ಮಹಾನ್ ಧ್ಯೇಯಕ್ಕಾಗಿ, ಅದರ ಪ್ರಾಮಾಣಿಕ ಧ್ಯೇ ಯದಲ್ಲಿ ಇಟ್ಟ ನಂಬಿಕೆಯ ಧೃಡೀಕರಣ ವಾಗಿತ್ತು (ಈ ಸಂದರ್ಭದಲ್ಲಿ ಫ್ಯಾಸಿಸಂ ನಿಂದ ಮಾನವ ಸಂಕುಲ ವನ್ನು ರಕ್ಷಿಸುವ ಅಂತಾರಾಷ್ಟ್ರೀಯ ಕರ್ತವ್ಯ) ಮತ್ತು ಮಾತೃ ಭೂಮಿಯ ರಕ್ಷಣೆಗಾಗಿ ನಡೆಸಿದ ತ್ಯಾಗಗಳ ದಾಖಲೆ ಆಗಿತ್ತು**

ಬೆಂಬಲಿಸುತ್ತಾ, ಅದೇ ಸಮಯ ಕೃಷಿ ಹೋರಾಟಗಳನ್ನು ಸಹ ಮುಂದುವರಿಸ ಬೇಕು 'ಆದರೆ ಈ ಬುದ್ದಿ ಮಾತುಗಳನ್ನು ಕೇಳುವವರಿಲ್ಲ ದಿಂದಾಗಿ ಅವರು ಬೇರೆ ದಾರಿ ಹಿಡಿದರು. ಆದಾಗ್ಯೂ ಅನೇಕ ಸಿಪಿಐ ಸದಸ್ಯರು, ವೈಯಕ್ತಿಕವಾಗಿ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗ ವಹಿಸಿದ್ದರು. ಮಾವೋ ಟ್ಸೆತುಂಗ್ ರವರು ಸಿಪಿಐ ಕೇಂದ್ರ ಸಮಿತಿಗೆ ಏಪ್ರಿಲ್ 1943ನಲ್ಲಿ ಒಂದು ಸ್ನೇಹ ಪೂರಿತ ಸಂದೇಶ ಕಳುಹಿಸಿದ್ದರು. 'ಇನ್ನೊಂದು ಪಕ್ಷದ ಆಂತರಿಕೆ ವಿಚಾರದಲ್ಲಿ ಮೂಗು ತೂರಿಸಬಾರದೆಂಬ ಆಧಾರದ ಮೇಲೆಯೇ ಅವರು ಸಿಪಿಐ ಪಕ್ಷವು ತಂತ್ರಗಳನ್ನು ಬದಲಿಸಿ ಕೊಳ್ಳಬೇಕೆಂದು ಕಿವಿ ಮಾತು ಹೇಳಿದ್ದರು.

ಅವರ ಪ್ರಕಾರ, 'ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಇಂಡಿಯಾ ಜನತೆಯ ಪ್ರಯತ್ನದ ಫಲವಾಗಿ ಇಂದಿನ ಕಷ್ಟದ ಪರಿಸ್ಥಿತಿಯಲ್ಲಿ ಒಂದು ಪರಿಹಾರದ ಮಾರ್ಗವನ್ನು ಕಂಡುಹಿಡಿಯಬಹುದು ಎಂದು ನಾವು ನಂಬುತ್ತೇವೆ. ಇದರ ಉದ್ದೇಶ ಫ್ಯಾಸಿಸಂ ಅನ್ನು ಸೋಲಿಸುವುದು ಮತ್ತು ಭಾರತ ಸ್ವಾತಂತ್ರ್ಯವನ್ನು ಗಳಿಸುವುದು ಆಗಿದೆ'.

ಸಿಪಿಐನ ನಾಯಕರು ಭಾರತದ ಪ್ರಗತಿಪರ ಬುದ್ಧಿಜೀವಿಗಳು ವಸಾಹತುಶಾಹಿ ಮನಸ್ಥಿತಿಯನ್ನು ಹೊಂದಿದ್ದರು. ಅದರ ಪ್ರಕಾರ ಇನ್ನೊಂದು ಏಶಿಯನ್ ಪಕ್ಷ ಒಂದರ ಸಲಹೆಗಳನ್ನು ಗಂಭೀರವಾಗಿ ತೆಗೆದು ಕೊಳ್ಳಬಾರದೆಂದಿತ್ತು. ಲಂಡನ್ ಅಥವ ಮಾಸ್ಕೋದಿಂದ ಯಾವ ತಕರಾರು ಎತ್ತದಿರುವ ಕಾರಣ ಅವರುಗಳು ತಮ್ಮ ಪುರಾತನ ನಂಬಿಕೆಗಳನ್ನೆ ಮುಂದುವರಿಸಿದರು.

ಈ ರೀತಿಯ ಸ್ವ-ವಿಮರ್ಶಾ ಅಂಶಗಳನ್ನು ಹೇಳಿದ ನಂತರ, ಎರಡು ಅಂಶಗಳನ್ನ ಗುರುತಿಸಬೇಕಾಗುತ್ತದೆ. ಒಂದನೆಯದಾಗಿ, ಕಮ್ಯುನಿಸ್ಟರು, ಜನತಾ ಸಮರದ ಕಾಲದಲ್ಲಿ, ಪೊಲೀಸ್ ಏಜೆಂಟ್ಸ್ ರಾಗಿ ಬ್ರಿಟೀಷ ರಿಂದ ಹಣ ಪಡೆದುಕೊಳ್ಳುತ್ತಿದ್ದಾರೆಂಬ ಆರೋಪ ಸಂಪೂರ್ಣ ಆಧಾರ ರಹಿತವಾಗಿದೆ. ಇದಕ್ಕೆ ತದ್ವಿರುದ್ದವಾಗಿ ಜುಲೈ 1942 ಹೊತ್ತಿಗೆ ಬ್ರಿಟಿಷ್ ಸರ್ಕಾರವು ಕಮ್ಯುನಿಸ್ಟ್ ಕೈದಿಗಳನ್ನು ಜೈಲ್ ನಿಂದ ಬಿಡುಗಡೆ ಮಾಡಿದ್ದು ಮತ್ತು ಸಿಪಿಐಗೆ ಕಾನೂನು ಬದ್ಧ ಅಸ್ತಿತ್ವ ನೀಡಿತ್ತು. ಅದು ಸಹ ಮೀನಾ ಮೇಷ ಉದಾಸೀನತೆಯಿಂದಲೇ; ಆಗಸ್ಟ್ - ಸೆಪ್ಟೆಂಬರ್ ರಲ್ಲೀ ಜನತಾ-ಸಮರದ (PW) ಕ್ರಿಯಾಶೀಲತೆಯ ಪರಾಕಾಷ್ಠೆಯಲ್ಲಿ ಸರ್ಕಾರದ ನಿಲುವು ಕಮ್ಯುನಿಸ್ಟರ ಬಗ್ಗೆ ಹೀಗಿತ್ತು, ಅದೇನೆಂದರೆ, 'ಇದು ಮೂಲತಃ ಒಂದು ಭಾರತದ ಸ್ವಾತಂತ್ರ್ಯಕ್ಕೆ ಕೆಲಸಮಾಡುವ ರಾಷ್ಟ್ರವಾದಿ ಪಕ್ಷ'. ಅವರು ಸರ್ಕಾರದಿಂದ ಯಾವುದೇ ರೀತಿಯ ಆರ್ಥಿಕ ಅಥವಾ ಇತರೆ ಸಹಾಯವನ್ನು ತಮ್ಮ ಹೋರಾಟಗಳಲ್ಲಿ ಪಡೆಯಲು ಇಷ್ಟ ಪಡುವುದಿಲ್ಲ. ಮತ್ತು ತಮ್ಮ ಚಟುವಟಿಕೆಗಳಲ್ಲಿ ಯಾವುದೇ ರೀತಿಯ ಹತೋಟಿಯ ಮತ್ತು ನಿರ್ದೇಶನಗಳನ್ನು ಪಡೆಯಲು ಒಪ್ಪುವುದಿಲ್ಲ ಎಂಬುವುದು ಸ್ಪಷ್ಟ.

ಎರಡನೇಯದಾಗಿ, ಅನೇಕ ತಪ್ಪುಗಳ ಹೊರತಾಗಿಯೂ ಜನತಾ - ಸಮರದ (PW) ಘಟ್ಟದಲ್ಲಿ ಸಿಪಿಐ ಪಕ್ಷದ ಪರಿಪೂರ್ಣ ಬೆಳವಣಿಗೆ ಆಯಿತು. ಬುದ್ಧಿ ಜೀವಿಗಳ ನಡುವೆ ಪಕ್ಷವು ವಿಶಾಲವಾದ ವಿಸ್ತಾರಗೊಂಡು ಅವರ ಫ್ಯಾಸಿಸ್ಟ್ ವಿರೋಧಿ ಕಾರ್ಯಕ್ರಮದ ಬಗ್ಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ಕಾನೂನು ಬದ್ಧವಾಗಿ ಕೆಲಸಮಾಡಲು ಅವಕಾಶವನ್ನು ಕಮ್ಯುನಿಸ್ಟ್ ಪಕ್ಷವು ಸೆಪ್ಟಂಬರ್ 1942 ಮತ್ತು ಮೇ 1943 ಅವಧಿಯಲ್ಲಿ ಪಡೆಯಿತು. ಎರಡು ವಿಸ್ತೃತ ಬಹಿರಂಗ ಸಮ್ಮೇಳನ ಮತ್ತು ಮೊದಲನೆಯ ಪಕ್ಷದ ಮಹಾ ಅಧಿವೇಶನಗಳನ್ನು ನಡೆಸಿ, ಪ್ರಚಾರ ಮತ್ತು ಪಕ್ಷದ ಬೆಳವಣಿಗೆಗೆ ಒತ್ತು ನೀಡಲಾಯಿತು. ಸದಸ್ಯರ ಸಂಖ್ಯೆ 1942ರಲ್ಲಿ 4,000 ಇದ್ದಿದ್ದು 1943 ಮಧ್ಯ ಭಾಗ ಹೊತ್ತಿಗೆ 15,000ಕ್ಕೆ ಏರಿಕೆ ಆಗಿತ್ತು. ಮತ್ತು 1946 ಮಧ್ಯ ಭಾಗದ ಹೊತ್ತಿಗೆ 53,000ಕ್ಕೆ ಹೆಚ್ಚಿತ್ತು. 1943 ನಂತರ ಮತ್ತು ಪಶ್ಚಿಮ ಬಂಗಾಳದ ಕ್ಷಾಮದ ಸಮಯ ನಡೆಸಿದ ಪರಿಹಾರ ಕಾರ್ಯಕ್ರಮ ಗಳಿಂದ ಜನತೆಯಲ್ಲಿನ ವಿಶ್ವಾಸವನ್ನು ಅದು ವಾಪಸ್ಸು ಪಡೆಯಿತು.

ಅದು ಬಹಿರಂಗ ಸಂಘಟನೆಗಳನ್ನು, ಮಹಿಳೆಯರು, ವಿದ್ಯಾರ್ಥಿಗಳು, ಕಾರ್ಮಿಕರು, ರೈತರು ಮತ್ತು ಅದರಲ್ಲೂ ಮುಖ್ಯವಾಗಿ ಕಲೆ ಮತ್ತು ಸಾಹಿತ್ಯ ಕಾರ್ಯಕರ್ತರಲ್ಲಿ ಬೆಳೆಸಿತು. 1943ರಲ್ಲಿ ಪ್ರಾರಂಭವಾದ ಇಂಡಿಯನ್ ಪೀಪಲ್ಸ್ ಥೇಟರ್ ಅಸೋಸಿಯೇಷನ್, ವಿಖ್ಯಾತ ಪ್ರತಿಭಾವಂತರಾದ ಸಲಿಲ್ ಚೌಧುರಿ, ದೇವವ್ರತ ಬಿಶ್ವಾಸ, ಶಂಭು ಮಿತ್ರ, ಬಲರಾಜ್ ಸಾಹನಿ, ಖೈಫಿ ಆಜ್ಮಿ, ಕೆ ಅಭಾಸ್ ಮುಂತಾದವರನ್ನು ಒಳಗೊಂಡಿತು. ಸಾಹಿತಿಗಳಾದ ಮಾಣಿಕ್ ಬಂಧೋಪದ್ಯಾಯ, ಶ್ರೀಕಾಂತ್ ಭಟ್ಟಾಚಾರ್ಯ, ಸುಕಾಂತ್ ಭಟ್ಟಾಚಾರ್ಯ, ಭಿಷ್ಣು ಡೆ, ಸಮರ್ ಸೇನ್, ಕಮ್ಯುನಿಸ್ಟ್ ಪಕ್ಷ ಸೇರಿದರು. ಇಲ್ಲ, ಅದರ ನಿಕಟ ವರ್ತಿಗಳಾದರು. ಇವೆಲ್ಲವೂ ಸಹ ಪ್ರಜ್ಞಾವಂತ ಭಾರತೀಯರ ಪಕ್ಷವು, ಒಂದು ಮಹಾನ್ ಧ್ಯೇಯಕ್ಕಾಗಿ, ಅದರ ಪ್ರಾಮಾಣಿಕ ಧ್ಯೇಯದಲ್ಲಿ ಇಟ್ಟ ನಂಬಿಕೆಯ ಧೃಡೀಕರಣವಾಗಿತ್ತು (ಈ ಸಂದರ್ಭದಲ್ಲಿ ಫ್ಯಾಸಿಸಂನಿಂದ ಮಾನವ ಸಂಕುಲವನ್ನು ರಕ್ಷಿಸುವ ಅಂತಾರಾಷ್ಟ್ರೀಯ ಕರ್ತವ್ಯ) ಮತ್ತು ಮಾತೃ ಭೂಮಿಯ ರಕ್ಷಣೆಗಾಗಿ ನಡೆಸಿದ ತ್ಯಾಗಗಳ ದಾಖಲೆ ಆಗಿತ್ತು.

**ಯುಧ್ಧೋತ್ತರ ಉಬ್ಬರ:** ಈ ಸಮಯದ ಬಗ್ಗೆ ಸುಮೀತ್ ಸರ್ಕಾರ ರವರು ಹೆಚ್ಚಿನ ಖಚಿತತೆ ಮತ್ತು ಕರಾರುವಕ್ಕಾಗಿ ಹೇಳಿದ್ದಾರೆ. 'ಬ್ರಿಟೀಷ್ ಆಳ್ವಿಕೆಯ ಕೊನೆಯ ಎರಡು ವರ್ಷಗಳಲ್ಲಿ ಎರಡು ಮೂಲಭೂತ ಧಾರೆಗಳು ಹೊರಹೊಮ್ಮಿದವು. ಅದೇನೆಂದರೆ, ಒಂದೆಡೆ 'ಬ್ರಿಟೀಷರು ಕಾಂಗ್ರೆಸ್ ಮತ್ತು ಲೀಗ್ ನಾಯಕರ ನಡುವೆ ಕ್ಲಿಷ್ಟಕರವಾದ ಮಾತುಕತೆ ನಡೆಯುತ್ತಿದ್ದರೆ, ಇನ್ನೊಂದೆಡೆ, ಸ್ಥಳೀಯವಾದ ಆದರೆ ಅತ್ಯಂತ ಸಮರಶೀಲವಾದ ಮತ್ತು ಐಕ್ಯವಾದ ಸಾಮೂಹಿಕ ಜನರ ಕಾರ್ಯಾಚರಣೆಗಳು ನಡೆಯುತ್ತಿದ್ದವು, ಇಂಡಿಯನ್ ನ್ಯಾಷನಲ್ ಆರ್ಮಿ (INA) ಬಿಡುಗಡೆ ಚಳುವಳಿ ಮತ್ತು ರಾಯಲ್ ಇಂಡಿಯನ್ ನೇವಿ (RIN), 1945-46ರ ದಂಗೆ; ಅದೇ ಸಮಯದಲ್ಲಿ ಅನೇಕಾನೇಕ ಮುಷ್ಕರಗಳು ಮತ್ತು 1946-1947ರಲ್ಲಿ ಬಂಗಾಳದಲ್ಲಿನ ತೇಭಾಗ ಚಳುವಳಿ, ತಿರುವಾಂಕೂರಿನಲ್ಲಿ ಪುನ್ ಪುರ ವಯಲಾರ್ ಮತ್ತು ಹೈದ್ರಾಬಾದ್ ನಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟ' ಮುಂತಾದವು ಆಗಿದ್ದುವು .

ಈ ಮೊದಲಾದ ಘಟನಾವಳಿಗಳ ಸರಮಾಲೆಯಿಂದ ದೂರವಿರದ ಕಮ್ಯುನಿಸ್ಟರು ತಮ್ಮ ಎರಡನೆಯ, ಅಂದರೆ ಪಾರ್ಲಿಮೆಂಟ್ ಯೇತರ, ರಂಗವನ್ನು ಮುಖ್ಯ ಕರ್ಯಕ್ಷೇತ್ರ ಮಾಡಿಕೊಂಡರು. ರೈತರ ಹೋರಾಟದ ಮುಖ್ಯ ಅಧ್ಯಾಯಗಳಲ್ಲಿ ಅವರು ಸಂಘಟಿಸಿದ ತೇಭಾಗ, ಪುನ್ ಪುರ ವಯಲಾರ್ ಮತ್ತು ತೆಲಂಗಾಣ ವಿದ್ರೋಹಗಳು ಪ್ರಮುಖವಾಗಿವೆ. ಪಕ್ಷದ ಟ್ರೇಡ್ ಯೂನಿಯನ್ ಮತ್ತು ವಿದ್ಯಾರ್ಥಿ ವಿಭಾಗಗಳು ಸಾಕಷ್ಟು ಕ್ರಿಯಾ ಶೀಲ ವಾಗಿದ್ದ ಸಾಮ್ರಾಜ್ಯಶಾಹಿ ವಿರುದ್ಧದ ಮತ್ತು ಉಗ್ರವಾದ ಸಮರ ಶೀಲ ಕೋಮು ಸೌಹಾರ್ದದ ಐಕ್ಯತೆಯ ಚಳುವಳಿಯ ಮುಂಚೂಣಿಯಲ್ಲಿ ಅವರು ಇದ್ದರು. ನವೆಂಬರ್ 1945ರಂದು ಕಲ್ಕತ್ತಾದಲ್ಲಿ ವಿದ್ಯಾರ್ಥಿಗಳು ಟ್ರಾಮ್ ಕಾರ್ಮಿಕರು, ಮುನ್ಸಿಪಲ್ ಕೆಲಸಗಾರರು ಮತ್ತು ಇತರರು, ಅಂದರೆ Forward Block ಕಾರ್ಯಕ್ರತರು, ಕಮ್ಯುನಿಸ್ಟ್ ಪ್ರಭಾವದಿಂದ ಒಗ್ಗೂಡಿದರು. ಅದೇ ರೀತಿ ಮುಂದಿನ ವರ್ಷ ಫೆಬ್ರವರಿಯಲ್ಲಿ ಇಂಡಿಯನ್ ನೇಷನಲ್ ಆರ್ಮಿಯ ಅಬ್ದುಲ್ ರಶೀದ್ ರವರಿಗೆ ಏಳು ವರ್ಷದ ಕಠಿಣ ಶಿಕ್ಷೆಯನ್ನು ವಿಧಿಸಿದಾಗ ಇದೇ ರೀತಿಯ ಸಮರಶೀಲ ರಾಜಕೀಯ ಮತ್ತು ಕೋಮು ಸೌಹಾರ್ದದ ಸ್ಫೋಟ ಕಂಡುಬಂದಿತ್ತು.

13 ಫೆಬ್ರವರಿಯಂದು ಕಲ್ಕತ್ತಾದಲ್ಲಿ ಈ ಹೋರಾಟದಿಂದ ಯಶಸ್ವಿ ಸಾರ್ವತಿಕ ಮುಷ್ಕರ ನಡೆಯಿತು. ಇದೇ ರೀತಿ ಐಕ್ಯತೆಯನ್ನು 29 ಜುಲೈ ರಂದು ಅಂಚೆ ನೌಕರರ ಮುಷ್ಕರಕ್ಕೆ ಬೆಂಬಲವನ್ನು ಎಲ್ಲಾ ಜನ ಸಮೂಹ ವ್ಯಕ್ತಪಡಿಸಿದರು. ಅದು ಸಹ ಕುಪ್ರಸಿದ್ಧ ಕೋಮು ಹತ್ಯಾ ಕಾಂಡಕ್ಕೆ (Nokhali incidence?) 18 ದಿನಗಳ ಮುಂಚೆ. ಐದು ತಿಂಗಳ ನಂತರ ಹಿಂದೂ ಮತ್ತು ಮುಸ್ಲಿಂ ಟ್ರಾಮ್ ನೌಕರರು ಒಗ್ಗೂಡಿ 85 ದಿನಗಳ ಯಶಸ್ವಿ ಮುಷ್ಕರ ನಡೆಸಿದರು. ಆ ಮುಷ್ಕರ ಪ್ರಾರಂಭವಾದ 21 ಜನವರಿ 1947ರಂದು ಕಮ್ಯುನಿಸ್ಟ್ ನಾಯಕತ್ವದಲ್ಲಿ ಪ್ರದರ್ಶನವನ್ನು ವಿದ್ಯಾರ್ಥಿಗಳು ಡಂ-ಡಂ ವಿಮಾನ ನಿಲ್ದಾಣವನ್ನು ಫ್ರಾನ್ಸ್ ನ ಯುದ್ಧ ವಿಮಾನಗಳು ಉಪಯೋಗಿಸುವ ವಿರುದ್ಧ 'ವಿಯಟ್ನಾಂನಿಂದ ತೊಲಗಿ' ಎಂಬ ಘೋಷಣೆಯೊಂದಿಗೆ ಮುಷ್ಕರ ಪ್ರಾರಂಭಿಸಿದರು. 1946, 22 ಫೆಬ್ರವರಿ ರಂದು, ಮುಂಬೈನ RIN ದಂಗೆಗೆ ಬೆಂಬಲವಾಗಿ ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿ ಜತೆ ಸೇರಿ, ಸಿಪಿಐ ಪಕ್ಷವು ಹರತಾಳಕ್ಕೆ ಕರೆ ನೀಡಿತ್ತು. ಆಗ ಈ ಹೋರಾಟಕ್ಕೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ವಿರೋಧ ವ್ಯಕ್ತಪಡಿಸಿತ್ತು. ಆ ಹೋರಾಟವನ್ನು ಸದೆಬಡೆಯಲು ಸೈನ್ಯವನ್ನು ಕರೆಸಲಾಗಿತ್ತು ಮತ್ತು ಎರಡೂ ಕಡೆ ಸಾವು ನೋವು ಉಂಟಾದವು.

ಈ ಎಲ್ಲಾ ಘಟನೆಗಳು, ಒಂದು ಮೂಲಭೂತ ಬಲಹೀನತೆಯಿಂದ ಕೂಡಿದ್ದವು. ಇವೆಲ್ಲವೂ ಸ್ಥಳೀಯ ಕಾರ್ಯಕರ್ತರ ಪ್ರಥಮ ಹೆಜ್ಜೆ ಗಳಾಗಿದ್ದುವು, ಮತ್ತು ಕೇಂದ್ರ ನಾಯಕತ್ವವು ಈ ಹೋರಾಟಗಳ ಯೋಜನೆ,

**ಪಕ್ಷದ ಮಾರ್ಗದರ್ಶಿ ಸಿದ್ಧಾಂತ ಕಾರ್ಮಿಕ ವರ್ಗದ ಕ್ರಾಂತಿಕಾರಿ ಗುಣ ಲಕ್ಷಣವಾಗಿರಲಿಲ್ಲ, ಬದಲಾಗಿ, ಪೆಟ್ಟಿ ಬೂರ್ಜ್ವಾ ಸುಧಾರಣಾವಾದಿ ಬಾಲಂಗೋಚಿ ತನವಾಗಿತ್ತು. ಇದು ಅಂದಿನ ಕಾಲದ ದಸ್ತಾವೇಜುಗಳನ್ನು ಅವಲೋಕಿಸಿದರೆ ಸ್ಪಷ್ಟವಾಗುತ್ತದೆ.**

ಕಾರ್ಯಾಚರಣೆ ಅಥವಾ ಸಮನ್ವಯವನ್ನು ಅಖಿಲ ಭಾರತ ಮಟ್ಟದಲ್ಲಿ ಮಾಡಲು ಏನು ಪ್ರಯತ್ನ ಮಾಡಲಿಲ್ಲ. ಪಕ್ಷದ ಕೇಂದ್ರ ಕಛೇರಿ ಮುಂಬೈನ ಆಯಕಟ್ಟು ಪ್ರದೇಶದಲ್ಲಿ ಇದ್ದರೂ ಸಹ ಈ ಇಂಡಿಯನ್ ನ್ಯಾಷನಲ್ ಆರ್ಮಿ (INA) ನಾಯಕತ್ವ ವಹಿಸಲು ಏನೂ ಪ್ರಯತ್ನ ಮಾಡಲಿಲ್ಲ. ಅಥವಾ ದೇಶದ ವಿವಿಧ ಭಾಗದಲ್ಲಿ ನಡೆಯುತ್ತಿದ್ದ ಇಂಡಿಯನ್ ನ್ಯಾಷನಲ್ ಆರ್ಮಿಯ ವಿರುದ್ಧದ ವಿಚಾರಣೆಗಳ ವಿರುದ್ಧ ಪ್ರದರ್ಶನಗಳನ್ನು ಸಂಘಟಿಸಲು ಯಾವುದೇ ಪ್ರಯತ್ನ ಮಾಡಲಿಲ್ಲ. ಅಖಿಲ ಭಾರತ ನಾಯಕತ್ವವು ಪುನ್ ಪುರ ವಯಲಾರ್ ಮತ್ತು ತೇಭಾಗ ಹೋರಾಟಗಳನು ಆರ್ಥಿಕ ಸ್ಥರದಿಂದ ರಾಜಕೀಯ ಸ್ಥರಕ್ಕೆ ಮಾರ್ಗದರ್ಶನ ನೀಡಲು ಪ್ರಯತ್ನ ಪಡಲೇ ಇಲ್ಲ. ತೆಲಂಗಾಣ ಹೋರಾಟದ ಕೇಂದ್ರ ಸಮಿತಿಯ ಮಧ್ಯ ಪ್ರವೇಶ ತಡವಾಗಿದ್ದು ಗೊಂದಲ ಮಯವಾಗಿದ್ದು, ಬಹುಪಾಲು ನೇತ್ಯಾತ್ಮಕವಾಗಿತ್ತು. ಆ ಪರಿಸ್ಥಿತಿಯನ್ನು 'ಜ್ವಾಲಾಮುಖಿ ಅಂಚಿನಲ್ಲಿ', 'ಕ್ರಾಂತಿಯ ಅಂಚಿನಲ್ಲಿ', ಮುಂತಾಗಿ ವರ್ಣಿಸಿದರೂ ಸಹ ಈ ಪರಿಸ್ಥಿತಿಯಲ್ಲಿ ಸಿಪಿಐ ನಾಯಕತ್ವವು ಘಟನೆಗಳ ಹಿಂದೆ ಓಡುತ್ತಿದ್ದವು. ಎಲ್ಲಾ ಕ್ರಾಂತಿಕಾರಿ ಅಲೆಗಳನ್ನು ರೈತರ ವಿದ್ರೋಹದ ತಳಹದಿ ಮೇಲೆ ಸಂಘಟಿಸಿ, ಒಂದು ಅಖಿಲ ಭಾರತ ಚಳುವಳಿಯನ್ನಾಗಿ ಪರಿವರ್ತಿಸಿ, ಬ್ರಿಟೀಷ್ ಸಾಮ್ರಾಜ್ಯಶಾಹಿ ಮತ್ತು ಭಾರತದ ಪ್ರತಿಗಾಮಿಗಳನ್ನು ಕಿತ್ತೊಗೆಯಲು ಬೇಕಾದ ರಾಜಕೀಯ ಇಚ್ಚಾ ಶಕ್ತಿ ಇವರಲ್ಲಿ ಇರಲಿಲ್ಲ.

ಪಕ್ಷದ ಮಾರ್ಗದರ್ಶಿ ಸಿದ್ಧಾಂತ ಕಾರ್ಮಿಕ ವರ್ಗದ ಕ್ರಾಂತಿಕಾರಿಗುಣ ಲಕ್ಷಣವಾಗಿರಲಿಲ್ಲ, ಬದಲಾಗಿ, ಪೆಟ್ಟಿ ಬೂರ್ಜ್ವಾ ಸುಧಾರಣಾವಾದಿ ಬಾಲಂಗೋಚಿ ತನವಾಗಿತ್ತು. ಇದು ಅಂದಿನ ಕಾಲದ ದಸ್ತಾವೇಜುಗಳನ್ನು ಅವಲೋಕಿಸಿದರೆ ಸ್ಪಷ್ಟವಾಗುತ್ತದೆ.

ಅಗಸ್ಟ್ 1946 ಕೇಂದ್ರ ಸಮಿತಿಯ ನಿರ್ಣಯದ ತಲೆ ಬರಹ, 'ಅಂತಿಮ ಆಘಾತಕೋಸ್ಕರ'ದಲ್ಲಿ ಕಾಂಗ್ರೆಸ್ ಮತ್ತು ಲೀಗ್ ವಿರುದ್ಧ ನ್ಯಾಯೋಚಿತ ವಿಮರ್ಶೆ ಮಾಡಲಾಗಿದೆ. ಅದರಲ್ಲಿ ತಳ ಮಟ್ಟದ ಒತ್ತಡ ಹೆಚ್ಚಾದಲ್ಲಿ ಈ 'ದೇಶ ಭಕ್ತಿ ಶಕ್ತಿಗಳು', ಕಮ್ಯುನಿಸ್ಟರು ಸೇರಿದಂತೆ ಇನ್ನಿತರೆ ಶಕ್ತಿ ಜತೆ ಸೇರಿ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಸಾಧಿಸ ಬಲ್ಲರು ಎಂದು ಹೇಳಲಾಗಿದೆ. ಜೂನ್ 1947 ನಿರ್ಣಯದ ತಲೆಬರಹ, 'ಮೌಂಟ್ ಬ್ಯಾಟನ್ ಪ್ರಶಸ್ತಿ ದಸ್ತಾವೇಜು ಸನ್ನದು ಮತ್ತು ನಂತರ'ದ ಬಗ್ಗೆ ಸರಿಯಾದ ಮೌಲ್ಯ ಮಾಪನ ಮಾಡಲಾಯಿತು. ಅದು ಸಾಮ್ರಾಜ್ಯಶಾಹಿ ನೀತಿಗಳ, ದ್ವಿಮುಖ ನೀತಿಯ ಉತ್ಪನ್ನವಾಗಿತ್ತು. ಅದರಲ್ಲಿ ರಾಷ್ಟ್ರೀಯ ಬೇಡಿಕೆಯಾದ ಅಧಿಕಾರದ ವರ್ಗಾವಣೆ ಬಗ್ಗೆ ರಿಯಾಯಿತಿ ನೀಡುತ್ತಾ, ಜನತೆಯ ಹೋರಾಟಗಳನ್ನು ಛಿದ್ರಗೊಳಿಸಲು ಪ್ರತಿಗಾಮಿ ಶಕ್ತಿಗಳಿಗೆ ಕುಮ್ಮಕ್ಕು ನೀಡಲಾಗುತ್ತಿತ್ತು. ಇದರಿಂದಾಗಿ ನಿಜವಾದ ಸ್ವಾತಂತ್ರ್ಯ ಗಳಿಸಲು ತಡೆ ಉಂಟಾಯಿತು. ಪ್ರಜಾಸತ್ತೆಯ ಬೆಳವಣಿಗೆಯ ಕತ್ತು ಹಿಸುಕಲಾಯಿತು. ಭಾರತದ ಐಕ್ಯತೆ ಮತ್ತು ಸಮಗ್ರತೆಗೆ ತಡೆ ಉಂಟು ಮಾಡಿತು. ಆದಾಗ್ಯೂ ಪಿತೂರಿಯ ಪಾಲು ದಾರರಾಗಿದ್ದ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಗಳನ್ನು 'ರಾಷ್ಟ್ರೀಯ ನಾಯಕತ್ವ', ಎಂದು ಒಪ್ಪಲಾಯಿತು. ನಂತರದಲ್ಲಿ ಈ ಪಕ್ಷಗಳು ನಡೆಸುತ್ತಿದ್ದ ಸ್ಥಳೀಯ ಸರ್ಕಾರಗಳನ್ನು ಬೆಂಬಲಿಸಲು ಒಪ್ಪಲಾಯಿತು.

ಈ ರೀತಿಯ 'ವಿಮರ್ಶಾತ್ಮಕ ಬಾಲಂಗೋಚಿತನ'ವೆಂದು ಹೇಳುವುದಾದರೆ ಅದು ಸಿಪಿಐ ರಾಜಕೀಯವು ಹೋರಾಟದ ಸಮಯದಲ್ಲಿ ಮತ್ತು ಇತಿಹಾಸದಲ್ಲಿ ಅತ್ಯಂತ ಗಮನಾರ್ಹವಾದ ಗುಣಲಕ್ಷಣಗಳೆಂದು ತಿಳಿದುಕೊಳ್ಳಬೇಕು.

**ಯಜಮಾನಿಕೆಗಾಗಿ ಸಂಘರ್ಷದ ಚಾರಿತ್ರಿಕ ಸೋಲು:** ಈಗ ನಾವು ಭಾರತದ ಸ್ವಾತಂತ್ರ್ಯ ಹೋರಾಟದ 25 ವರ್ಷದ ಕಮ್ಯುನಿಸ್ಟ್ ಚಳುವಳಿಯ ಅವಧಿಯ ಪಾತ್ರವನ್ನು ಹೀಗೆ ಹೇಳ ಬಹುದು - ಪ್ರಾರಂಭದಿಂದಲೂ ಸಾಮ್ರಾಜ್ಯಶಾಹಿಯಿಂದ ರಾಷ್ಟ್ರೀಯ ವಿಮೋಚನೆ, ರಾಷ್ಟ್ರೀಯ ಗೌರವ ಮತ್ತು ಸಾರ್ವಭೌಮತ್ವ, ದಮನಿತರ ಸಾಮಾಜಿಕ ಆರ್ಥಿಕ ಉದ್ಧಾರಕ್ಕಾಗಿ, ಸಾಮಾಜಿಕ ನ್ಯಾಯ ಮತ್ತು ದುಡಿಯುವವರ ರಾಷ್ಟ್ರೀಯ ಅಭಿವೃದ್ಧಿ ಬಗ್ಗೆ ಕಮ್ಯುನಿಸ್ಟರು ಗುರುತಿಸಲ್ಪಡುತ್ತಿದರು. ದೇಶದ ಅನೇಕ ಕಡೆ ಕಮ್ಯುನಿಸ್ಟರೆ ರಾಷ್ಟ್ರೀಯ ಚಳುವಳಿಯನ್ನು ಪ್ರಾರಂಭಿಸಿದ್ದರು. ಇದು ಅವರ ಹೆಗ್ಗಳಿಕೆ ಆಗಿತ್ತು. ಟ್ರಾವೆಂಕೋರ, ಕೋಚಿನ್ ಮತ್ತು ಮಲಬಾರ್ ನಲ್ಲಿ ಎ.ಕೆ. ಗೋಪಾಲನ್, ಕೃಷ್ಣನ್ ಪಿಳ್ಳೈ, ಇಎಂಎಸ್ ನಂಬೂದರಿ ಪಾದ್ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷವನ್ನ ಮತ್ತು ಕಾಂಗ್ರೆಸ್ ಚಳುವಳಿಯನ್ನು ಸಹ ಪ್ರಾರಂಭಿಸಿದರು. ಭಾರತ ರಾಷ್ಟ್ರೀಯ ವಿಮೋಚನಾ ಚಳುವಳಿ ಮತ್ತು ದುಡಿಯುವ ವರ್ಗದ ಚಳುವಳಿ (1942-45) ಅವಧಿಯನ್ನು ಬಿಟ್ಟು, ತಮ್ಮ ಎಲ್ಲಾ ತಪ್ಪುಗಳಿದ್ದರೂ ಸಹ, ತಮ್ಮ ಮಹಾನ್ ಹೋರಾಟದ ಮೂಲಕ ರಾಷ್ಟ್ರೀಯ ಹೋರಾಟಗಳಿಗೆ ಒಂದು ಎಡ ದಿಕ್ಕಿನ ಒತ್ತಡವನ್ನು ನೀಡಲು ಸಾಧ್ಯ ವಾಯಿತು. 1925-35 ರ ವರೆಗೆ ಪಂಥ ವಾದಿ ಮಾರ್ಗವನ್ನು ಪಕ್ಷ ಅನುಸರಿಸುತ್ತಿದ್ದರೂ, ಅದು ಅದೇ ಪ್ರಾಮಾಣಿಕ ಆಶೋತ್ತರಗಳನ್ನು ಹೊಂದಿತ್ತು. ಕಾಂಗ್ರೆಸ್ ನಾಯಕರುಗಳು, ಅದರಲ್ಲಿ ಎಡ ನಿಲುವಿನ ನೆಹರು ಮತ್ತು ಬೋಸರವರು ರಾಷ್ಟ್ರೀಯ ಚಳುವಳಿಯನ್ನು ಬುಡಮೇಲು ಮಾಡುತಿದ್ದಾರೆ ಎಂದು ಹೇಳುತ್ತಾ ಅವರನ್ನು ಬಹಿರಂಗ ಪಡಿಸಿ ಅವರನ್ನು ಮೂಲೆ ಗುಂಪು ಮಾಡಬೇಕೆಂದು ಕಮ್ಯುನಿಸ್ಟರ ನಿಲುವಾಗಿತ್ತು. ಆದರೆ ಇದು ಪ್ರಾಮಾಣಿಕ ನಂಬಿಕೆ ಆಗಿದ್ದರೂ, 'ಎಳಸಾದ ಮತ್ತು ವಿಫಲ' ಪ್ರಯತ್ನವಾಗಿತ್ತು. ಇತರ ಸಮಯದಲ್ಲಿ ಸಿಪಿಐಯು ಕಾಂಗ್ರೆಸ್ ಪಕ್ಷದೊಳಗೆ ಇದ್ದು, ಅದನ್ನು 'ಮಾತೃ ಸಂಘಟನೆ', ಎಂದು ಅದರೊಂದಿಗಿನ ಐಕ್ಯತೆಯನ್ನು ಉಳಿಸಿ ಕೊಂಡರು. ಅನೇಕ ಬಾರಿ ತನ್ನ ಅಸ್ತಿತ್ವದ ಉಳಿವಿನ ಬಗ್ಗೆ ಯೋಚನೆ ಮಾಡಿದರು, 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ವಿರೋಧಿಸುತ್ತಾ, ಬೋಸ್ ರವರ ವಿರುದ್ಧ ಅತ್ಯಂತ ಹೀನಾಯ ಟೀಕೆಗಳನ್ನು ಮಾಡಲಾಯಿತು. ಅದರ ಉದ್ದೇಶ ವೈಯಕ್ತಿಕ ದ್ವೇಷ ಅಥವಾ ಸ್ವಾರ್ಥ ಕಾರಣ ಆಗಿರಲಿಲ್ಲ. ಬದಲಾಗಿ, ಭಾರತದ ನೆಲದಲ್ಲಿ ಫ್ಯಾಸಿಸ್ಟ್ ವಿರೋಧಿ ಹೋರಾಟಗಳನ್ನು ಮುನ್ನೆಡಿಸುವ ಪ್ರಾಮಾಣಿಕ ಪ್ರಯತ್ನವಿತ್ತು.

ಹೌದು, ಪ್ರತೀ ಕಮ್ಯುನಿಸ್ಟ್ ಪಕ್ಷದ ಚರಿತ್ರೆಗಳಲ್ಲಿ ತಪ್ಪುಗಳು ಸಹಜ. ಪೇಶಾವರ್ ಮತ್ತು ಕಾನ್ಪುರ್ ಪಿತೂರಿ ಕೇಸ್ ಕಾಲದಿಂದಲೂ, ಅಂದರೆ ಕಮ್ಯುನಿಸ್ಟ್ ಪಕ್ಷದ 1925ರಲ್ಲಿ ಸ್ಥಾಪಿತ ಆಗುವ ಮೊದಲಿನಿಂದಲೂ ಸಹ, ಕಮ್ಯುನಿಸ್ಟರು ರಾಷ್ಟ್ರೀಯ ಮತ್ತು ಸಾಮಾಜಿಕ ಬಿಡುಗಡೆ ಹೋರಾಟಗಳಲ್ಲಿ ಬ್ರಿಟಿಷರು ಮತ್ತು ಕಾಂಗ್ರೆಸ್ ಸರ್ಕಾರದ ದೌರ್ಜನ್ಯವನ್ನು ಅನುಭವಿಸುತ್ತಾ ಬಂದಿದ್ದಾರೆ. ಆದರೆ ಚೀನಾ ಮತ್ತು ವಿಯಟ್ನಾಂ ಸಂಗಾತಿಗಳಂತೆ, ನಾವು ಸ್ವಾತಂತ್ರ್ಯ ಹೋರಾಟದ ಮುಂಚೂಣಿಗೆ ಬರಲಾಗಲಿಲ್ಲ, ಎಲ್ಲಿ ಮೂಲಭೂತ ತಪ್ಪಾಯಿತು?

ಈ ಪ್ರಶ್ನೆ ನಮ್ಮನ್ನು ಸಾಕಷ್ಟು ಸಮಯದಿಂದ ಕಾಡುತ್ತಿದೆ. 1991ರಲ್ಲಿ ನಾವು ಈ ಪ್ರಶ್ನೆಗೆ ಒಂದು ರೀತಿಯ ಉತ್ತರವನ್ನು ನಮ್ಮ ಉದ್ದೇಶಿತ ಭಾರತ ಕಮ್ಯುನಿಸ್ಟ್ ಚಳುವಳಿಯ ಇತಿಹಾಸ, 5-ಸಂಪುಟದ ಭಾಗವಾದ, ಸಂಪುಟ ಒಂದರಲ್ಲಿ ಸಮಾಪ್ತಿ ಅದ್ಯಾಯವನ್ನಾಗಿ ಮಾಡಿದ್ದೆವು. ಅಲ್ಲಿನ ಪುಟ 20ರಲ್ಲಿನ ವ್ಯೂಹಾತ್ಮಕ ಕಣ್ನೋಟ ಆಗಿದೆ ಆ ಮೌಲೀಕರಣದ ಸಂಕ್ಷಿಪ್ತ ವರದಿಯನ್ನು ಚರ್ಚೆಗೆ ಈ ಕೆಳಗೆ ನೀಡಲಾಗಿದೆ:

ಮುಂದಿನ ಚರ್ಚೆಗಾಗಿ ಈ ಕೆಳಗಿನ ಮೌಲ್ಯ ಮಾಪನದ ಸಂಕ್ಷಿಪ್ತ ವಿಚಾರಗಳನ್ನು ಮಂಡಿಸಲಾಗಿದೆ.

ಆ ಕಾಲದಲ್ಲಿ ಕಮ್ಯುನಿಸ್ಟ್ ಚಳುವಳಿಯ ರಣ ನೀತಿ ಹೀಗಿತ್ತು, ಒಂದು ಮುಖ್ಯವಾದ ವೈರುಧ್ಯವು ಏನೆಂದರೆ, ಹೊರಹೊಮ್ಮುತ್ತಿರುವ ಭಾರತ ರಾಷ್ಟ್ರೀಯತೆ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿ ನಡುವೆ ಆಗಿತ್ತು. ಎರಡನೆಯದಾಗಿ ಇದರ ಬೇರೆ ಎರಡು ಮುಖ್ಯ ವೈರುಧ್ಯಗಳು ಹೀಗಿತ್ತು - ಊಳಿಗಮಾನ್ಯ ವ್ಯವಸ್ಥೆ ವಿರುದ್ಧ ವಿಶಾಲ ಜನತೆ ಅಂದರೆ, ನಿರ್ದಿಷ್ಟವಾಗಿ ಭೂಮಾಲೀಕರ ವಿರುದ್ಧ ರೈತರು; ಇನ್ನೊಂದು, ಬ್ರಿಟಿಷ್ ಮತ್ತು ಭಾರತದ ದೊಡ್ಡ ಬೂರ್ಜ್ವಾಗಳು ಒಂದೆಡೆ ಮತ್ತು ಭಾರತದ ದುಡಿಯುವ ವರ್ಗವು ಇನೊಂದೆಡೆ. ಸಿಪಿಐ ಈ ಎಲ್ಲಾ ಮೂರೂ ಸ್ತರಗಳಲ್ಲಿ ಕೆಲಸ ಮಾಡುತ್ತಿತ್ತು. ಆದರೆ ಅದರ ಸೋಲು ಮತ್ತು ಕಾಂಗ್ರೆಸ್ಸನ ವಿಜಯಕ್ಕೇ ಕಾರಣ ಎಲ್ಲಿತ್ತೆಂದರೆ, ರೈತರನ್ನು ಸಂಘಟಿಸುವುದರಲ್ಲಿ ಅವರು ವಿಫಲರಾಗಿದ್ದು. ಇದರಿಂದಾಗಿ ದೇಶದ ಅತಿದೊಡ್ಡ ಭಾಗ ರೈತರು ಸ್ವಾತಂತ್ರ್ಯ ಚಳುವಳಿಯ ಅಂಚಿಗೆ ತಳ್ಳಲ್ಪಟ್ಟರು. ಅಂದರೆ ಅವರು ದೇಶದ ರಾಜಕೀಯ ಜೀವನದಿಂದ ಹೊರತಾದರು.

ಇನ್ನೂ ವಿಸ್ತೃತವಾಗಿ ಹೇಳುವುದಾದರೆ, 1920-30 ದಶಕಗಳಲ್ಲಿ ಬ್ರಿಟೀಷ್ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟವು ಬಹುವರ್ಗ ಚಳುವಳಿ ಯಾಗಿದ್ದು, ಅದು ಹೆಚ್ಚಾಗಿ ಎಲ್ಲಾ ಪದರಗಳನು ಹೊಂದಿದ್ದು, ಬೂಜ್ವಾಗಳ ಯಜಮಾನಿಕೆಯಲ್ಲಿ ನಡೆಯುತ್ತಿತ್ತು. ಅದರಲ್ಲಿ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪ್ರಭಾವ ಕೂಡಾ ಇತ್ತು. ಬೂರ್ಜ್ವಾ ಯಜಮಾನಿಕೆಯ ಗಾಂಧಿಯ 'ರೈತಾಪಿ ಮೌಲ್ಯಗಳು' ಮತ್ತು ನೆಹುರು ರವರ 'ಸಮಾಜವಾದಿ' ಪದಗಳ ಕಲಾಪವು ಸಹ ಇದ್ದವು. ಈ ಯಜಮಾನಿಕೆ ವಿರುದ್ಧ ಕಮ್ಯುನಿಸ್ಟ್ ಚಳುವಳಿ ಒಂದು ಸವಾಲಾಗಿ ಬೆಳೆಯಿತು. ಇದೆಲ್ಲದರ ನಡುವೆ 'ದೇಶ ಪ್ರೇಮಿ ಭಯೋತ್ಪಾದನೆ', ಮತ್ತು ಸ್ವಯಂಪ್ರೇರಿತ ರೈತರ ಮತ್ತು ಆದಿವಾಸಿಗಳ 'ವಿದ್ರೋಹವು' ಕಾಲ ಕಾಲಕ್ಕೆ ಕಂಡಬಂದಿತ್ತು, ಮತ್ತು ಕಾಲ ಕಳೆದಂತೆ ಆ ಧಾರೆಗಳು ಕಳೆದು ಹೋದವು.

ಬೂರ್ಜ್ವಾ ರಾಷ್ಟ್ರವಾದ ಮತ್ತು ಕಮ್ಯುನಿಸಂ ಶಕ್ತಿಗಳು, ಎರಡೂ ಸಹ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳು ಬಹು ವರ್ಗ (multi-class) ಗುಣಲಕ್ಷಣಗಳನ್ನು ಪಕ್ಷವು ಅರ್ಥೈಸ್ ಬೇಕಿತ್ತು. (ಹಾಗಾಗಿ, ಇಬ್ಬರಿಗೂ ಸಂಯುಕ್ತರಂಗದ ದಾರಿ) ಇಬ್ಬರೂ ತಮ್ಮ ವರ್ಗ ನಿಲುವು ಗಟ್ಟಿಮಾಡ ಬೇಕ್ಕಿತ್ತು. ಈ ಧೀರ್ಘ ಕಾಲದ ಐಕ್ಯತೆ ಮತ್ತು ಹೋರಾಟದ ತಾತ್ವಿಕ ಶಿಷ್ಟಾಚಾರವೇ ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೆ ಮುಖ್ಯವಾಗಿತ್ತು, ಆದರೆ ಇಡಿ ನಾಯಕತ್ವವು, ಅದು ಬೂರ್ಜ್ವಾ ಯಜಮಾನಿಕೆ ಅಡಿಯಲ್ಲಿತ್ತು. ಆದರೂ ಅದು ಕಾರ್ಮಿಕರ ಮತ್ತು ಕಮ್ಯುನಿಸ್ಟ್ ಪ್ರಭಾವಕ್ಕೆ ಸಹ ಒಳಗಾಗಿತ್ತು. ಇದುವೆ ಅಂತಿಮವಾಗಿ 1947ರ ಭಾರತ ಗಳಿಸಿದ 'ಅಪೂರ್ಣ ಸ್ವಾತಂತ್ರ್ಯ'ದ ಗುಣಲಕ್ಷಣವಾಗಿತ್ತು.

25 ವರ್ಷಗಳ 'ಐಕ್ಯತೆ ಮತ್ತು ಹೋರಾಟ' ಸ್ವಾತಂತ್ರ್ಯ ಚಳುವಳಿ ವರೆಗೆ ನಡೆಯಿತು. ಎರಡೂ ಮುಖ್ಯ ಶಕ್ತಿಗಳ ತಂತ್ರಗಾರಿಕೆಯಲ್ಲಿನ ತಪ್ಪುಗಳಿಂದ ಹಿನ್ನಡೆ ಅನುಭವಿಸ ಬೇಕಾಯಿತು. ಆಗಾಗ ರಾಷ್ಟ್ರವಾದಿ ನಾಯಕತ್ವ ಅನೇಕ ತಪ್ಪು ನಿರ್ಧಾರಗಳಿಂದ ಜನತೆಯ ಹೋರಾಟದಿಂದ ದೂರ ಉಳಿಯಿತು. ಅದೇ ಕಾಲದಲ್ಲಿ ಸಿಪಿಐ ಸಹ ಬೂರ್ಜ್ವಾಗಳ ದ್ರೋಹವನ್ನು ಎದುರಿಸುವ ಅತಿ ಉತ್ಸಾಹ ತೋರಿತ್ತು. 1942ರಲ್ಲಿ ಅಂತಾರಾಷ್ಟ್ರಿಯ ಕರ್ತವ್ಯವನ್ನು ಯಾಂತ್ರಿಕವಾಗಿ ನಿಭಾಯಿಸುವ ಭರದಲ್ಲಿ ರಾಷ್ಟ್ರೀಯ ಮುಖ್ಯ ದಾರಿಯಿಂದ ಹೊರ ಉಳಿಯ ಬೇಕಾಯಿತು. ಒಟ್ಟಾರೆಯಾಗಿ ಗಾಂಧಿ ಮತ್ತು ನೆಹರು ಹೊಂದಾಣಿಕೆಯಿಂದ ಜನತೆಯ ಹೃದಯ ಮತ್ತು ಮನಸ್ಸಿನಲ್ಲಿ ಕಮ್ಯುನಿಸ್ಟರು ಸ್ಥಾನಗಳಿಸಲು ವಿಫಲರಾದರು. ಗಾಂಧಿಯವರ 'ಸಂತರ' ಆಕರ್ಷಣೆಯು ಭಾವನೆಗಳ ಮಟ್ಟದಲ್ಲಿ ಬಹಳ ಪರಿಣಾಮಕಾರಿಯಾದರೆ,

ನೆಹರುರವರ ನಿರರ್ಗಳ 'ಸಮಾಜವಾದಿ' ಮಾತುಗಳು ಕಮ್ಯುನಿಸ್ಟರ ಪ್ರಯತ್ನಗಳನ್ನು ಬಲಹೀನ ಗೊಳಿಸಿದುವು.

ಇದು ಭಾರತದ ಕಮ್ಯುನಿಸ್ಟರು, ಗಾಂಧಿ ಮತ್ತು ನೆಹರು ವಿರುದ್ಧ ಅನುಭವಿಸಿದ ರಾಜಕೀಯ ಸೋಲನ್ನು ಎತ್ತಿ ಹಿಡಯುತ್ತದೆ. ಗಾಂಧಿಯವರು ತಮ್ಮೊಡನೆ ಭಾರತೀಯ ಸಮಾಜದ ಮುಖ್ಯ ಭಾಗವಾದ ರೈತರನ್ನು ಕರೆದೊಯ್ದರು. ನೆಹರು (ಅನೇಕ ಬಾರಿ ಸುಭಾಷ್ ಬೋಸ್ ರೊಂದಿಗೆ) ಭಾರತದ ಎಡ ಒಲುವಿನ ಕ್ರಾಂತಿಕಾರೀ ಬದಲಾವಣೆಯ ವಾಹಕರಾಗಿದ್ದ ಯುವ ಜನರ ಹೃದಯವನ್ನು ಗೆದ್ದರು. ಅವರಾರು ದುಡಿಯುವ ವರ್ಗದೊಡನೆ ಯಾವುದೇ ಧೃಡ ತಳಹದಿಯನ್ನು ಕಟ್ಟಲಾಗಲಿಲ್ಲ. ಗಾಂಧಿಯವರ ಟ್ರಸ್ಟಿ ಶಿಪ್ (Trusteeship) ಪರಿಕಲ್ಪನೆಯನ್ನು ದುಡಿಯುವ ವರ್ಗವು ತಮ್ಮ ಜೀವನ ಸ್ಥಿತಿಗೆ ಮತ್ತು ಹೋರಾಟಗಳಿಂದಾಗಿ ಒಪ್ಪಿ ಕೊಳ್ಳಲಾಗಲಿಲ್ಲ. ಅವರುಗಳು ಬಹುಪಾಲು ಕಮ್ಯುನಿಸ್ಟರ ಕ್ಷೇತ್ರದಲ್ಲೆ ಉಳಿದರು. ಆದರೆ ಚೀನಾದಂತೆ ಚಳುವಳಿಯ ಮಾರ್ಗವನ್ನು ಕಮ್ಯುನಿಸ್ಟಿಗೆ ನಿರ್ಧರಿಸಲು ಸಾಧ್ಯವಾಗಲಿಲ್ಲ. ಚೀನಾದಲ್ಲಿ ಮಾವೋರವರು ದುಡಿಯುವ ರೈತರ ಕ್ರಾಂತಿಕಾರಿ ಕಾರ್ಮಿಕರ ನೇತೃತ್ವವನ್ನು ಪ್ರತಿನಿಧಿಸಿದ್ದರು.

ಭಾರತದಲ್ಲಿ ಇತಿಹಾಸವು ಗಾಂಧಿಯವರ ಪ್ರತಿಬಿಂಬದಂತೆ ರಚಿಸಲ್ಪಟ್ಟಿತ್ತು. ಗಾಂಧಿಯವರನ್ನು ಆಕರ್ಷಕ ಸುಧಾರಣಾವಾದಿಯನ್ನಾಗಿಸಿ, ಬೂರ್ಜ್ವಾಗಳು ಅವರನ್ನು ತಮ್ಮ ನಾಯಕರೆಂದು ಎತ್ತಿಹಿಡಿದಿದ್ದಾರೆ. ಅಷ್ಟೇ ಅಲ್ಲ ಗಾಂಧಿಯನ್ನು 'ಪಿತಾಮಹ', 'ಮಹಾತ್ಮ' ಎನ್ನಾಲಾಯಿತು. ಇಲ್ಲಿ ಗಮನಿಸ ಬೇಕಾದ ಅಂಶವೆಂದರೆ ಬೂರ್ಜ್ವಗಳು ಪ್ರಜ್ಞಾಪೂರ್ವಕ, ಲೆಕ್ಕಾಚಾರ ಮತ್ತು ಸಂಘಟಿತ ಬೆಂಬಲದಿಂದಲೇ ಈ ಪರಿಸ್ಥಿತಿ ಉಂಟಾಯಿತು. ಇನ್ನೂ ಒಂದು ಕಾರಣವೆಂದರೆ ಬ್ರಿಟೀಷರ ನಿಲುವು, ಅದೇನೆಂದರೆ ಗಾಂಧಿಯು ಸಂಧಾನ ನಡೆಸಲು ಒಬ್ಬ ತಕ್ಕ ನಾಯಕನೆಂದು ಪರಿಗಣಿಸಿತ್ತು. ಗಾಂಧಿಯವರ ಅಹಿಂಸಾತ್ಮಕ ಸತ್ಯಾಗ್ರಹ ರಣನೀತಿ ಯಾವತ್ತೂ ಸಫಲತೆ ಗಳಿಸುವುದಿಲ್ಲ ಎಂದು ಅವರು ತಿಳಿದಿದ್ದರು. ಆದರೆ ಅದು ಇನ್ನೊಂದು ಕತೆ.

ಎಲ್ಲಕ್ಕಿಂತ ಹೆಚ್ಚಾಗಿ ಭಾರತ ಕಾರ್ಮಿಕ ವರ್ಗ ಮತ್ತು ಪಕ್ಷವು, ರೈತಾಪಿ ವರ್ಗದೊಡನೆ ಕ್ರಾಂತಿಕಾರಿ ಐಕ್ಯತೆಯನ್ನು ಕಟ್ಟಲಾಗದೆ ಹೋದದ್ದು. ಹೀಗಾಗಿ ಭಾರತ ಸ್ವಾತಂತ್ರ್ಯ ಹೋರಾಟದ ದಿಕ್ಕನ್ನು ಬದಲಿಸುವ ಮತ್ತು ಅದರ ನಾಯಕರಾಗಲು ಕಮ್ಯುನಿಸ್ಟರಿಗೆ ಸಾಧ್ಯವಾಗಲಿಲ್ಲ. ಸಿಪಿಐ ಪಕ್ಷವು ಸಾಮಾನ್ಯವಾಗಿ ರಾಷ್ಟ್ರೀಯ ವಿಮೋಚನಾ ಚಳುವಳಿಯ ಕೇಂದ್ರ ತಳಹದಿ ಕೃಷಿ ಕ್ರಾಂತಿ ಎಂದು ನಂಬಿದ್ದರು. ಆದರೆ ಅದನ್ನು ಸಾಧಿಸಲು ಅವಶ್ಯವಾದ ನಿರ್ದಿಷ್ಟ ಮಾರ್ಗ, ಸಂಘಟನೆ ರೂಪ ಮತ್ತು ಕಾರ್ಯಶೈಲಿ ಅನ್ನು ರೂಪಿಸಲು ಅದು ವಿಫಲವಾಯಿತು. ಕಮ್ಯುನಿಸ್ಟರು ಸತತವಾಗಿ ಎಲ್ಲಾ ಕೆಲಸ ಮಾಡುತ್ತಿದ್ದರೂ ಉದಾಹರಣೆಗೆ (ಮಲಬಾರಿನಲ್ಲಿ 1930ರ ದಶಕದ ಮಧ್ಯ ಭಾಗದಲ್ಲಿ), ಅಲ್ಲಿ ಗಾಂಧಿವಾದದ ಪ್ರಭಾವ ಮೇಲೆ ಅಂದರೆ ಕಾಲ್ಪನಿಕವಾಗಿ ಇದ್ದಿತ್ತು, ಅಲ್ಲಲ್ಲಿ ಮಾತ್ರ ಹರಡಿತ್ತು.

ಮೊದಲನೆಯದಾಗಿ, ವಸಾಹತು ಅರೆ ವಸಾಹತು ದೇಶಗಳಲ್ಲಿ ರೈತ ರೊಡನೆ ಕಮ್ಯುನಿಸ್ಟ್ ಪಕ್ಷಗಳ ಸಂಭಂದವೇ ಮೂಲಭೂತ ನೀತಿಯ ಪ್ರಶ್ನೆ ಆಗಿದೆ. ಎರಡನೆಯದಾಗಿ, ಅದರ ಸಂಬಂಧ ಬೂರ್ಜ್ವಗಳೊಡನೆ ಮತ್ತು ಅದರ ಪಕ್ಷವಾದ ರಾಷ್ಟ್ರೀಯ ಕಾಂಗ್ರೆಸ್ ನೊಂದಿಗೆ ಆಗಿದೆ.

ಭಾರತ ಕಮ್ಯುನಿಸ್ಟರು ಇಲ್ಲಿ ಚೀನಾದ ಕಮ್ಯುನಿಸ್ಟರಗಿಂತ ಬಹಳ ಸಂಕೀರ್ಣ ಪರಿಸ್ಥಿತಿ ಎದುರಿಸಬೇಕಿತ್ತು. ಕಾಂಗ್ರೆಸ್ ಪಕ್ಷ ಪ್ರಾರಂಭದಲ್ಲಿ ಒಂದು 'ಚಳುವಳಿ' ಆಗಿತ್ತು. ಆದರೆ ಅದು ಪಕ್ಷವಾಗಿರಾಲ್ಲಿಲ್ಲ. ನಂತರದ ಘಟ್ಟದಲ್ಲಿ ಗಾಂಧಿಯವರು ಅದರ ಮೇಲೆ ಹತೋಟಿ ಸಾಧಿಸಿದ ಮೇಲೆ ಅದು ವಿಸ್ತಾರವಾಗಿ, ಅದೊಂದು ಎಲ್ಲಾ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳ ಒಂದು ವಿಶಾಲ ರಾಷ್ಟ್ರೀಯ ರಂಗವಾಯಿತು. ಇದೇ ಕಾರಣಕ್ಕಾಗಿ ಬೂರ್ಜ್ವಗಳು ತಮ್ಮ ಹಿತಾಸಕ್ತಿ ಸಾಧಿಸಿಕೊಳ್ಳಲು ಬದ್ಧರಾಗಿದ್ದರು. ಹೀಗಾಗಿ ಕಾಂಗ್ರೆಸ್ ಎಲ್ಲಾ ಶಕ್ತಿಗಳ ಒಳಗೊಳ್ಳುವಿಕೆ ಎಂಬುದು ಅದರ ಅಂತರ್ಗತ ಗುಣವಾಗಿತ್ತು. ಅಥವಾ ಅದರ ಬಿಡಿಸಲಾಗದ ಗುಣ ಲಕ್ಷಣವಾಗಿತ್ತು. ಅದಕ್ಕೇ, ಗಾಂಧಿ ಅಥವಾ ನೆಹರು ರವರ ಉದಾರತೆ ಕಾರಣ ಆಗಿರಲಿಲ್ಲ. ಅವರುಗಳು ಕಾಂಗ್ರೆಸ್ ಒಳಗೆ ಅನೇಕ ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಶಕ್ತಿಗಳನ್ನು (ಎಡ ಪಂತೀಯರನ್ನು) ಸೇರಿಸಿಕೊಂಡರು. ಅದು ಈ ಎಡ ಪಂತೀಯರ ಸಮರಶೀಲತೆಯನ್ನು ಹದ್ದುಬಸ್ತಿನಲ್ಲಿ ಇಡುವ ಮತ್ತು ರಾಜಕೀಯವಾಗೀ ಜೀರ್ಣಿಸಿಕೊಳ್ಳುವ ತಂತ್ರವೇ ಆಗಿತ್ತು. ಅನೇಕ ಲೇಖಕರು ಗಮನಿಸಿದಂತೆ ಈ ವಿಲೋಮ ಸಂಬಂಧವು ಹೇಗಿತ್ತೆಂದರೆ, ಒಂದೆಡೆ ಕಾಂಗ್ರೆಸ್ ಸಂಘಟನೆ ಗಟ್ಟಿಗೊಳ್ಳುವಿಕೆ ಮತ್ತೊಂದೆಡೆ ಜನತೆಯ ಮಿಲಿಟೆನ್ಸಿ ಮತ್ತು ಕ್ರಾಂತಿಕಾರಿ ರಾಡಿಕಲ್ ಅಂದರೆ ಸಮರಶೀಲತೆ ಮತ್ತು ರಾಜಕೀಯ ಶಕ್ತಿಗಳ ಮುನ್ನಡೆಯು ಸಹ ಆಗಿತ್ತು. ರಾಷ್ಟ್ರವಾದಿ, ಉದಾರವಾದಿ ಸ್ಕೂಲ್ ನ ಚರಿತ್ರಕಾರರು, ಈ ಸಂಬಂಧವನ್ನು ಉದಾಸೀನ ಮಾಡುತ್ತಾರೆ ಮತ್ತು ಕಾಂಗ್ರೆಸ್ - ಸಿಪಿಐ ಸಂಯುಕ್ತ ರಂಗದ ಕಷ್ಟಗಳನ್ನು ಅಸಡ್ಡೆ ಮಾಡುತ್ತಾರೆ. ಅವರುಗಳು ಕಾರ್ಮಿಕ - ರೈತರ WPP (Workers & Peasants Party) ಪಕ್ಷದ ಮಾದರಿಯನ್ನು ಹೊಗಳುತ್ತಾರೆ ಮತ್ತು ಅದರ ಕೊನೆಗೊಳ್ಳುವಿಕೆ ಬಗ್ಗೆ ವಿಷಾಧಿಸುತ್ತಾರೆ. ಏಕೆಂದರೆ ಸಿಪಿಐ ಕಾಂಗ್ರೆಸ್ ನೊಳಗೆ ಲೀನವಾಗುತ್ತಿತ್ತು. ಹೌದು, ನಾವು ಇದರ ಬಗ್ಗೆ ನಮ್ಮದೇ ಆದ ವಿಮರ್ಷೆಯನ್ನು ಮಾಡುತ್ತೇವೆ. ಅದು WPPನ ಏಕಾಏಕಿ ಮತ್ತು ಸಂಪೂರ್ಣವಾಗಿ ನಿಂತು ಹೋದುದರ ಬಗ್ಗೆ ನಮ್ಮದೇ ಆದ ನಿಲುವು ಹೊಂದಿದ್ದೇವೆ. ಆದರೆ ಅದು ಬೇರೆಯೇ ದೃಷ್ಟಿಕೋನ.

ಭಾರತದ ಕ್ರಾಂತಿ ಅಥವಾ ಮಾರ್ಕ್ಸ್ ವಾದ - ಲೆನಿನ್ ವಾದದ ಭಾರತೀಕರಣದ ಬಗ್ಗೆ ಒಂದು ತಾತ್ವಿಕ ನಿಲುವನ್ನು ಬೆಳೆಸಲು ಸಿಪಿಐನ ಪ್ರಯತ್ನ ನಿರಾಶಾದಾಯಕವಾಗಿದೆ. ನಮ್ಮ ನೆರೆಯ ಚೀನಾದಲ್ಲಿ ಮಾವೋ ತ್ಸೇತುಂಗ್ ಅವರು ಪ್ರಾರಂಭದಿಂದಲೂ ಮಾರ್ಕ್ಸ್ ವಾದ - ಲೆನಿನ್ ವಾದವನ್ನು ಚೀನಾದ ಪರಿಸ್ಥಿತಿಗೆ ಹೊಂದಿಸಲು ಸತತವಾಗಿ ದುಡಿದರು. ಈ ರೀತಿಯಾಗಿ ಅವರು ಒಂದು ರೀತಿ ಕಮ್ಯುನಿಸ್ಟ್ ಅಂತರಾಷ್ಟ್ರಿಯದ (Comintern) ನಿಲುವುಗಳನ್ನು ತಂತ್ರಗಾರಿಕೆ ನಿಲುವಿನಲ್ಲಿ ನಿರಾಕರಿಸುತ್ತಲೇ ತಳ್ಳಿಹಾಕಿದರು.

ತದ್ವಿವಿರುದ್ಧವಾಗಿ ಸಿಪಿಐ ನಾಯಕತ್ವ ಯಾವುದೇ ಧೈರ್ಯ, ನಂಬಿಕೆ, ಹಾಗೂ ಸೃಜನಶೀಲತೆ ಹೊಂದಿರಲಿಲ್ಲ. ಆದ್ದರಿಂದ ಯಾವಾಗಲೂ ಭಾರತದ ಕಮ್ಯುನಿಸ್ಟರು ತನ್ನ ಕಾರ್ಯ ನೆಡೆಯಬಗ್ಗೆ Cominternನ ನಿರ್ದೇಶನಗಳನ್ನು ಎದುರು ನೋಡುತುಲೇ ಇತ್ತು. ಈ ರೀತಿಯ ಅತಿ ಅವಲಂಬನೆ ಅಥವಾ ಅಂತರಾಷ್ಟ್ರೀಯ ಸಲಹೆಗಳ ವಿಮರ್ಶಾ ರಹಿತ ಒಪ್ಪಿಕೊಳ್ಳುವಿಕೆಯಿಂದಾಗಿ, 1942ರಲ್ಲಿ ಮಾರಣಾಂತಿಕವಾಗಿ ('ಭಾರತ ಬಿಟ್ಟು ತೊಲಗಿ ಚಳುವಳಿ'ಯಲ್ಲಿ ಭಾಗವಹಿಸಲಿಲ್ಲ) ಇದು ಪರಿಣಮಿಸಿತ್ತು. ಇದೇ ಕಾರಣಕ್ಕಾಗಿ ಒಂದು ಶಕ್ತಿಯುತ ಪಕ್ಷದ ನಾಯಕತ್ವವು ವರ್ಗ ಹೋರಾಟ ಮತ್ತು ಎರಡು ಮಾರ್ಗದ (Two-line struggle) ಸಂಘರ್ಷದ ಮೂಲಕ ಆಗಬೇಕಿತ್ತು. ಆದರೆ ಅದು ಆಗಲಿಲ್ಲ.

**ನಾಯಕತ್ವದ ಸಮಸ್ಯೆಗಳು:** ಭಾರತದಲ್ಲಿ ಕಮ್ಯುನಿಸ್ಟ್ ನಾಯಕತ್ವವು ತನ್ನೆಲ್ಲಾ ಗುಂಪುಗಾರಿಕೆಯಿಂದ ಒಟ್ಟಾರೆ ಸ್ವಾಭಾವಿಕವಾಗಿ ಕೆಳಮಟ್ಟವನ್ನು ತಲುಪಿದವು. ಪಕ್ಷವನ್ನು ಕಟ್ಟಲು ಅವಶ್ಯವಾದ ಸೈಧಾಂತಿಕ ಅಧ್ಯಯನ ರಾಜಕೀಯ ತರಬೇತಿ ಮತ್ತು ಸಂಘಟನಾತ್ಮಕ ಅಭಿಯಾನದ ಪರಿಶೀಲನೆ, ಸದಸ್ಯತ್ವದ ಸಕ್ರಮಗೊಳಿಸುವಿಕೆ ಬಗ್ಗೆ ಬಹಳ ಅಲ್ಪ ಪ್ರಮಾಣದ ಗಮನ ಹರಿಸಲಾಯಿತು. ಆದರೆ ಅದು ಪಕ್ಷ ಕಟ್ಟುವುದನ್ನು ಒಂದು ಮುಖ್ಯ ಕರ್ತವ್ಯವೆಂದು ಪರಿಗಣಿಸಲಿಲ್ಲ.

ಮೇಲಿನ ಅಂಶಗಳು ಮೂಲಭೂತವಾಗಿ 1917-39ರ ಅವಧಿಯ ಬಗ್ಗೆ ಆಗಿದೆ. ಈ ಪ್ರಬಂಧದಲ್ಲಿ ನಮ್ಮ ಮಾತುಗಳನ್ನು ಕೆಳಗಿನಂತೆ ಸೇರಿಸ ಬಹುದು.

ಎರಡನೆ ವಿಶ್ವ ಮಹಾಯುದ್ಧ ಮತ್ತು ನಂತರ ಜನತೆಯ ನಾಯಕತ್ವ ನೀಡಲು ಕಾಂಗ್ರೆಸ್ ಅನ್ನು ಅವಲಂಬಿಸುವ ತನ್ನ ಹಳೇ ಚಾಳಿಯನ್ನೆ ಸಿಪಿಐ ಮುಂದುವರಿಸಿತು. ಅದು ಸಹ ರಾಜ್ಯಗಳಲ್ಲಿ ಇದ್ದ ಕಾಂಗ್ರೆಸ್ ಸರ್ಕಾರಗಳು ನಡೆಸಿದ ದಬ್ಬಾಳಿಕೆ ವಿರುದ್ಧ ಪ್ರತಿಭಟಿಸಲಿಲ್ಲ. ಈ ರೀತಿಯ ಕಾಂಗ್ರೆಸ್ ಮೇಲಿನ ಅವಲಂಬನೆಯಿಂದಾಗಿ ಒಂದು ರೀತಿಯ ನಿಷ್ಕ್ರಿಯತೆಯು ಅಂಗ ಸಂಸ್ಥೆಗಳಲ್ಲಿನ ಕಾರ್ಯಕರ್ತರಲ್ಲಿ ಉಂಟಾಯಿತು. ನಾವು ಇದನ್ನು 'ವಿಮರ್ಶಾತ್ಮಕ (critical) ಬಾಲ ಬಡುಕುತನ'ವೆಂದು ಕರೆಯುತ್ತೇವೆ. ಇದರಿಂದಾಗಿ ಪಕ್ಷವು ಸ್ವತಂತ್ರವಾಗಿ ಮುಂದೆ ಬರುವುದು ಅಥವಾ ಸಮರ ಶೀಲ ಎಡ ಐಕ್ಯತೆ ಕಟ್ಟಿ ಕಾಂಗ್ರೆಸ್ ಅನ್ನು ಎದುರಿಸುವ ಪ್ರಯತ್ನ ಮಾಡಲಿಲ್ಲ.

ಈ ರಾಜಕೀಯ ದಿವಾಳಿ ತನಕ್ಕೆ ಕಾರಣ ಸಿಪಿಐ ಸಿದ್ಧಾಂತ ಬಗ್ಗೆ ಯೂರೋಪ್ ನ ಸಂಗಾತಿಗಳ ಸಹವರ್ತಿ ಅವಲಂಬನೆ ಸಹ ಎಂದು ಒತ್ತಿ ಹೇಳಬೇಕು. ಇದಕ್ಕೆ ಜನತೆ ಮತ್ತು ಅವರ ಸೃಜನಾತ್ಮಕ ಶಕ್ತಿ ಮತ್ತು ಬುದ್ಧಿ ಮತ್ತೆಯಲ್ಲಿ ನಂಬಿಕೆ ಇರದಿರುವುದೆ ಆಗಿದೆ.

ಸದ್ಯಕ್ಕೆ ಇಷ್ಟು ಸಾಕು. ಈ ಆಗಸ್ಟ್ ನಲ್ಲಿ ಇತರ ಕೆಲವರು ಮೇಲೆ ಹೇಳಿದ್ದನ್ನು ನೆನಸಿ ಕೊಳ್ಳುತ್ತಾರೆ. ಆದರೆ ನಾವು ಗಂಭೀರವಾದ ಆತ್ಮಾವಲೋಕನ ಮಾಡಿಕೊಂಡು, ನಾವು ಸ್ವಾತಂತ್ರ್ಯ ಚಳುವಳಿ ಯಲ್ಲಿ ಚಾರಿತ್ರಿಕ ವಿಫಲತೆಗೆ ಮೂಲ ಬೇರುಗಳನ್ನು ಹುಡುಕುವುದು ಅನಿವಾರ್ಯ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ನಾವು ನಮ್ಮ ಮೇಲಿರುವ ಅರೆ ವಸಾಹತುಶಾಹಿ ಗುಲಾಮಗಿರಿ ಬಿಡುಗಡೆಗಾಗಿ ಮಾಡಬೇಕಾದ ಎರಡನೆ ಸಂಗ್ರಾಮದ ಜವಾಬ್ದಾರಿಗೆ ನಾವು ನ್ಯಾಯ ದೊರಕಿಸೋಣ.

ಅದಕ್ಕಾಗಿ ನಾವು ನಮ್ಮಲ್ಲಿ ಹಾಕಿಕೊಳ್ಳಬೇಕಾದ ಪ್ರಶ್ನೆ 'ಈ ತಪ್ಪು ದಾರಿಗಳು ಇತಿಹಾಸ ಮಾತ್ರವೇ?'. ಸ್ಪಷ್ಟವಾಗಿ ಅಲ್ಲಾ. ಹಳೆಯ ಸೈದ್ಧಾಂತಿಕ ತಪ್ಪು ದಾರಿಗಳನ್ನು ಇಂದಿನ ಕಾರ್ಯಚರಣೆಯಲ್ಲಿ ಸರಿಪಡಿಸಬೇಕು. ಇದು ಕಮ್ಯುನಿಸ್ಟರು ಇತಿಹಾಸವನ್ನು ಇಂದಿನ ಪರಿಸ್ಥಿತಿಯಲ್ಲಿ ಸರಿ ಪಡಿಸುವ ವಿಧಾನ. ಇದೇ ನಮ್ಮ ಐತಿಹಾಸಿಕ ಉದ್ದೇಶವಾಗಿದೆ. ಅದು ಎರಡನೇ ಭಾಗದ ಅಧ್ಯಯನ ಇರಬಹುದು. ಇಲ್ಲಾ ನಮ್ಮ ಅನೇಕ ಭಾಗಗಳ ಕೆಲಸವಾಗ ಬಹುದು.

★ **ಅರಿಂದಾಮ್ ಸೇನ್(ಲಿಬರೇಷನ್ ಜುಲೈ 1997)**
**ಅನುವಾದ: ಡಾ । ವಿ. ಲಕ್ಷ್ಮೀನಾರಾಯಣ**

## ಸಂಯುಕ್ತ ಹೋರಾಟ



**ದೇಶವ್ಯಾಪಿ ಕರೆಯ ಮೇರೆಗೆ ಸಂಯುಕ್ತ ಹೋರಾಟದ ವತಿಯಿಂದ 'ದ್ರೋಹ ದಿವಸ' - ಪ್ರತಿಭಟನಾ ಧರಣಿಯನ್ನು ಜುಲೈ 30ರಂದು ಕರ್ನಾಟಕದಲ್ಲೂ ಆಚರಿಸಲಾಯಿತು. ಕನಿಷ್ಠ ಬೆಂಬಲ ಕಾನೂನು ಜಾರಿಗೆ ವಿಳಂಬ, ರೈತರ ಮೇಲಿನ ಸುಳ್ಳು ಮೊಕದ್ದಮೆ ಹಿಂಪಡೆಯಲು ಮತ್ತು ಲಖೀಮಪುರ್ ಹತ್ಯಾಕಾಂಡದ ರೂವಾರಿ ಅಜಯ್ ಮಿಶ್ರಾ ವಜಾಗೆ ಒತ್ತಾಯಿಸುತ್ತಾ ಧರಣಿಯನ್ನು ನಡೆಸಲಾಯಿತು**

# ಚಾರು ಮಜೂಂದಾರ್ 50ನೆಯ ವರ್ಷದ ಸ್ಮರಣೆಯ ದಿನ

2022ರ ಜುಲೈ 28, ನಕ್ಸಲ್‌ಬಾರಿ ರೈತ ಬಂಡಾಯದ ಮಹಾನ್ ಶಿಲ್ಪಿ ಮತ್ತು ಸಿಪಿಐ ಎಂಎಲ್ ಪಕ್ಷದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಯೂ ಆದ ಕಾಮ್ರೇಡ್ ಚಾರು ಮಜೂಂದಾರ್ ಹುತಾತ್ಮರಾದ 50ನೆಯ ವರ್ಷದ ಸ್ಮರಣೆಯ ದಿನ. ಭಾರತದ ಕ್ರಾಂತಿಕಾರಿ ಕಮ್ಯುನಿಸ್ಟ್ ಚಳುವಳಿಗೆ ಕಾಮ್ರೇಡ್ ಚಾರು ಮಜೂಂದಾರ್ ನೀಡಿರುವ ಮಹತ್ತರ ಕೊಡುಗೆಯಿಂದ ಪ್ರೇರಣೆ ಪಡೆಯಲು ಈ ದಿನವನ್ನು ವಿಶೇಷವಾಗಿ ಸ್ಮರಿಸಬೇಕಿದೆ. ಹಾಗೆಯೇ ಅವರು ಸ್ಥಾಪಿಸಿದ ಪಕ್ಷವನ್ನು ಮತ್ತಷ್ಟು ಬಲಪಡಿಸಿ, ಎಲ್ಲ ರೀತಿಯಲ್ಲೂ ಇಂದಿನ ಸವಾಲಿನ ಪರಿಸ್ಥಿತಿಯನ್ನು ಎದುರಿಸುವಂತಹ ಒಂದು ಪಕ್ಷವನ್ನುಇನ್ನೂ ಹೆಚ್ಚಿನ ಶಕ್ತಿಯೊಂದಿಗೆ ಮುನ್ನಡೆಯುವಂತೆ ಶಪಥಗೈಯ್ಯಲು ಈ ಸಂದರ್ಭವನ್ನು ಆಚರಿಸುತ್ತಿದ್ದೇವೆ.

ಬಹಳ ವರ್ಷಗಳ ಕಾಲ ಕಾಮ್ರೇಡ್ ಚಾರು ಮಜೂಂದಾರ್ ಸಿಪಿಐ ಮತ್ತು ಸಿಪಿಎಂ ಪಕ್ಷದೊಳಗೆ ರೈತ ಚಳುವಳಿಯ ಮುಂಚೂಣಿ ಸಂಘಟಕರಾಗಿ ಸಕ್ರಿಯರಾಗಿದ್ದರು. 1940ರಲ್ಲಿ ಅವಿಭಜಿತ ಬಂಗಾಲ ಪ್ರಾಂತ್ಯದಲ್ಲಿ ಶೋಷಿತ ರೈತರ ಐಕ್ಯತೆಯನ್ನು ಸಾಧಿಸಿ, ನಡೆದ ಚಾರಿತ್ರಿಕ ತೇಭಾಗ ಚಳುವಳಿಯ ಮುಖ್ಯಸಂಘಟಕರಲ್ಲಿ ಅವರು ಒಬ್ಬರಾಗಿದ್ದರು. ಆ ಕಾಲದ ಮೂರು ಪ್ರಧಾನ ತೊಡಕುಗಳಾಗಿದ್ದ ಭೂಮಾಲೀಕತ್ವ, ವಸಾಹತುಶಾಹಿ ಮತ್ತು ಕೋಮುವಾದದ ವಿರುದ್ಧ ಪ್ರಗತಿಪರ ಜನಜಾಗೃತಿಯನ್ನು ಮೂಡಿಸಲು ಅವಿರತ ಶ್ರಮಿಸಿದ್ದರು. ನಕ್ಸಲ್‌ಬಾರಿ ಆಂದೋಲನವು ಹಲವು ವರ್ಷಗಳ ನಿರಂತರ ಸಂಘಟನೆ ಮತ್ತು ಪ್ರಜ್ಞಾಪೂರ್ವಕ ಪ್ರಯತ್ನಗಳ ಫಲವಾಗಿದ್ದು, ಇದರ ಮೂಲಕವೇ ತೇಭಾಗ ಹೋರಾಟದ ಸ್ಫೂರ್ತಿಯು ಮರುಹುಟ್ಟು ಪಡೆದಿತ್ತು ಮತ್ತು ಸ್ವಾತಂತ್ರ್ಯೋತ್ತರ ಭಾರತದ ಆರ್ಥಿಕ ಮತ್ತು ಕೃಷಿ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಈ ಪರಂಪರೆಯನ್ನು ಮುಂದುವರೆಸಲು ನೆರವಾಗಿತ್ತು.

ಕಾಮ್ರೇಡ್ ಚಾರು ಮಜೂಂದಾರ್ ರಾಜಕೀಯ ಸನ್ನಿವೇಶವನ್ನು ಗಂಭೀರವಾಗಿ ಗಮನಿಸುತ್ತಿದ್ದುದೇ ಅಲ್ಲದೆ ವರ್ಗ ಸಂಘರ್ಷಕ್ಕೆ ಅದರ ಎಲ್ಲ ಆಯಾಮಗಳಿಂದಲೂ ಹೆಚ್ಚಿನಗಮನ ನೀಡುತ್ತಿದ್ದರು. ಸಾಮಾನ್ಯವಾಗಿ ನೆನೆಗುದಿಗೆ ಬೀಳುವ ಸೈದ್ಧಾಂತಿಕ-ರಾಜಕೀಯ ವಿಚಾರಗಳ ಬಗ್ಗೆಯೂ ಜಾಗ್ರತೆ ವಹಿಸುತ್ತಿದ್ದರು. 1950ರ ದಶಕದಲ್ಲಿ ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಒಂದು ಪ್ರಬಲ ಪ್ರತಿರೋಧದ ಹೋರಾಟವನ್ನು ರೂಪಿಸಲು ಕಾರ್ಯತಂತ್ರಗಳನ್ನು ರೂಪಿಸುತ್ತಿದ್ದ ಸಂದರ್ಭದಲ್ಲಿ, ಭಾರತದಲ್ಲೂ ಕಮ್ಯುನಿಸ್ಟ್ ಪಕ್ಷಗಳ ನಡುವೆ ಈ ಚರ್ಚೆಯು ಗಂಭೀರ ಸ್ವರೂಪ ಪಡೆದಿತ್ತು. ಈ ಸಂದರ್ಭದಲ್ಲಿ ಕಾಮ್ರೇಡ್ ಚಾರು ಮಜೂಂದಾರ್ ಕ್ರಾಂತಿಕಾರಿ ಮಾರ್ಗದ ಪ್ರಬಲ ಪ್ರತಿಪಾದಕರಾಗಿದ್ದರು. ಈ ಹಂತದಲ್ಲೇ 1964ರಲ್ಲಿ ಸಿಪಿಐ(ಎಂ) ಪಕ್ಷಕ್ಕೆ ಸೇರ್ಪಡೆಯಾದ ಚಾರು ಮಜೂಂದಾರ್ ಪಕ್ಷದೊಳಗೇ ತಮ್ಮ ಸೈದ್ಧಾಂತಿಕ ಸಂಘರ್ಷವನ್ನು ಮುಂದುವರೆಸಿದ್ದರು. 1967 ಒಂದು ಉತ್ಕರ್ಷಕಾಲವಾಗಿತ್ತು. ಪಶ್ಚಿಮ ಬಂಗಾಲದಲ್ಲಿ ಪ್ರಪ್ರಥಮ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರವೊಂದು ಅಧಿಕಾರಕ್ಕೆ ಬಂದು, ಕಮ್ಯುನಿಸ್ಟರ ನೇತೃತ್ವದಲ್ಲಿ ಸಮ್ಮಿಶ್ರ ಸರ್ಕಾರವನ್ನು ರಚಿಸಲಾಗಿತ್ತು. ಕಾಮ್ರೇಡ್ ಚಾರು ಮಜೂಂದಾರ್ ಮತ್ತು ಅವರ ಸಂಗಾತಿಗಳು ತಳಮಟ್ಟದಲ್ಲಿ ಕ್ರಾಂತಿಕಾರಿ ರೈತಾಪಿ ಚಳುವಳಿಯನ್ನು ತೀವ್ರಗೊಳಿಸಲು ಪಣತೊಟ್ಟಿದ್ದರು.

ನಕ್ಸಲ್‌ಬಾರಿ ಆಂದೋಲನವು ದೇಶಾದ್ಯಂತ ಕ್ರಾಂತಿಕಾರಿ ಅಲೆಯನ್ನು ಪ್ರವಹಿಸುವ ಏಕೈಕ ಶಕ್ತಿಯಾಗಿ ರೂಪುಗೊಂಡಿತ್ತು. ಕಾಮ್ರೇಡ್ ಚಾರು ಮಜೂಂದಾರ್ ಈ ಕ್ಷಣವನ್ನು ಹೇಗೆ ವಶಪಡಿಸಿಕೊಳ್ಳಬೇಕೆಂದು ನಮಗೆ ದಾರಿ ತೋರಿದ್ದರು. ಈ ಉತ್ಕರ್ಷವು ಅಭೂತಪೂರ್ವ ನೆಲೆಯಲ್ಲಿ ವಿದ್ಯಾರ್ಥಿ-ಯುವಜನ ಸಮುದಾಯದಲ್ಲಿ ಸ್ಫೂರ್ತಿಯನ್ನು ವೃದ್ಧಿಸಿತ್ತು. ಚಾರು ಮಜೂಂದಾರ್ ಅವರ ಕರೆಗೆ ಓಗೊಟ್ಟು ಸಾವಿರಾರು ಯುವ ಕಾರ್ಯಕರ್ತರು ದೇಶದ ಉದ್ದಗಲಕ್ಕೂ, ಗ್ರಾಮೀಣ ಮತ್ತು ನಗರ ಪ್ರದೇಶಗಳಿಂದ ಹೊರಬಂದು ಭೂರಹಿತ ಬಡಜನತೆಯೊಡನೆ ಕೈಜೋಡಿಸಿದ್ದರು. ಇದು ಸಂಘರ್ಷಗಳ ಹೊಸ ಒಮ್ಮುಖ ಬೆಳವಣಿಗೆಗೆ ಪ್ರೇರಣೆಯಾಗಿತ್ತು. ಚಿಂತನೆ ಮತ್ತು ಅನುಭವಗಳ ಹೊಸ ಸಮ್ಮಿಲನಕ್ಕೆ ನಾಂದಿ ಹಾಡಿತ್ತು. ಈ ಸಂದರ್ಭದಲ್ಲೇ ವರ್ಗ ಸಂಘರ್ಷದ ಹೊಸ ವಿಶಾಲ ನೆಲೆಯಲ್ಲಿ ಸಿಪಿಐ(ಎಂಎಲ್) ಪಕ್ಷವು ಉದಯಿಸಿತ್ತು. ಹೊಸ ಪಕ್ಷವು ಉದಯಿಸಿದ ನಂತರ ಅದನ್ನು ನಿರ್ನಾಮ ಮಾಡಲು ತೀವ್ರತರನಾದ ದಬ್ಬಾಳಿಕೆ ನಡೆಸಲಾಯಿತು, ರಕ್ತಪಾತ ನಡೆಸಲಾಯಿತು. ಈ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಲು ಚಾರು ಮಜೂಂದಾರ್ ದಿಟ್ಟತನದಿಂದ, ವಿಶ್ವಾಸದಿಂದ ಮತ್ತು ವಿವೇಕಯುತವಾಗಿ ಮುನ್ನಡೆದಿದ್ದರು.



ಹುತಾತ್ಮರಾಗುವ ಕೆಲವೇ ದಿನಗಳ ಮುನ್ನ ತಮ್ಮ ಅಂತಿಮ ಟಿಪ್ಪಣಿಯಲ್ಲಿ ಚಾರು ಮಜೂಂದಾರ್, ಎಲ್ಲ ರೀತಿಯಲ್ಲೂ ಪಕ್ಷವನ್ನು ಜೀವಂತವಾಗಿರಿಸಲು ಕರೆ ನೀಡಿದ್ದೇ ಅಲ್ಲದೆ, ಜನರೊಡನೆ ನಿಕಟ ಸಂಪರ್ಕ ಸಾಧಿಸುವ ಮೂಲಕ ಆಗ ಉಂಟಾಗಿದ್ದ ಹಿನ್ನಡೆಯನ್ನು ಹಿಮ್ಮೆಟ್ಟಿಸಲು ಕರೆ ನೀಡಿದ್ದರು. ಜನರ ಹಿತಾಸಕ್ತಿಯನ್ನೇ ಪಕ್ಷದ ಪ್ರಧಾನ ಹಿತಾಸಕ್ತಿಯೆಂದು ಪರಿಗಣಿಸುವ ಮೂಲಕ, ನಮ್ಮ ವಿರೋಧಿಗಳೊಡನೆಯೂ ಸಹಕಾರದ ಹಸ್ತ ಚಾಚಿ, ಐಕ್ಯತೆಯನ್ನು ಸಾಧಿಸುವ ಮೂಲಕ ವಿಶಾಲ ಎಡಪಂಥೀಯ ಗುಂಪುಗಳೊಡನೆಯೂ ಐಕ್ಯತೆಯನ್ನು ಸಾಧಿಸಲು ಶ್ರಮಿಸುವಂತೆ ಕರೆ ನೀಡಿದ್ದರು. ಅವರ ಕೊನೆಯ ಸಂದೇಶವೇ ಪಕ್ಷದ ಪುನಾರಚನೆಗೆ ಸ್ಫೂರ್ತಿ ನೀಡಿದ್ದು ಪಕ್ಷದ ಕೇಂದ್ರ ಸಮಿತಿಯು ಚಾರು ಮಜೂಂದಾರ್ ಹುತಾತ್ಮರಾದ ಎರಡನೆ ವರ್ಷದ ಆಚರಣೆಯ ಸಂದರ್ಭದಲ್ಲಿ ಪಕ್ಷವನ್ನು ಪುನಃ ಆರಂಭಿಸಲಾಯಿತು. ಕಳೆದ ಐದು ದಶಕಗಳಲ್ಲಿ ನಾವು ಪಕ್ಷವನ್ನು ಯಶಸ್ವಿಯಾಗಿ ಮುನ್ನಡೆಸಿರುವುದೇ ಅಲ್ಲದೆ ಪ್ರಭುತ್ವದ ದಮನ ಮತ್ತು ದಬ್ಬಾಳಿಕೆಯ ಹಲವು ಹಂತಗಳನ್ನು ದಾಟಿ, ಊಳಿಗಮಾನ್ಯ, ರಾಜಕೀಯ ಹಿಂಸೆಯನ್ನು ಎದುರಿಸಿದ್ದೇವೆ. ಈ ಮಾರ್ಗದಲ್ಲಿ ಉಂಟಾದ ರಾಜಕೀಯ ಹಿನ್ನಡೆ ಮತ್ತು ಸೈದ್ಧಾಂತಿಕ ಸವಾಲುಗಳನ್ನೂ ಯಶಸ್ವಿಯಾಗಿ ಎದುರಿಸಿ ಮುನ್ನಡೆದಿದ್ದೇವೆ.

ಇಂದು ಕಾಮ್ರೇಡ್ ಚಾರು ಮಜೂಂದಾರ್ ಹುತಾತ್ಮರಾದ ಐವತ್ತನೆಯ ವರ್ಷಾಚರಣೆಯ ಸಂದರ್ಭದಲ್ಲಿ ನಾವು ಒಂದು ಅಸಾಮಾನ್ಯ ಸನ್ನಿವೇಶವನ್ನು ಎದುರಿಸುತ್ತಿದ್ದೇವೆ. ಜನತೆಯ ಜೀವನ, ಜೀವನೋಪಾಯ ಮತ್ತು ಸ್ವಾತಂತ್ರ್ಯಗಳಷ್ಟೇ ಅಭದ್ರತೆಯನ್ನು ಎದುರಿಸುತ್ತಿರುವುದಲ್ಲದೆ, ಭಾರತದ ಗಣತಂತ್ರವು ತನ್ನ ಸೆಕ್ಯುಲರ್ ಪ್ರಜಾಪ್ರಭುತ್ವದ ಸಾಂವಿಧಾನಿಕ ಬದ್ಧತೆಯನ್ನು ಕಳಚಿಕೊಳ್ಳುತ್ತಿದೆ. ಫ್ಯಾಸಿಸ್ಟ್ ಹಿಂದೂ ರಾಷ್ಟ್ರದ ಬಿಗಿಮುಷ್ಟಿಯಲ್ಲಿ ಸಿಲುಕುತ್ತಿದೆ. ಕ್ರಾಂತಿಯ ಕನಸನ್ನು ಸಾಕಾರಗೊಳಿಸಲು ಸ್ಥಾಪಿಸಲಾದ ಪಕ್ಷವು ಈಗ ಪರಿಹಾರ ಮಾರ್ಗದ ಮುಂದಾಳತ್ವ ವಹಿಸಬೇಕಿದ್ದು, ಗಣತಂತ್ರವನ್ನು ಪುನಾರಚಿಸುವ ಮೂಲಕ ಈಗ ಎದುರಾಗಿರುವ ಅಭೂತಪೂರ್ವ ವಿನಾಶವನ್ನು ತಪ್ಪಿಸಬೇಕಿದೆ. ಈ ಸವಾಲಿನ ಪರಿಸ್ಥಿತಿಯನ್ನು ಎದುರಿಸಲು ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ನಾವು ಪಕ್ಷವನ್ನು ಸಂಘಟನಾತ್ಮಕವಾಗಿ, ರಾಜಕೀಯವಾಗಿ, ಸೈದ್ಧಾಂತಿಕವಾಗಿ ಬಲಪಡಿಸಬೇಕಿದೆ. ಈ ನಿಟ್ಟಿನಲ್ಲಿ ನಾವು ಒಂದು ಬದ್ಧತೆಯುಳ್ಳ ಪ್ರಾಮಾಣಿಕ ಚಳುವಳಿಯನ್ನು ಮುನ್ನಡೆಸಿ, ಮುಂದಿನ ಫೆಬ್ರವರಿಯಲ್ಲಿ ನಡೆಯಲಿರುವ ಪಕ್ಷದ 11ನೆಯ ಮಹಾಧಿವೇಶನದಲ್ಲಿ ನಮ್ಮ ಯಶಸ್ಸನ್ನು ದಾಖಲಿಸಲು ಶಪಥ ಮಾಡಬೇಕಿದೆ. ಪಕ್ಷದ ಪ್ರತಿಯೊಬ್ಬ ಸದಸ್ಯರೂ, ಪ್ರತಿಯೊಂದು ಶಾಖೆ, ಸಮಿತಿಯೂ ಈ ಸಂದರ್ಭಕ್ಕೆ ಜಾಗೃತಗೊಂಡು ಮಹಾಧಿವೇಶನವನ್ನು ಯಶಸ್ವಿಗೊಳಿಸಲು ಶಪಥ ಮಾಡೋಣ. ★

Kannada Liberation | Monthly Publication
RNI No. KARKAN/2002/07847
Posting at Bengaluru, Karnataka

# ನಮ್ಮ ಕಾರ್ಯಕ್ರಮಗಳು















**CPI(ML) ವತಿಯಿಂದ ಬೆಂಗಳೂರು, ಕೊಪ್ಪಳ, ರಾಯಚೂರು, ಕೊಡಗು ಮತ್ತು ಕೋಲಾರ ಜಿಲ್ಲೆಗಳಲ್ಲಿ ಅಗತಯ್ಯ ದಿನ ಬಳಕೆಯ ಆಹಾರ ದಿನಸಿ ದಾನ್ಯಗಳ ಮೇಲೆ GST ತೆರಿಗೆ, ತರಕಾರಿ, ಹಾಲು, ಮೊಸರು, ಮಜ್ಜಿಗಿ, ಬಡವರು ದಿನನಿತ್ಯ ಬಳಸುವ ಅಹಾರ ಪದಾರ್ಥಗಳ ಮೇಲೆ ವಿಧಿಸಿರುವ GST ತೆರಿಗೆಯ ವಿರುದ್ಧ ಹಾಗು ಅನಿಯಂತ್ರಿತ ಬೆಲೆ ಏರಿಕೆಯನ್ನು ಖಂಡಿಸುತ್ತಾ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿರುದ್ಧ ದಿನಾಂಕ 26.07.2022ರಂದು ರಾಜ್ಯಾದ್ಯಂತ ಪ್ರತಿಭಟನೆಯನ್ನು ನಡೆಸಲಾಯಿತು**

EDITORIAL OFFICE: NO. 19, BHARAT BHAVAN, NO. 35, 1ST FLOOR, OPP. BALAJI PLYWOODS, INFANTRY ROAD, SHIVAJINAGAR, BANGALORE - 01.

Email: cpimlkarnataka@gmail.com
Facebook & Twitter: @CPIMLKar

Printed and Published by Clifton D' Rozario for the State Committee, CPIML (Liberation)
No. 19, Bharat Bhavan, No. 35, First Floor, Opp. Balaji Plywoods, Infantry Road, Shivajinagar, Bangalore - 560 001.

Printed at: Spectrum Printss, #119, Jewellers Street, Tasker Town, Shivaji Nagar, Bengaluru, Karnataka - 560 001.